ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ


BAPU PRAPANCHA

ಕನ್ನಡ - English Monthly


ಸಂಪುಟ – 2 : ಸಂಚಿಕೆ – 8   ನವೆಂಬರ್ 2020   ಪುಟ – 32   ₹ 20/-




ಕರ್ನಾಟಕ ಏಖೀಕರಣ ರೂವಾರಿಗಳು : ರಾಜ್ಯ ಮೈಸೂರನ್ನು – ಕರ್ನಾಟಕ ರಾಜ್ಯವಾಗಿ ವಿಸ್ತರಿಸಿದ ಸನ್ಮಾನ್ಯ ಮುಖ್ಯ ಮಂತ್ರಿಗಳು




ಕೆ. ಸಿ. ರೆಡ್ಡಿ
25.10.1947 – 30.3.1952



ಕೆಂಗಲ್ ಹನುಮಂತಯ್ಯ
30.3.1952 – 19.8.1956



ಕಡಿದಾಳ್ ಮಂಜಪ್ಪ
19.8.1956 – 31.10.1956




ಎಸ್. ನಿಜಲಿಂಗಪ್ಪ
1.11.1956 – 16.5.1958
21.6.1962 – 28.5.1968



ಬಿ. ಡಿ. ಜತ್ತಿ
16.5.1958 – 9.3.1962



ಎಸ್.ಆರ್. ಕಂಠಿ
14.3.1962 – 20.6.1962



ಡಿ. ದೇವರಾಜ ಅರಸು : (20.03.1972 – 31.12.1977) (28.2.1978 – 7.1.1980)

'ಕರ್ನಾಟಕ' ಫಲಕ ಅನಾವರಣ – 1973ರ ನವೆಂಬರ್ ಒಂದನೇ ದಿನಾಂಕದ ಸಾಂದರ್ಭಿಕ ಚಿತ್ರದಲ್ಲಿ ರಾಜ್ಯಪಾಲರಾದ ಮೋಹನ್ ಲಾಲ್ ಸುಖಾಡಿಯ ಹಾಗೂ ಮುಖ್ಯಮಂತ್ರಿ ಡಿ. ದೇವರಾಜ ಅರಸು, ಮತ್ತೆಲ್ಲಾ ಮಂತ್ರಿಗಳು ಶಾಸಕರು



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು : ಡಾ.ವೂಡೇ ಪಿ. ಕೃಷ್ಣ

Chief Editor : **Dr. Wooday P. Krishna**

ಸಂಪಾದಕರು : ಇಂದಿರಾ ಕೃಷ್ಣಪ್ಪ

Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ

Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001

Published by :

Karnataka Gandhi Smaraka Nidhi

Gandhi Bhavana, Kumarapark East

Bengaluru - 560001

Phone : +91 80 22261967, 9738605799

gandhibhavanabengaluru@gmail.com

Design & Print : **CreativeGeekZ**

Yadhava College Road, Madhavanagara

Bengaluru - 560001

Ph : +91 80 40927049

E-mail : mail@creativegeekz.com

ಈ ಸಂಚಿಕೆಯಲ್ಲಿ

ಸಂಪಾದಕೀಯ

ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು,

ಕೋವಿಡ್-19ರ ಇಳಿಕೆಯ ಪ್ರಮಾಣದ ಸಂತಸದೊಂದಿಗೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರಿಗೆ ಕನ್ನಡ ವಿಶ್ವವಿದ್ಯಾಲಯ ಹಂಪಿ ಅವರು 'ನಾಡೋಜ' ಪದವಿ ಪ್ರಧಾನ ಮಾಡಿರುವುದು ಗಾಂಧಿ ಭವನಕ್ಕೆ ಹೆಮ್ಮೆ ಮತ್ತು ಹರ್ಷವನ್ನು ತಂದಿದೆ. ಬಾಪು ಪ್ರಪಂಚ ಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ. ವೂಡೇ ಪಿ. ಕೃಷ್ಣ ಅವರಿಗೆ ಅಭಿನಂದನೆಗಳು.

ಮರಳಿ ಬಂದಿದೆ ಕನ್ನಡ ರಾಜ್ಯೋತ್ಸವ. 65ನೇ ಕನ್ನಡ ರಾಜ್ಯೋತ್ಸವದಂದು, ಕನ್ನಡ ನಾಡು ನುಡಿ ಕಟ್ಟಿದ, ಕನ್ನಡ ಮನಸ್ಸುಗಳನ್ನು ಒಗ್ಗೂಡಿಸಿದ, ಕನ್ನಡ ಗಡಿರೇಖೆಗಳನ್ನು ಕೂಡಿಸಿದ ಕನ್ನಡದ ಬಿಕ್ಕಟ್ಟುಗಳಿಗೆ ಬಲಿಯಾದವರನ್ನು ಸ್ಮರಿಸುವ ದಿನ ಹಾಗೂ ಕನ್ನಡ ನಾಡಿನ ಏಕೀಕರಣದ ರೂವಾರಿಗಳು, ಹೋರಾಟಗಾರರ ಈಡೇರದ ಆಶಯಗಳನ್ನು, ಗುರಿಗಳನ್ನು ಪುರ್ನಮನನ ಮಾಡುತ್ತಾ ಕರ್ನಾಟಕದಲ್ಲಿ ಇಂದಿಗೂ ಸಮಸ್ಯೆಯೇ ಆಗಿರುವ ನದಿನೀರು, ಗಡಿರೇಖೆ, ಉದ್ಯೋಗ, ಕನ್ನಡ ಧ್ವಜ, ಕನ್ನಡಿಗರಿಗೆ ಪ್ರಾತಿನಿಧ್ಯ, ನ್ಯಾಯಾಲಯದಲ್ಲಿ ಕನ್ನಡ, ಪರಭಾಷೆಗಳ ಧಾಳಿ, ಕನ್ನಡ ಆಡಳಿತ ಭಾಷೆ, ಕನ್ನಡ ತಂತ್ರಜ್ಞಾನ, ಕನ್ನಡಿಗರಿಗೆ ಎಲ್ಲಾ ರಂಗದಲ್ಲಿ ಪ್ರೋತ್ಸಾಹದಂತಹ ವಿಷಯಗಳಲ್ಲಿ ನಾವೆಷ್ಟು ನ್ಯಾಯ, ಪರಿಹಾರ, ತೀರ್ಮಾನ, ಸಂಧಾನಗಳ ಮೂಲಕ ಸಮಸ್ಯೆಗಳನ್ನು ಮುಕ್ತಾಯಗೊಳಿಸಿಕೊಂಡಿದ್ದೇವೆಯೇ ಎಂದು ಪ್ರಶ್ನಿಸಿಕೊಂಡಾಗ, ಉತ್ತರ ಶೂನ್ಯವೂ, ಜಟಿಲವೂ ಆಗಿರುವುದು ಕಂಡು ಬರುತ್ತದೆ. ಈ ಎಲ್ಲ ಸವಾಲುಗಳ ಯಶಸ್ಸಿಗೆ ರಾಜಕೀಯ ಬದ್ಧತೆಯು ಪ್ರಮುಖ ಅಂಶವಾಗಿದೆ. ಅಧಿಕಾರ ರಾಜಕಾರಣದಲ್ಲಿ ಕನ್ನಡಕ್ಕೆ ಬದ್ಧರಾದವರು, ಕನ್ನಡಕ್ಕೆ ಅಗ್ರಸ್ಥಾನವೆನ್ನುವವರನ್ನು ಎಲ್ಲಾ ಸ್ತರಗಳಲ್ಲಿ ಜನಪ್ರತಿನಿಧಿಗಳಾಗಿರಬೇಕಾಗುತ್ತದೆ. ಅಂಥಹ ವಾತಾವರಣವನ್ನು ನಾವೆಲ್ಲರೂ ಮಾಡಬೇಕಾಗಿದೆ.

ಎಪ್ಪತ್ತು ರಾಷ್ಟ್ರಗಳ ಸೈನ್ಯಗಳು ಭಾಗವಹಿಸಿದ ಎರಡನೇ ಮಹಾಯುದ್ಧದ ಭೀಕರತೆಗಳೂ 6 ಕೋಟಿಗೂ ಮಿಕ್ಕ ಸಾವು-ನೋವುಗಳ ಆಕ್ರಂದನವು ಬ್ರಹ್ಮಾಂಡದಲ್ಲೆಲ್ಲಾ ಮರು ಧ್ವನಿಸುತ್ತಿರುವಾಗಲೂ, ಅಂಗವೈಕಲ್ಯ, ಬುದ್ಧಮಾಂದ್ಯತೆಯ ಸಂತತಿಗಳು ಕೆಲವು ದೇಶಗಳಲ್ಲಿ ಜನಿಸುತ್ತಿರುವಾಗಲೂ 75 ವರ್ಷಗಳ ನಂತರವೂ ಕೊನೆಗೊಳ್ಳದ ಆಕ್ರಮಣಶೀಲತೆ ಚೀನಾ-ಪಾಕಿಸ್ತಾನಗಳ ಭಾರತದಲ್ಲಿ ಅತಿಕ್ರಮಣಕ್ಕೆ, ಕೊನೆಗೊಳ್ಳದ,- ಇಸ್ರೇಲ್-ಪ್ಯಾಲೆಸ್ಟೇನ್ ಯುದ್ಧಗಳು, ಜನರು ಯುದ್ಧ ಭೀತಿಯಿಂದ ಸಾಗರ ಸಮುದ್ರದ ಹಾದಿ ಕ್ರಮಿಸುತ್ತಾ ಅನಾಥರಾಗಿ ಅಳಿದು ಹೋಗುತ್ತಿರುವುದು, ನೇಪಾಳದ ಮೇಲೆ ಚೀನಾದ ಅತಿಕ್ರಮಣ, ಚೀನಾದ ಮಹತ್ವಾಕಾಂಕ್ಷೆಯ ಅಮೇರಿಕಾದ ಸರಿಸಮಾನದ ಆಧುನಿಕ ಸೇನಾ ಯೋಜನೆಗಳು ನಾಗರೀಕ ಜಗತ್ತಿನ ಸಭ್ಯ ಪ್ರಜೆಗಳನ್ನು ಆತಂಕಕ್ಕೊಡಿದೆ ವಿಶ್ವಸಂಸ್ಥೆ ಸ್ಥಾಪನೆಯಾಗಿ 75 ವರ್ಷಗಳ ನಂತರವೂ ಯುದ್ಧೋನ್ಮಾದ, ಜಗತ್ತಿನ ಹಿರಿಯಣ್ಣನ ಪಟ್ಟಕ್ಕಾಗಿ ಪೈಪೋಟಿ ವಿಶ್ವ ವಿನಾಶದ ಆಲೋಚನೆಗಳನ್ನು ಅಂತಿಮಗೊಳಿಸಲಾಗಲಿಲ್ಲವೇ? 'ಯುದ್ಧ ಬೇಡ-ಶಾಂತಿ ಬೇಕು' ಎಂಬ ಗಾಂಧೀಜಿ ಅವರ ಧ್ವನಿ ವಿಶ್ವದಾದ್ಯಂತ, ಜನರ ಧ್ವನಿಯಾದಾಗಲೇ ಮಾತ್ರ ಯುದ್ಧದ ಸೊಲ್ಲಡಗುತ್ತದೆ.



ಕೋವಿಡ್-19ರ ಪ್ರಮಾಣ ಇಳಿಕೆಯ ಹಾದಿಯಲ್ಲಿರುವುದು ಸಂತೋಷದ ಹೊಂಗಿರಣದ ಹಾಯಿ ಬೀಸಿದಂತಾಗಿದೆ. ಆದರೆ ಲಸಿಕೆ, ಔಷಧಿ, ಚುಚ್ಚುಮದ್ದು ಸಾರ್ವಜನಿಕವಾಗಿ ಬಿಡುಗಡೆ ಆಗಿ ಮಾರುಕಟ್ಟೆಗೆ ಬರುವವರೆಗೂ ಜನರ ಭೀತಿ ಅಳಿಯಲಾರದು. ಆದಷ್ಟು ಶೀಘ್ರವಾಗಿ, ಔಷಧಿಯ ರಾಜಕಾರಣಕ್ಕೆ ತೆರೆ ಎಳೆದು, ಎಲ್ಲರಿಗೂ ಸರ್ವೇ ಸಾಮಾನ್ಯವಾಗಿ ಔಷಧಿ ಸಿಗುವಂತಾದಾಗ ಮಾತ್ರ, ಮತ್ತೆ ಜನವರಿ 2019ರ ಪೂರ್ವಕ್ಕೆ ಜನಜೀವನ ಮರಳಲಿ. ಕೋವಿಡ್ ವರ್ಷ ಕೊನೆಗೊಳ್ಳಲಿ ಎಂದು ಹಾರೈಸೋಣ.

ಟರ್ಕಿಯ ಪ್ರಬಲ ಭೂಕಂಪ, ಫಿಲಿಪೈನ್ಸ್‌ನ ಗೋನಿ ಚಂಡಮಾರುತ, ಇಂಡೋನೇಷ್ಯಾದ ಮೇರೆಯ ಅರಬ್ಬೀ ಸಮುದ್ರದ ಸುನಾಮಿಗಳು, ಭಾರತದಲ್ಲಾದ ಅತಿವೃಷ್ಟಿ, ಪ್ರವಾಹ, ತೀರ ಪ್ರದೇಶಗಳ ಜನಜೀವನದ ಅಸ್ತವ್ಯಸ್ತತೆಯನ್ನು ಅವಲೋಕಿಸಿದಾಗ, ಯೂರೋಪಿನ ಯುವ ಗಾಂಧಿ, ಗ್ರೀಟಾ ಥನ್‌ಬರ್ಗ್‌ಳ 'ನಿಮ್ಮ ಮಕ್ಕಳು, ಮರಿಮೊಮ್ಮಕ್ಕಳಿಗೆ ಈ ಭೂಮಿಯನ್ನು ಉಳಿಸಿಕೊಡಿ' ಎಂಬ ಕೂಗು ಎಲ್ಲೆಡೆ ಮಾರ್ದನಿಸುತ್ತಿರುವುದು ದೃಗೋಚರವಾಗುತ್ತಿದೆ. ಈ ಸಂಕಷ್ಟದ ಸಮಯದಲ್ಲಿ ಪರಿಸರವನ್ನು ಬೆಳೆಸಲು 'ಎಲ್ಲರ ಅಗತ್ಯಗಳಿಗೂ ಸಾಕಾಗುವಷ್ಟು ಸಂಪನ್ಮೂಲ ಈ ವಿಶ್ವದಲ್ಲಿವೆಯೋ ಹೊರತು ಎಲ್ಲರ ದುರಾಸೆಯನ್ನು ತಣಿಸುವಷ್ಟಲ್ಲ' ಎಂಬ ಗಾಂಧೀಜಿ ಅವರ ಅಮೃತವಾಣಿಯನ್ನು ಸರ್ವರೂ ಸ್ಮರಿಸುತ್ತಾ ರಚನಾತ್ಮಕ ಕಾರ್ಯದಲ್ಲಿ ತೊಡಗಬೇಕಿದೆ.

ಎಲ್ಲರಿಗೂ ವಂದನೆಗಳು....

ಜಯ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ !
ಜಯ ಸುಂದರ ನದಿ ವನಗಳ ನಾಡೆ
ಜಯಹೇ ರಸ ಋಷಿಗಳ ಬೀಡೆ !
ಭೂದೇವಿಯ ಮುಕುಟದ ನವಮಣಿಯೆ
ಗಂಧದ ಚೆಂದದ ಹೊನ್ನಿನ ಗಣಿಯೆ !
ರಾಘವ ಮದುಸೂಧರವತರಿಸಿದ
ಭಾರತ ಜನನಿಯ ತನುಜಾತೆ !

ಜನನಿಯ ಜೋಗುಳ ವೇದದ ಘೋಷ
ಜನನಿಗೆ ಜೀವವು ನಿನ್ನಾವೇಷ !
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ !
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ !

- ಕುವೆಂಪು



ರಾಯಚಂದಭಾಯೀ : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಹಿಂದಿನ ಅಧ್ಯಾಯದಲ್ಲಿ ನಾನು ಬೊಂಬಾಯಿಯ ಬಂದರಿನಲ್ಲಿ ಸಮುದ್ರ ಪ್ರಕ್ಷುಬ್ದವಾಗಿದ್ದಿತೆಂದು ಹೇಳಿದೆ. ಅರಬ್ಬಿ ಸಮುದ್ರದಲ್ಲಿ ಜೂನ್, ಜುಲೈ ತಿಂಗಳುಗಳಲ್ಲಿ ಇದೇನೂ ಅಪೂರ್ವವಾದ ವಿಷಯವಲ್ಲ. ಏಡನ್ನಿನಿಂದ ದಾರಿಯುದ್ದಕ್ಕೂ ಸಮುದ್ರದ ಅಲೆಗಳ ಪ್ರಕೋಪವಿದ್ದಿತು. ಹೆಚ್ಚು ಕಡಿಮೆ ಎಲ್ಲ ಪ್ರಯಾಣಿಕರೂ ಕಾಯಿಲೆ ಬಿದ್ದರು. ನಾನೊಬ್ಬ ಮಾತ್ರ ಪೂರ್ಣ ಆರೋಗ್ಯ ಸ್ಥಿತಿಯಲ್ಲಿದ್ದೆ. ಹಡಗಿನ ಮೇಲ್ಭಾಗದಲ್ಲಿ ಇದ್ದು ಬಿರುಗಾಳಿ, ಅಲೆಗಳ ಎರಚಾಟವನ್ನು ಆನಂದದಿಂದ ಅನುಭವಿಸುತ್ತಿದ್ದೆ. ಬೆಳಗಿನ ಊಟದ ವೇಳೆ, ನನ್ನೊಂದಿಗೆ ಒಬ್ಬಿಬ್ಬರು ಮಾತ್ರ ಇರುತ್ತಿದ್ದರು. ನಾವು ಅಂಬಲಿಯ ತಟ್ಟೆಯನ್ನು ತೊಡೆಯ ಮೇಲೆ ಇಟ್ಟುಕೊಂಡು ನಿಧಾನವಾಗಿ ತಿನ್ನುತ್ತಿದ್ದೆವು. ಸ್ವಲ್ಪ ಎಚ್ಚರ ತಪ್ಪಿದರೂ ಸರಿ, ತಟ್ಟೆಯ ಬದಲು ಅಂಬಲಿಯೇ ನಮ್ಮ ತೊಡೆಯ ಮೇಲೆ ಇರುತ್ತಿತ್ತು.

ನನ್ನ ಮಟ್ಟಿಗೆ, ಹೊರಗಿನ ಬಿರುಗಾಳಿ, ನನ್ನ ಮನಸ್ಸಿನಲ್ಲಿ ಏಳುತ್ತಿದ್ದ ಬಿರುಗಾಳಿಯ ಸಂಕೇತವಾಗಿತ್ತು. ಹೊರಗಿನ ಬಿರುಗಾಳಿಯಿಂದ ನಾನು ವಿಚಲಿತನಾಗದೆ ಶಾಂತವಾಗಿದ್ದಂತೆ, ಅಂತರಂಗದ ಬಿರುಗಾಳಿಯಿಂದಲೂ ಶಾಂತನಾಗಿಯೇ ಇದ್ದೆನೆಂದು ಹೇಳಬಲ್ಲೆ. ನಮ್ಮ ಜಾತಿ ಬಂಧುಗಳಿಂದ ಉಂಟಾಗುವ ತಂಟೆಯಂತೂ ನನ್ನೆದುರಿಗೆ ಇದ್ದೇ ಇತ್ತು. ವಕೀಲ ಕೆಲಸವನ್ನು ಪ್ರಾರಂಭಿಸುವುದರಲ್ಲಿ ನನ್ನ ನಿಸ್ಸಹಾಯಕತೆಯನ್ನು ಮೊದಲೇ ಹೇಳಿದ್ದೇನೆ. ನಾನು ಸುಧಾರಕನಾದುದರಿಂದ, ಕೆಲವು ಸುಧಾರಣೆಗಳನ್ನು ಪ್ರಾರಂಭ ಮಾಡುವುದು ಹೇಗೆಂದೂ ಯೋಚಿಸುತ್ತಿದ್ದೆ. ಆದರೆ ಇವೆಲ್ಲವುಗಳಿಗಿಂತ ಇನ್ನೂ ಹೆಚ್ಚು ಕಷ್ಟ ನನಗೆ ಕಾದಿತ್ತು. ನನ್ನನ್ನು ಸಂಧಿಸಲು ನನ್ನ ಹಿರಿಯಣ್ಣ ಬಂದರಿಗೆ ಬಂದಿದ್ದರು. ಅವರು ಆಗಲೇ ಡಾಕ್ಟರ್ ಮೆಹತಾರನ್ನು ಅವರ ಹಿರಿಯ ಅಣ್ಣಂದಿರನ್ನು ಪರಿಚಯ ಮಾಡಿಕೊಂಡಿದ್ದರು. ಡಾಕ್ಟರ್ ಮೆಹತಾ, ನಾನು ಅವರ ಮನೆಯಲ್ಲಿಯೇ ಇರಬೇಕೆಂದು ನನ್ನನ್ನು ಬಲವಂತ ಮಾಡುತ್ತಿದ್ದುದರಿಂದ ನಾವು ಅವರ ಮನೆಗೆ ಹೋದೆವು. ಹೀಗೆ ಇಂಗ್ಲೆಂಡಿನಲ್ಲಿ ಪ್ರಾರಂಭವಾದ ಪರಿಚಯ ವೃದ್ಧಿಹೊಂದಿ ಎರಡೂ ಕುಟುಂಬಗಳ ನಡುವೆ ಶಾಶ್ವತ ಸ್ನೇಹ ನೆಲೆಸಿತು. ತಾಯಿಯನ್ನು ನೋಡಲು ನಾನು ಬಹಳ ಕಾತರನಾಗಿದ್ದೆ. ನನ್ನನ್ನು ಆದರಿಸಿ ಎದೆಗಪ್ಪಿಕೊಳ್ಳಲು, ಆಕೆ ಜೀವಂತಳಾಗಿರಲಿಲ್ಲವೆಂಬುದು ಆಗ ನನಗೆ ತಿಳಿದಿರಲಿಲ್ಲ. ಈಗ ಈ ದುಃಖ ಸಮಾಚಾರವನ್ನು ನನಗೆ ಹೇಳಿದರು. ಪದ್ಧತಿಯ ಪ್ರಕಾರ ಮೃತಸ್ನಾನಾಧಿಗಳನ್ನಾಚರಿಸಿದೆ. ನಾನು ಇಂಗ್ಲೆಂಡಿನಲ್ಲಿರುವಾಗ, ನಮ್ಮ ತಾಯಿ ಸ್ವರ್ಗಸ್ಥರಾದರು ಪರದೇಶದಲ್ಲಿರುವಾಗ ನನಗೆ ದುಃಖವುಂಟುಮಾಡ ಬಾರದೆಂದು ನನ್ನ ಅಣ್ಣ ವಿಷಯವನ್ನು ನನಗೆ ತಿಳಿಸಿರಲಿಲ್ಲ, ತಡವಾದ ಮೇಲೆ ಸುದ್ದಿ ತಿಳಿಸಿದರೂ, ದುಃಖದ ಆಘಾತ ಕಡಿಮೆಯಾಗಲಿಲ್ಲ, ಅದರ ವಿಷಯ ಹೆಚ್ಚು ಹೇಳಬಾರದು. ತಂದೆಯ ಸಾವಿನಿಂದ ಆದುದಕ್ಕಿಂತ ಈ ದುಃಖ ಹೆಚ್ಚಾಗಿತ್ತು. ನಾನು ಕಟ್ಟಿದ ಕನಸಿನ ಗೋಪುರ ಒಡೆದು ಪುಡಿಪುಡಿಯಾಯಿತು. ಆದರೆ ನಾನು ಅತಿಯಾಗಿ ಅತ್ತೂ ಕರೆದೂ ಗೋಳಾಡಲಿಲ್ಲವೆಂದು ಜ್ಞಾಪಕ, ಕಣ್ಣೀರನ್ನೂ ಕೂಡ ತಡೆದುಕೊಂಡು, ನಮ್ಮ ತಾಯಿಯ ಮರಣ ಸಂಭವಿಸಿದಿದ್ದರೆ ಹೇಗೋ ಹಾಗೆ ನನ್ನ ನಿತ್ಯದ ಕಾರ್ಯದಲ್ಲಿ ತೊಡಗಿದೆ.

ಡಾಕ್ಟರ್ ಮೆಹತಾ, ನನಗೆ ಅನೇಕ ಸ್ನೇಹಿತರ ಪರಿಚಯ ಮಾಡಿಸಿದರು. ಅವರ ಪೈಕಿ, ಮೆಹತ ಅವರ ಸಹೋದರರಾದ ರೇವಾಶಂಕರ್ ಜಗಜೀವನ್ ಒಬ್ಬರು. ಅವರಿಗೂ ನಮಗೂ ಬೆಳೆದ ಪ್ರೀತಿ ಜೀವಮಾನ ಪೂರ್ತಿ ನೆಲೆಸಿತು. ಆದರೆ ನಾನು ಮುಖ್ಯವಾಗಿ ಗಮನಕ್ಕೆ ತೆಗೆದುಕೊಳ್ಳಬೇಕಾದ ಪರಿಚಯವೆಂದರೆ ಕವಿ ರಾಯ್‌ಚಂದ್ ಅಥವಾ ರಾಜಚಂದ್ರ ಎಂಬುವರದು. ಆತ, ಡಾಕ್ಟರ್ ಮೆಹತಾ ಅವರ ಒಬ್ಬ ಹಿರಿಯಣ್ಣನ ಅಳಿಯ ಮತ್ತು ರೇವಾಶಂಕರ್ ಜಗಜೀವನರ ಹೆಸರಿನಲ್ಲಿ ನಡೆಯುತ್ತಿದ್ದ ರತ್ನಪಡಿ ವ್ಯಾಪಾರದ ಪಾಲುಗಾರನಾಗಿದ್ದರು. ನನಗೆ ಪರಿಚಯವಾದಾಗ ಆತನ ವಯಸ್ಸು 25ಕ್ಕೆ ಹೆಚ್ಚಿರಲಿಲ್ಲ. ಆದರೆ ಆತನನ್ನು ಮೊದಲಬಾರಿ ನೋಡಿದಾಗಲೇ ನನಗೆ ಆತ ಸಚ್ಚಾರಿತ್ರ್ಯವುಳ್ಳವನು ಮತ್ತು ಜ್ಞಾನಿ ಎಂದು ಮನದಟ್ಟಾಯಿತು. ಆತ ಶತಾವಧಾನಿ (ನೂರಾರು ವಿಷಯಗಳನ್ನು ಏಕಕಾಲದಲ್ಲಿ ಜ್ಞಾಪಕವಿಟ್ಟು ಕೊಳ್ಳುವವ, ಮಾಡುವವ) ಎಂದೂ ಹೆಸರು ಪಡೆದಿದ್ದ. ಡಾಕ್ಟರ್ ಮೆಹತಾ ಅವರು ನಾನು ರಾಮಚಂದ್ರರ ಶತಾವಧಾನದ (ಬುದ್ಧಿಶಕ್ತಿಯು) ಕೆಲವು ನಿದರ್ಶನಗಳನ್ನು ನೋಡಬೇಕೆಂದು ಸೂಚಿಸಿದರು. ನಾನು ನನಗೆ ಗೊತ್ತಿದ್ದ ಯೂರೋಪಿನ ಭಾಷೆಗಳ ಎಲ್ಲ ಶಬ್ದಭಂಡಾರವನ್ನೂ ಆತನ ಎದುರಿಗೆ ಉಚ್ಚರಿಸಿ, ಅವನ್ನೆಲ್ಲ ಮತ್ತೆ ಹೇಳುವಂತೆ ಕೇಳಿದೆ. ಆತ ನಾನು ಯಾವ ಕ್ರಮದಲ್ಲಿ ಹೇಳಿದ್ದೆನೋ ಅದೇ ಕ್ರಮದಲ್ಲಿ ಒಂದನ್ನೂ ತಪ್ಪದೆ ಹೇಳಿದ. ಆತನ ಆ ಸಾಮರ್ಥ್ಯವನ್ನು ನೋಡಿ ನಾನು ಹರ್ಷಗೊಂಡೆನಾದರೂ ಮುಗ್ಧನಾಗಲಿಲ್ಲ. ನಿಜವಾಗಿ ನನ್ನನ್ನು ಮುಗ್ಧಗೊಳಿಸಿದ ವಿಷಯ ಆಮೇಲೆ ಬಂತು. ಅದು ಆತನ ವಿಶಾಲ ಶಾಸ್ತ್ರಜ್ಞಾನ, ನಿರ್ಮಲ ಚಾರಿತ್ರ, ಮತ್ತು ಆತ್ಮದರ್ಶನವನ್ನು ಸಾಧಿಸಬೇಕೆಂಬ ಆತನ ಉತ್ಕಟತೆ: ಆತ, ಆತ್ಮದರ್ಶನವನ್ನು ಪಡೆಯುವುದಕ್ಕಾಗಿಯೇ ಬಾಳುತ್ತಿದ್ದೆನೆಂಬುದು ನನಗೆ ಅನಂತರ ಅನುಭವಕ್ಕೆ ಬಂತು. ಮುಕ್ತಾನಂದರ ಈ ಕೆಳಗಿನ ವಚನಗಳು ಯಾವಾಗಲೂ ಆತನ ನಾಲಿಗೆಯ ಮೇಲೆ ಇರುತ್ತಿದ್ದವು ಹೃದಯದಲ್ಲಿಯೂ ಅಂಕಿತವಾಗಿದ್ದವು.

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ)
ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.
(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಂದಿನ ರಾಜಕೀಯ ಪರಿಸ್ಥಿತಿ

ಗಾಂಧೀಜಿ ಜೈಲಿಗೆ ಹೋದ ನಂತರ ಹೊರಗೆ ದೇಶದಲ್ಲಿ ಅಸಹಕಾರದ ಆಂದೋಲನದ ಕಸುವು ಕುಗ್ಗುತ್ತ ಬಂತು. ಅಲ್ಲಲ್ಲಿ ಜಾತೀಯ ದಂಗೆಗಳು ಮತ್ತೆ ತಲೆ ಎತ್ತಿದವು. ಸಿ. ಆರ್. ದಾಸ್ ಮತ್ತು ಮೋತಿಲಾಲ ನೆಹರು ಮೊದಲಾದ ನಿಸ್ಸೀಮ ದೇಶಭಕ್ತರು ಕೌನ್ಸಿಲ್ ಪ್ರವೇಶ ಮಾಡಿ ಅಲ್ಲಿಯೇ ಅಸಹಕಾರ ಪ್ರಾರಂಭಿಸಬೇಕೆಂಬ ನಿರ್ಧಾರಕ್ಕೆ ಬಂದರು. 1922ರಲ್ಲಿ ಗಯಾದಲ್ಲಿ ಸಿ. ಆರ್. ದಾಸರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಸಿ. ಆರ್. ದಾಸರು ಕಾಂಗ್ರೆಸ್ ಅಧಿವೇಶನ ಮುಗಿದ ಕೂಡಲೆ ತಮ್ಮ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಟ್ಟು 1922ರಲ್ಲಿ ಸ್ವರಾಜ್ಯ ಪಕ್ಷ ಸ್ಥಾಪಿಸಿದರು. ಮುಂದೆ ಬರಬರುತ್ತ ದೇಶದಲ್ಲಿ ವಿಚಾರವಂತ ಜನರಿಂದ ಈ ಪಕ್ಷಕ್ಕೆ ಬೆಂಬಲ ದೊರೆಯತೊಡಗಿತು. 1923ರಲ್ಲಿ ಕಾಕಿನಾಡಾದಲ್ಲಿ ಸೇರಿದ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ಮಹಮ್ಮದಲಿ ಅವರು ವಹಿಸಿದರು. ಈ ಕಾಲಕ್ಕೆ ಕೌನ್ಸಿಲ್ ಪ್ರವೇಶದ ಬಗೆಗೆ ತೀವ್ರ ಭಿನ್ನಾಭಿಪ್ರಾಯಗಳಾಗಿ ಕಾಂಗ್ರೆಸ್ಸಿನಲ್ಲಿ ಎರಡು ಬಣಗಳಾದವು. ಒಂದು ಪರಿವರ್ತನ ಪಕ್ಷ (ಪ್ರೊ. ಚೇಂಜರ್ಸ್), ಇನ್ನೊಂದು ಅಪರಿವರ್ತನ ಪಕ್ಷ (ನೋ ಚೇಂಜರ್ಸ್) ಪರಿವರ್ತನ ಪಕ್ಷದಲ್ಲಿ ಸಿ. ಆರ್. ದಾಸ್ ಮತ್ತು ಮೋತಿಲಾಲ್ ನೆಹರು ಮೊದಲಾದವರೂ ಅಪರಿವರ್ತನ ಪಕ್ಷದಲ್ಲಿ ಬಾಬು ರಾಜೇಂದ್ರ ಪ್ರಸಾದ, ರಾಜಗೋಪಾಲಾಚಾರ್ಯ, ವಲ್ಲಭಭಾಯಿ ಪಟೇಲ್, ಗಂಗಾಧರರಾವ್ ದೇಶಪಾಂಡೆ ಮೊದಲಾದವರೂ ಇದ್ದರು. ಇವರೆಲ್ಲರೂ ನಖಶಿಖಾಂತ ದೇಶಭಕ್ತರೇ ಆಗಿದ್ದರು. ಇದ–ರಿಂದಾಗಿ ಜನರು ಯಾರನ್ನು ಹಿಂಬಾಲಿಸಬೇಕು ಎಂಬುದು ತಿಳಿಯದೆ ಗೊಂದಲದಲ್ಲಿ ಬಿದ್ದಿದ್ದರು. ಇಷ್ಟೇ ಅಲ್ಲ, ಕಾಂಗ್ರೆಸ್ಸೇ ಎಲ್ಲಿ ಒಡೆದುಹೋಗುವುದೋ ಎಂಬ ಭೀತಿಯೂ ತಲೆದೋರಿತು. ಬಹು ಜನರ ಬೆಂಬಲ ಕೌನ್ಸಿಲ್ ಪ್ರವೇಶದ ಪರವಾಗಿಯೇ ಬೆಳೆಯತೊಡಗಿತು. ಇಷ್ಟೇ ಅಲ್ಲ, 1924ರ ಪ್ರಾರಂಭದ ಹೊತ್ತಿಗೆ, ಅಸಹಕಾರದ ಆಂದೋಲನಕ್ಕೂ ಗಾಂಧೀವಾದಕ್ಕೂ ತಿಲಾಂಜಲಿ ಕೊಟ್ಟಂತಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ದೇಶಕ್ಕೆ ಮಾರ್ಗದರ್ಶನ ಮಾಡಲೋ ಏನೋ ಎಂಬಂತೆ ಸೆರೆಮನೆಯಿಂದ ಗಾಂಧೀಜಿಯ ಬಿಡುಗಡೆ ಆಯಿತು. ಯಾವುದೇ ಮಹತ್ವದ ಕಾರ್ಯವನ್ನು ದೊಡ್ಡವರೇ ಪ್ರಾರಂಭಿಸಬಲ್ಲರು. ಮತ್ತು ಅದರಲ್ಲಿ ಬರುವ ಅಡೆತಡೆಗಳನ್ನು ಅವರೇ ನಿವಾರಿಸಬಲ್ಲರು. ಆಗ ಕಾಂಗ್ರೆಸ್ಸಿನಲ್ಲಿ ಉದ್ಭವಿಸಿದ ಮತಭೇದವನ್ನು ಗಾಂಧೀಜಿ ಅಲ್ಲದೆ ಮತ್ತಾರು ನಿವಾರಿಸಬಹುದಿತ್ತು? ಇಂಥ ಪರಿಸ್ಥಿತಿಯಲ್ಲಿ ಗಾಂಧೀಜಿ ಅಂಥವರೇ ಕಾಂಗ್ರೆಸ್ಸಿನ ಅಧ್ಯಕ್ಷರಾಗುವ ಅವಶ್ಯಕತೆ ಇತ್ತು. ಮತ್ತು ಆ ಮೇರೆಗೆ ಗಾಂಧೀಜಿಯೇ 1924ರಲ್ಲಿ ಬೆಳಗಾವಿ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಈ ದೃಷ್ಟಿಯಿಂದ ಬೆಳಗಾವಿ ಕಾಂಗ್ರೆಸ್ಸು ಅಸಹಕಾರದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣವಾದ ಘಟ್ಟವಾಗಿದೆ. ಇದರ ವಿವರ ಮುಂದೆ ಬರುವುದು.

ಈ ಸಂದರ್ಭದಲ್ಲಿ ಎಲ್ಲರನ್ನೂ ಗಾಬರಿಗೊಳಿಸುವಂಥ ಒಂದು ಸುದ್ದಿ ಬಂತು. ಪೂನಾದಲ್ಲಿ ಗಾಂಧೀಜಿಗೆ ಅಪೆಂಡಿಸೈಟಿಸ್ ಕರುಳು ರೋಗಕ್ಕೆ ಶಸ್ತ್ರಚಿಕಿತ್ಸೆ ಎಂದು ಸುದ್ದಿ ಬಂದು, ಸಸೂನ್ ಆಸ್ಪತ್ರೆಯಲ್ಲಿ ಗಾಂಧೀಜಿಗೆ ಈ ಚಿಕಿತ್ಸೆ ನಡೆಯಿತು. ಕರ್ನಲ್ ಮ್ಯಾಡಾಕ್ ಚಿಕಿತ್ಸೆ ನಡೆಸಿದರು. ಚಿಕಿತ್ಸೆ ನಡೆಯುವ ಹೊತ್ತಿಗೆ ಸರಿಯಾಗಿ ವಿದ್ಯುತ್ ದೀಪ ಆರಿಹೋದವು. ದೊಡ್ಡ ಅಪಶಕುನ, ಒಂದು ಕಂದೀಲಿನ ಬೆಳಕಿನಲ್ಲೇ ಚಿಕಿತ್ಸೆ ಮಾಡಿದರು. ದೇವರ ದಯೆ! ಶಸ್ತ್ರಚಿಕಿತ್ಸೆ ಯಶಸ್ವಿ ಆಯಿತು. ಈ ಸುದ್ದಿ ಕೇಳಿ ಕಾಂಗ್ರೆಸ್ ಕಾರ್ಯದರ್ಶಿ ಆಗಿದ್ದ ಗಂಗಾಧರರಾಯರು ಪೂನಾಕ್ಕೆ ಓಡಿದರು. ರೈಲಿಳಿದವರೇ ನೆಟ್ಟಗೆ ಗಾಂಧೀಜಿ ಇದ್ದ ಸಸೂನ್ ಆಸ್ಪತ್ರೆಗೆ ಹೋದರು. ಅವರ ಪರಿಸ್ಥಿತಿ, ಅವರ ಆರೋಗ್ಯ ಸುಧಾರಿಸುತ್ತಿದ್ದುದನ್ನು ಕಂಡು ಆನಂದಪಟ್ಟರು. ಗಾಂಧೀಜಿ ಆಗಿನ್ನೂ ಕೈದಿ. ಅವರ ಮೇಲೆ ಪೊಲೀಸರ ಕಾವಲಿತ್ತು. ಆದರೂ ಅವರನ್ನು ಕಾಣಬಯಸುವ ಬಂಧು–ಬಾಂಧವರನ್ನು ಅವರ ಭೆಟ್ಟಿಗೆ ಬಿಡುತ್ತಿದ್ದರು. ಕೆಲವು ದಿನಗಳ ಮೇಲೆ ಅವರ ಆರೋಗ್ಯ ಉತ್ತಮಗೊಂಡಿತು. ಅಲ್ಲಿಯವರೆಗೂ ಪೂನಾದಲ್ಲೇ ಇದ್ದು, ಆಮೇಲೆ ಊರಿಗೆ ಬಂದರು ಗಂಗಾಧರರಾಯರು.

ಗಾಂಧೀಜಿ ಶಿಕ್ಷೆಯ ಅವಧಿಗಿಂತ ಮೊದಲೇ 5–2–1924ರಂದು ಅನಿರ್ಬಂಧ ಬಿಡುಗಡೆ ಹೊಂದಿದರು. ಮತ್ತೊಮ್ಮೆ ಪ್ರಾಂತೀಯ ಸಭೆ ಹುಬ್ಬಳ್ಳಿಯಲ್ಲಿ ನಡೆದು, ಬೆಳಗಾವಿಯಲ್ಲೇ ಕಾಂಗ್ರೆಸ್ ನಡೆಯಬೇಕೆಂದು ಹಿಂದಿನ ತೀರ್ಮಾನ ಸ್ಥಿರವಾಯಿತು. ಸ್ವಾಗತಾಧ್ಯಕ್ಷರಾಗಿ ಗಂಗಾಧರರಾಯರೇ ಆರಿಸಿ ಬಂದರು. ಮಧ್ವರಾವ್ ಕೆಂಭಾವಿ, ಭೀಮರಾವ್ ಪೋತದಾರ್, ಬಾಬಾ ಸಾಹೇಬ್ ಸೋಮಣ್– ಈ ಮೂವರೂ ಕಾರ್ಯದರ್ಶಿಗಳು. ಅಧಿವೇಶನದ ಕಾಲಕ್ಕೆ ಸ್ವಯಂಸೇವಕರ ಪಥಕವನ್ನು ಕೂಡಿಸುವ ಕೆಲಸವನ್ನು ಡಾ॥ ಹರ್ಡೀಕರರ ಹಿಂದೂಸ್ತಾನಿ ಸೇವಾದಲಕ್ಕೆ ಒಪ್ಪಿಸಿದರು. ಕಾಕಿನಾಡಾದ ಕಾಂಗ್ರೆಸ್ಸಿನಲ್ಲೇ ಹಿಂದುಸ್ತಾನಿ ಸೇವಾದಲ ಜನ್ಮತಾಳಿತ್ತು. ಅದಕ್ಕೂ ಕಾಂಗ್ರೆಸ್ಸಿಗೂ ಒಂದು ನಂಟು ಏರ್ಪಟ್ಟಿತ್ತು. ಸ್ವಾಗತಾಧ್ಯಕ್ಷರಾದ ದೇಶಪಾಂಡೆ ಗಂಗಾಧರರಾಯರ ಆತ್ಮಕಥೆಯಿಂದ ಮುಂದಿನ ಸಂಗತಿಗಳನ್ನು ಎತ್ತಿಕೊಳ್ಳೋಣ.

ಮುಂದುವರೆಯುವುದು...



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)


ಬಲ್ಯಾತಂಡ ಮುದ್ದಮ್ಮ

ಭಾರತ ಸೇನೆಗೆ ವೀರಯೋಧರನ್ನು ಕೊಡುವ ನಾಡೇ ಆಗಿದ್ದ ಅಂದಿನ ಕೊಡಗು ಸಂಸ್ಥಾನದಲ್ಲಿ ಬಲ್ಯಾತಂಡ ಮುದ್ದಮ್ಮ ಅವರು ಜನಿಸಿದವರಾಗಿದ್ದಾರೆ. ಅಂದಿನ ವಿರಾಜಪೇಟೆಯ ಸತ್ಯಾಗ್ರಹ ಶಿಬಿರ 1930ರಲ್ಲಿ ಆಯೋಜಿಸಲಾಗಿತ್ತು. ಶಿಬಿರದ ವೆಚ್ಚಕ್ಕಾಗಿ ರೂ. 10/–ನ್ನು ದೇಣಿಗೆ ನೀಡಬೇಕೆಂದು ಸತ್ಯಾಗ್ರಹಿಗಳು ಮುದ್ದಮ್ಮ ಅವರ ಮನೆಗೆ ಬಂದಿದ್ದರು. ಅದೇ ಅವರಿಗೆ ಪ್ರೇರಣೆಯಾಗಿ, ಇವರು ಸೇಂದಿ ಮಾರಾಟ ಮತ್ತು ಹರಾಜು ವಿರುದ್ಧ ಫಿಕೆಟಿಂಗ್, ಸೇಂದಿ ಅಂಗಡಿಗಳ ಮುಂದೆ ಸತ್ಯಾಗ್ರಹ ನಡೆಸಿದರು. ಕುಡುಕರ ಅವ್ಯಾಚ್ಯ ಶಬ್ದಗಳಿಂದ ವಿಚಲಿತರಾಗದ ಮುದ್ದಮ್ಮ, ಮಹಿಳೆಯರೊಡಗೂಡಿ ಪಿಕೆಟಿಂಗ್ ಮುಂದುವರೆಸಿದ್ದರು. ಈ ಕಾರಣದಿಂದಲೇ ಅವರನ್ನು ಬಂಧಿಸಲಾಯಿತು. ಮತ್ತು ಮೂರು ತಿಂಗಳು ಸೆರೆವಾಸ ಮತ್ತು ರೂ. 100/– ದಂಡ ವಿಧಿಸಲಾಯಿತು. ಪುನಃ ಅವರು ಚಳುವಳಿ ನಡೆಸುವರೆಂಬ ವದಂತಿ ಮೇರೆಗೆ ಅವರ ಮನೆಗೆ ಪೋಲೀಸರ ಬಂದೋಬಸ್ತು ಮಾಡಲಾಗಿತ್ತು. ಆದರೂ ಹಿಂಬಾಗಿಲಿನಿಂದ ಪರಾರಿಯಾದ ಮುದ್ದಮ್ಮ ತೆಲುಗರ ಬೀದಿಯಲ್ಲಿ ಕರಪತ್ರ ಹಂಚುತ್ತಾ ಸಾಗಿದರು. ಮತ್ತೆ ಪೋಲೀಸರಿಂದ ಬಂಧನ, ಐದು ತಿಂಗಳು ಕಣ್ಣಾನೂರು ಜೈಲಿನಲ್ಲಿ ಸೆರೆವಾಸ. ಬಿಡುಗಡೆಯ ನಂತರ 1942ರ ಆಗಸ್ಟ್ 19ರಂದು ವಿರಾಜಪೇಟೆ ಮುನ್ಸಿಫಲ್ ಕೋರ್ಟ್ ಮುಂದೆ ಪಿಕೆಟಿಂಗ್ ನಡೆಸಿದ ಕಾರಣ ಮೂರನೇ ಬಾರಿಗೆ ಮುದ್ದಮ್ಮ ಬಂಧನಕ್ಕೊಳಪಟ್ಟರು. ಮಡಿಕೇರಿ ನ್ಯಾಯಾಲಯದಲ್ಲಿ ವಿಚಾರಣೆ ವೇಳೆಯಲ್ಲಿ, ಸಂಬಂಧಿಯೇ ನ್ಯಾಯಾಧೀಶರಾಗಿದ್ದರೂ, "ಕ್ಷಮೆ ಕೇಳಿದರೆ ಬಿಡುಗಡೆ ಮಾಡಲಾಗುವುದೆಂದು" ಹೇಳಿದರೂ, ಕ್ಷಮೆ ಕೇಳದ ಮುದ್ದಮ್ಮ ಅವರಿಗೆ ಆರು ತಿಂಗಳ ಶಿಕ್ಷೆ, 100ರೂ ದಂಡವನ್ನು ವಿಧಿಸಿ, ವೆಲ್ಲೂರಿನ ಜೈಲಿನಲ್ಲಿ ಬಂಧಿಯಾಗಿಸಿದರು. ಇಂಥಹ ಮುದ್ದಮ್ಮ ಸ್ವಾತಂತ್ರ್ಯ ನಂತರ ಗಾಂಧಿ ಅವರ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಕೊಂಡರು

ಹನುಮಕ್ಕ

ಚಿತ್ರದುರ್ಗ ಜಿಲ್ಲೆಯ ಮರಡಿಹಳ್ಳಿಯ ಹನುಮಕ್ಕ ಅವರು ಅರಣ್ಯ ಸತ್ಯಾಗ್ರಹ ಧ್ವಜ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಗ್ರಾಮಗಳಲ್ಲಿ ತರಬೇತಿ ಶಿಬಿರಗಳ ಆಯೋಜನೆ, ದವಸ ಧಾನ್ಯಗಳ ಸಂಗ್ರಹಣೆ ಹಾಗೂ ಟೆಲಿಫೋನ್ ಬೂತ್ ವಿನಾಶ, ಸೇತುವೆಗಳಿಗೆ ಡೈನಾಮೈಟ್ ಇಡುವುದು ಮುಂತಾದ ಕ್ರಾಂತಿಕಾರಿ ಹೋರಾಟದಲ್ಲೂ ಭಾಗಿಯಾದ ಹನುಮಕ್ಕ ಪೋಲಿಸರ ಲಾಠಿ ಏಟು ಮತ್ತು ಬಂಧನ ತಪ್ಪಿಸಿಕೊಳ್ಳಲಾಗಲಿಲ್ಲ. ಪೋಲಿಸರು ಇವರನ್ನು ಅಜ್ಞಾತ ಸ್ಥಳಕ್ಕೆ ಸ್ಥಳಾಂತರಿಸಿದಾಗ ಆಹಾರವಿಲ್ಲದೆ ನರಳಿ, ಸಂಕಷ್ಟದಿಂದ ಭೂಗತರಾಗಿದ್ದುಕೊಂಡೇ ಹೋರಾಟವನ್ನೂ ಮುಂದುವರಿಸಿದ್ದರು.

ಮುಂದುವರೆಯುವುದು...



ಮೌಲಾನಾ ಅಬ್ದುಲ್ ಕಲಾಂ ಅಜಾದ್ (11.11.1888 – 22.02.1958)

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮಗಾಂಧಿಯವರ ಒಡನಾಡಿಯಾಗಿದ್ದವರಲ್ಲಿ ಮೌಲಾನಾ ಅಬುಲ್ ಕಲಾಂ ಅವರು ಪ್ರಮುಖರಾಗಿದ್ದಾರೆ. ಮೌಲಾನಾ ಅವರ ತಂದೆ ಮೌಲಾನಾ ಸಯ್ಯಿದ್, ತಾಯಿ ಶೇಖಾ ಅಲಿಯಾಸ್ ಅವರಾಗಿದ್ದಾರೆ. ಉರ್ದು, ಹಿಂದಿ, ಅರೇಬಿಕ್, ಪರ್ಶಿಯನ್, ಇಂಗ್ಲಿಷ್ ಭಾಷೆಗಳನ್ನೂ, ಗಣಿತ, ತತ್ತ್ವಶಾಸ್ತ್ರ, ಇತಿಹಾಸ, ಶರಿಯಾತ್ ಮತ್ತು ವಿಜ್ಞಾನವನ್ನು ಕರಗತ ಮಾಡಿಕೊಂಡ ಅಜಾದ್ ಅವರು 12ನೇ ವಯಸ್ಸಿನಲ್ಲಿಯೇ ಅಲ್–ಮಿಸ್ಬಾಹ್ ಎಂಬ ಸಾಪ್ತಾಹಿಕ ಪತ್ರಿಕೆ ಹೊರಡಿಸಿದರು. 1903ರಲ್ಲಿ ಲಿಸ್ಸನ್–ಉಸ್–ಸಿದ್ಕ್ ಎಂಬ ಮಾಸಿಕ ಪತ್ರಿಕೆಯನ್ನೂ ಹೊರತಂದರು. ಉರ್ದು ವಿದ್ವಾಂಸರಾಗಿದ್ದ ಅವರು ತಮ್ಮ ಬರವಣಿಗೆಗಾಗಿ 'ಆಜಾದ್' ಎಂಬ ನಾಮಾಂಕಿತವನ್ನು ಬಳಸುತ್ತಿದ್ದರು. ಮೌಲಾನಾ ಎಂಬುದು ಮನೆತನದ ಹೆಸರು. ಹೀಗಾಗಿ ಅವರು ಮೌಲಾನಾ ಆಜಾದ್ ಎಂದೇ ಪ್ರಸಿದ್ದರು. ಪತ್ರಕರ್ತರಾಗಿ ಬ್ರಿಟಿಷ್ ಆಡಳಿತ ವಿರುದ್ಧ ಬರೆಯುತ್ತಿದ್ದರು. ಖಿಲಾಫತ್ ಚಳುವಳಿಯ ನೇತೃತ್ವ ವಹಿಸಿದ್ದ ಆಜಾದರು ಮಹಾತ್ಮ ಗಾಂಧೀಜಿಯವರ ನಿಕಟವರ್ತಿಗಳಾದರು. ಮಹಾತ್ಮರು ಆಯೋಜಿಸಿದ್ದ ಅಸಹಕಾರ ಚಳುವಳಿಯಲ್ಲಿ ಅತ್ಯಂತ ಕ್ರಿಯಾಶೀಲ ಯುವಕ ಎಂದು ಹೆಸರಾದರು. ಗಾಂಧೀಜಿ ಅವರ 'ಸ್ವದೇಶಿ', 'ಸ್ವರಾಜ್' ಚಿಂತನೆಗಳಿಗೆ ಮಾರು ಹೋಗಿ ಅವರ ಜೊತೆಗೂಡಿದರು. ಅಬ್ದುಲ್ ಕಲಾಂ ಅವರು 1923ರಲ್ಲಿ (35ನೇ ವಯಸ್ಸಿನಲ್ಲಿಯೇ) ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದ ಅತ್ಯಂತ ಕಿರು ವಯಸ್ಸಿನವರಾಗಿದ್ದರು. 1931ರ 'ಧರಾಸಣಾ ಸತ್ಯಾಗ್ರಹ'ದ ಪ್ರಮುಖ ಆಯೋಜಕರಾಗಿದ್ದ ಮೌಲಾನ ಹಲವಾರು ಕಠಿಣ ಸೆರೆವಾಸಗಳನ್ನು ಕಂಡರು. ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಮೂರು ವರ್ಷಗಳನ್ನು ಸೆರೆಮನೆಯಲ್ಲೇ ಕಳೆದರು. ದೇಶದ ಸ್ವಾತಂತ್ರ್ಯದ ಸಮಯದಲ್ಲಿ ದೇಶ ವಿಭಜನೆಯ ಕೂಗನ್ನು ಬೆಂಬಲಿಸದಿದ್ದ ಅವರು, ಭಾರತದ ಪರವಾಗಿಯೇ ಇದ್ದರು. ಹಿಂದೂ ಮುಸ್ಲಿಂ ಭಾವೈಕ್ಯತೆಗೆ ಶ್ರಮಿಸಿದ ಇವರ ಸ್ಮರಣಾರ್ಥ ಭಾರತ ಸರ್ಕಾರ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದೆ.

ಸಂಗ್ರಹ : ಮಹಂತೇಶ್ ಉಜ್ಜಿನಿಕೊಪ್ಪ

ಗಾಂಧೀಜಿಯ ಕೊನೆಯ ಉಪವಾಸಗಳು

(ಲೂಯಿ ಫಿಶರ್ 'ಗಾಂಧಿ' ಪುಸ್ತಕದಿಂದ ಸಂಗ್ರಹ)

ಸೆಪ್ಟೆಂಬರ್ 4 ರಂದು "ನಗರವು 24 ತಾಸುಗಳಿಂದ ಸಂಪೂರ್ಣ ಶಾಂತವಾಗಿದೆ" ಎಂದು ನಗರಸಭೆ ವರದಿ ಮಾಡಿತು. 500 ಪೊಲೀಸರು, ಬ್ರಿಟಿಷ್ ಅಧಿಕಾರಿಗಳು ಕೂಡ, ಕೆಲಸ ಮಾಡುತ್ತಲೇ ಒಂದು ದಿನದ ಸಹಾನುಭೂತಿಪರ ಉಪವಾಸವನ್ನಾಚರಿಸಿದರು. ಕೊಲೆಗಡುಕರು, ಪುಂಡರ ಮುಂದಾಳುಗಳು ಗಾಂಧೀಜಿ ಅವರ ಬಳಿಗೆ ಬಂದು ಕೃಶವಾಗುತ್ತಿದ್ದ ಅವರ ದೇಹವನ್ನು ಕಂಡು ಕಣ್ಣೀರಿಟ್ಟರು; ದುಷ್ಕೃತ್ಯಗಳಿಂದ ದೂರವಿರುವುದಾಗಿ ಅವರು ವಚನವಿತ್ತರು. ವ್ಯಾಪಾರಿಗಳು ಮತ್ತು ಕೆಲಸಗಾರರು ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ಶಿಷ್ಟಮಂಡಲಗಳು ಕಲಕತ್ತೆಯಲ್ಲಿ ಇನ್ನು ಮುಂದೆ ಏನೂ ಗೊಂದಲವಾಗುವುದಿಲ್ಲವೆಂದು ಗಾಂಧೀಜಿ ಸಮ್ಮುಖದಲ್ಲಿ ಶಪಥಗೈದರು. ಗಾಂಧೀಜಿ ಅವರನ್ನು ನಂಬಿದರು, ಆದರೆ ಈ ಬಾರಿ ಆಶ್ವಾಸನೆಯನ್ನು ಬರೆಹದಲ್ಲಿ ಬಯಸಿದರು ಮತ್ತು ಅವರು ಅದಕ್ಕೆ ಅಂಕಿತ ಹಾಕುವ ಮೊದಲು, "ನಿಮ್ಮ ಶಪಥವನ್ನು ನೀವು ಮುರಿದರೆ ಆಗ ನಾನು ಮರಣದಲ್ಲಿ ಮುಕ್ತಾಯವಾಗುವ, ಹಿಂಪಡೆಯಲು ಬಾರದ ಉಪವಾಸವನ್ನು ಪ್ರಾರಂಭಿಸುವೆನು ಎಂದು ನಿಮಗೆ ತಿಳಿದಿರಲಿ" ಎಂದು ಹೇಳಿದರು. ಅವರೆಲ್ಲ ಚರ್ಚಿಸಿ ಲಿಖಿತ ಆಶ್ವಾಸನಕ್ಕೆ ಅಂಕಿತ ಹಾಕಿದರು. ಆಗ ಗಾಂಧೀಜಿ ತಮ್ಮ 72 ತಾಸುಗಳ ಉಪವಾಸವನ್ನು ಮುರಿದರು. ಆ ದಿನದಿಂದ, ಅನೇಕ ತಿಂಗಳುಗಳವರೆಗೆ ಪಂಜಾಬ್ ಹಾಗೂ ಇನ್ನಿತರ ರಾಜ್ಯಗಳಲ್ಲಿ ಧಾರ್ಮಿಕ ಹತ್ಯಾಕಾಂಡಗಳು ನಡೆಯಲಿಲ್ಲ. ಕಲಕತ್ತಾ ಮತ್ತು ವಿಭಕ್ತ ಬಂಗಾಲದ ಹಿಂದೂ-ಮುಸ್ಲಿಂರು ದಂಗೆಯಿಂದ ಅಲಿಪ್ತವಾಗಿ ಉಳಿದರು. ಮಹಾತ್ಮರಿಗಿತ್ತ ವಚನವನ್ನು ಬಂಗಾಲವು ಪಾಲಿಸಿತು. ಸೆಪ್ಟೆಂಬರ್ 7 ರಂದು ಗಾಂಧೀಜಿ ಕಲ್ಕತ್ತೆಯಿಂದ ಪಂಜಾಬ್‌ಗೆ ಹೊರಟರು. ಮಾರ್ಗದಲ್ಲಿ ದಿಲ್ಲಿಯಲ್ಲಿ ರೈಲು ನಿಂತಾಗ ಪಟೇಲರು, ಆರೋಗ್ಯ ಮಂತ್ರಿ ಅಮೃತ್‌ಕೌರ್ ಮುಂತಾದವರು ಗಾಂಧೀಜಿ ಅವರನ್ನು ಭೇಟಿಯಾಗಿ ದಿಲ್ಲಿಯಲ್ಲಿ ದಂಗೆಗಳು, ಕೋಲಾಹಲಗಳು ನಡೆದಿವೆ ಎಂದು ಸುದ್ದಿಯನ್ನು ತಿಳಿಸಿದರು. ಗಾಂಧೀಜಿ ಗಾಡಿಯಿಂದಿಳಿದರು. ಅಸ್ಪೃಶ್ಯರ ಗುಂಪಿನಲ್ಲಿ ಪುಂಡರು ಸೇರಿದ್ದಾರೆ. ಅಲ್ಲಿ ನೀವು ಸುರಕ್ಷಿತವಾಗಿರಲಾರಿರಿ ಎಂದು ಮಿತ್ರಬಳಗದವರು ಹೇಳಿದರು. ಆದುದರಿಂದ ಅವರು ಬಿರ್ಲಾ ಭವನದಲ್ಲಿ ತಂಗಿದರು. ದಂಗೆಯಿಂದ ಹೊಸ ಮತ್ತು ಹಳೆಯ ದಿಲ್ಲಿಯ ಸಂಪರ್ಕ ಮಾರ್ಗಗಳು ಹಾಳಾಗಿದ್ದವು, ಹಾಲು, ಹಣ್ಣು, ಕಾಯಿಪಲ್ಯ ಸಿಗುತ್ತಿರಲಿಲ್ಲ. ನಗರ ಸ್ಮಶಾನದಂತೆ ಗೋಚರಿಸುತ್ತಿತ್ತು. ಗುಂಪುಗುಂಪಾಗಿ ಜನ ದಿಲ್ಲಿಯಲ್ಲಿ ತುಂಬಿಕೊಳ್ಳುತ್ತಿದ್ದರು. ದಿಲ್ಲಿಯ ಪಂಜಾಬ್‌ನ ಸಿಖ್ ನಿರಾಶ್ರಿತರು, ಪಂಜಾಬ್‌ನಲ್ಲಿ ಮುಸ್ಲಿಮರು ನಡೆಸಿದ ದೌರ್ಜನ್ಯ, ಹಿಂಸೆಗಳ ಸತ್ಯ ಮತ್ತು ಉತ್ಪ್ರೇಕ್ಷೆ ಕಥೆಗಳನ್ನು ಹೇಳುತ್ತ ದಿಲ್ಲಿಯ ಮುಸ್ಲಿಮರನ್ನು ಉತ್ತೇಜಿಸಿದರು; ಬೀದಿಬೀದಿಗಳಲ್ಲಿ ಮೃತ್ಯುವಿನ ತಾಂಡವ. ಯಾರ ಜೀವದ ನೆಚ್ಚಿಗೆಯೂ ಇರಲಿಲ್ಲ.

ಮುಂದುವರಿಯುವುದು..

ಸೌಜನ್ಯ : ಕಸ್ತೂರಿ, ಅಕ್ಟೋಬರ್ 2020ರ ಸಂಚಿಕೆಯಿಂದ
ಸಂಗ್ರಹ : ನಳಿನಾ ಡಿ – ಪತ್ರಕರ್ತರು, ಕವಿಗಳು



ಸರ್ವಧರ್ಮ ಸಮನ್ವಯತೆ

– ಡಾ. ಎಚ್.ಎಸ್. ದೊರೆಸ್ವಾಮಿ

ವಿವಿಧತೆ ನಡುವಿನ ಹೊಂದಾಣಿಕೆಯೇ ಧರ್ಮ: ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ

ಆದರೆ ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರವನ್ನು ಛಿದ್ರಗೊಳಿಸುವ ಪ್ರವೃತ್ತಿ ಭಾರತದ ಅನೇಕ ಕಡೆ ತಲೆ ಎತ್ತಿದೆ. ಹಲವು ಹತ್ತು ವೈರುಧ್ಯತೆಗಳ ನಡುವೆಯೂ 'ಹಿಂದು' ಎಂಬ ಒಂದು ಚೌಕಟ್ಟಿನಡಿ ಒಟ್ಟುಗೂಡಿಸಬಲ್ಲ, ಈ ನೆಲದ ಬಹುಸಂಖ್ಯಾತ ಜನರ ಮುಗ್ಧತೆಯನ್ನು ರಾಜಕೀಯ ಕಾರಣಗಳಿಗಾಗಿ ದುರ್ಬಳಕೆ ಮಾಡಿಕೊಳ್ಳುವ ಶಕ್ತಿಗಳಿಂದಾಗಿ ಇವತ್ತು, ಇತಿಹಾಸದ ಆ ಮಹನೀಯರೆಲ್ಲ ನಮಗೆ ಬೋಧಿಸಿಹೋದ ಸಾಮರಸ್ಯ, ಸೌಹಾರ್ದತೆಗಳು ಅಪಾಯದ ಅಂಚಿಗೆ ಬಂದು ತಲುಪಿವೆ. ಹಿಂದುಗಳೆಲ್ಲ ಸಾರಾಸಗಟಾಗಿ ಈ ಪ್ರವೃತ್ತಿಯನ್ನು ಸ್ವಾಗತಿಸುತ್ತಿಲ್ಲ. ಕೆಲವರು ಮಾತ್ರ ಈ ಸಮೂಹ ಸನ್ನಿಗೆ ಇಂಬುಗೊಡುತ್ತಿದ್ದಾರೆ. ಬಹುಸಂಖ್ಯೆಯ ಹಿಂದುಗಳು ಈ ಮನೋಭಾವವನ್ನು ಒಪ್ಪುವುದಿಲ್ಲ. ಕೋಮು ಘರ್ಷಣೆ ಈಗ ಬಹುರೂಪ ತಾಳುತ್ತಿದೆ. ಗೋವನ್ನು ನೆಪವಾಗಿಟ್ಟುಕೊಂಡು ಅದರ ಸಾಗಾಣಿಕೆ ಮಾಡುವವರನ್ನು ಬರ್ಬರವಾಗಿ ಕೊಲ್ಲುವ ಪ್ರಕರಣಗಳು ನಡೆದಿವೆ. ಬೇರೆ ಬೇರೆ ಧರ್ಮದ ಹುಡುಗ, ಒಬ್ಬ ಹುಡುಗಿಯ ಜತೆಗೆ ಹೋಗುತ್ತಿದ್ದರೆ, ಬೀದಿಯಲ್ಲಿ ನಿಂತು ಮಾತನಾಡುತ್ತಿದ್ದರೆ, ಅವರನ್ನು ಬೆದರಿಸುವ, ಹೊಡೆಯುವ, ಕೊಲ್ಲುವ ಘಟನೆಗಳೂ ಹೆಚ್ಚುತ್ತಿವೆ. ಸಮಾಜದ ಒಂದು ವಿಭಾಗ ಇನ್ನುಳಿದ ವಿಭಾಗಗಳ ಮೇಲೆ ಹೀಗೆ ಅಕ್ರಮಶೀಲವಾದಂತೆಲ್ಲ ಅವು ಸಹಾ ಇದೇ ಹಾದಿ ಹಿಡಿಯುವುದು ಅನಿವಾರ್ಯವಾಗುತ್ತದೆ. ಇದೊಂಥರ ಕ್ರಿಯೆ ಮತ್ತು ಪ್ರತಿಕ್ರಿಯೆ ಸಿದ್ಧಾಂತ. ಆಗ ಸಹಜವಾಗಿಯೇ ಸಮಾಜದಲ್ಲಿ ಅಶಾಂತಿ, ದ್ವೇಷ ಭಾವನೆ ಹೆಚ್ಚಾಗುತ್ತದೆ. ನಿಜವಾದ ಹಿಂದೂಗಳು ಯಾವತ್ತೂ ಸೌಹಾರ್ದತೆಯನ್ನು ಬಯಸುತ್ತಾರೆಯೇ ವಿನಾಃ ಇಂಥಾ ಸಮಾಜವನ್ನಲ್ಲ. ದುರಂತವೆಂದರೆ, ಈ ಬಗೆಯ ಬಹುಸಂಖ್ಯಾತ ಹಿಂದೂಗಳು, ದ್ವೇಷ ಮನಸ್ಥಿತಿಯ ಅಲ್ಪಪ್ರಮಾಣದ ಹಿಂದೂತ್ವವಾದಿಗಳ ತಾಳಕ್ಕೆ ಹೆಜ್ಜೆಹಾಕುವ ಗೊಂದಲದಲ್ಲಿದ್ದಾರೆ.

ಮುಂದುವರಿಯುವುದು...



ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ಕರ್ನಾಟಕದಲ್ಲಿ ಬಾಲಗಂಗಾಧರ ತಿಲಕರ ಪ್ರಭಾವ

ಭಾರತದಲ್ಲಿನ ಬ್ರಿಟಿಷ್ ಆಡಳಿತದ ವಿರುದ್ಧ ಛಿದ್ರ ಛಿದ್ರವಾಗಿದ್ದ ಪ್ರದೇಶಗಳ ಕನ್ನಡಿಗರು, ಸ್ಪಂದಿಸಿದ್ದು, ಸಂವಹನ ನಡೆಸಿದ್ದು ಹೇಗೆ? ಎಂಬ ಪ್ರಶ್ನೆಗಳು ಮೂಡುತ್ತವೆ. ಈ ವಿಷಯದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ತಿಲಕರು ಮತ್ತು ಗಾಂಧೀಜಿ ಅವರ ಕುರಿತಾದ ಪುಸ್ತಕಗಳಲ್ಲಿ ಅಂದಿನ ದಿನಮಾನದ ಪತ್ರಿಕೆಗಳಲ್ಲಿ ಮಾಹಿತಿಗಳು ಹೇರಳವಾಗಿವೆ. ಅವುಗಳಲ್ಲಿ ಬಹಳ ಪ್ರಮುಖವಾಗಿ ಪತ್ರಿಕೆಗಳನ್ನು ಗಮನಿಸಬಹುದು. ಸ್ವಾತಂತ್ರ್ಯ ಹೋರಾಟಕ್ಕೆ ಮೂಲ ಪ್ರೇರಣೆಯಾಗಿದ್ದ ಪತ್ರಿಕೆಗಳು ಹೊರರಾಜ್ಯಗಳಿಂದಲೂ ಬರುತ್ತಿದ್ದವು. ಮತ್ತು ಸ್ಥಳೀಯವಾಗಿ ಬಹುತೇಕ ಪತ್ರಿಕೆಗಳು ಆರಂಭವಾದವು. ದೈನಿಕ, ಮಾಸಿಕ, ಸಾಪ್ತಾಹಿಕ ಪತ್ರಿಕೆಗಳ ಜೊತೆಗೆ ಸ್ಥಳೀಯವಾಗಿ ಲೆಕ್ಕವಿಲ್ಲದಷ್ಟು ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ತಿಲಕರ 'ಕೇಸರಿ ಮತ್ತು ಮರಾಠ' ಪತ್ರಿಕೆಗಳು ಕರ್ನಾಟಕದಲ್ಲಿ ಅಗ್ರಸ್ಥಾನ ಪಡೆದಿತ್ತು. ಈ ಪತ್ರಿಕೆಯನ್ನು ಓದಲೆಂದೇ ಹಲವರು, ಮರಾಠಿ ಭಾಷೆಯನ್ನು ಕಲಿತರು. ಮತ್ತೆ ಹಲವರು ಮರಾಠಿ ಬಲ್ಲವರಿಂದ ಓದಿಸಿ, ಕೇಳಿ ತಿಳಿದುಕೊಳ್ಳುತ್ತಿದ್ದರು. ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ನಿಟ್ಟೂರು ಶ್ರೀನಿವಾಸ ರಾಯರು, ಅವರ ಬರಹದಲ್ಲಿ– "ಚಳ್ಳಕೆರೆಯ ಅಮಲ್ದಾರರ ಮಗನೊಬ್ಬ ಮುಂಬೈಯಲ್ಲಿ ಓದುತ್ತಿದ್ದ. ರಜಾದಲ್ಲಿ ಊರಿಗೆ ಬಂದಾಗ ತಿಲಕರ ಚಟುವಟಿಕೆಗಳ ವಿಚಾರ ತಿಳಿಸಿದನ್ನಲ್ಲದೆ 'ಕೇಸರಿ' ಪತ್ರಿಕೆಯ ಕೆಲ ಅಂಕಣಗಳನ್ನು ತಂದು ನನಗೆ ಓದಿ ಹೇಳಿದ್ದ' ನಂತರ ಮುಂದುವರಿದು, "ಶಿವಮೊಗ್ಗದಲ್ಲಿದ್ದಾಗ ಟಿಲಕರ 'ಮರಾಠ' ಹಾಗೂ ನಮ್ಮ ಹಾಸ್ಟೆಲ್‌ಗೆ ಬರುತ್ತಿದ್ದ ಡಿ.ವಿ.ಜಿ ಅವರ 'ಕರ್ನಾಟಕ ಪತ್ರಿಕೆ' ಓದುತ್ತಿದ್ದೆ." ಎಂದು ತಿಲಕರನ್ನು ಪತ್ರಿಕೆ ಮುಖಾಂತರ ತಿಳಿದುಕೊಂಡಿದ್ದನ್ನು, ಪತ್ರಿಕೆಯ ಪ್ರಭಾವವನ್ನು ತಿಳಿಸಿದ್ದಾರೆ. ಶಂಕರ ಗುಲ್ವಾಡಿ ಅವರು, ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಅನುಭವ ಕಥನವನ್ನು ವಿವರಿಸುವಾಗ "ಅಂಕೋಲೆಯ ಬದ್ರುದ್ದೀನ್ ಸಾಹೇಬ್ ಫೀರ್ಜಾವೆ ಖಿಲಾಫತ್‌ನಿಂದ ಮುಂದೆ ಬಂದವರು. 'ಕೇಸರಿ' ಪತ್ರಿಕೆ ಇಲ್ಲಿ ತೀರ ಜನಪ್ರಿಯವಾಗಿದ್ದು, ಮರಾಠಿ ಬಾರದ ನಾಡವರೂ ಕಷ್ಟಪಟ್ಟು ಅದನ್ನು ಓದುತ್ತಿದ್ದರು. ವಂದಿಗೆ ಹಮ್ಮಣ್ಣ ನಾಯ್ಕರು 'ಮಹಾದೇವನ ಕಟ್ಟೆ' ಎಂಬ ವಿಳಾಸವನ್ನು ಕೊಟ್ಟು ಈ ಪತ್ರಿಕೆ ತರಿಸಿ, ಪ್ರತಿ ಸಂಚಿಕೆಯನ್ನು ವಾರದ ಏಳೂ ದಿನ ಬಿಡದೇ ಪಾರಾಯಣ ಮಾಡಿ ತಿಳಿದುಕೊಳ್ಳುತ್ತಿದ್ದರು.



ಮುಂದುವರಿಯುವುದು...



ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ ಅಭಿನಂದನೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಇವರಿಗೆ ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಪ್ರತಿಷ್ಠಿತ ನಾಡೋಜ ಪದವಿಯಿಂದ ಗೌರವಿಸಿರುವುದು ಗಾಂಧಿ ಭವನದ ಕೀರ್ತಿಗೆ ಮತ್ತೊಂದು ಗರಿ ಮೂಡಿದಂತಾಗಿದೆ. ಡಾ. ವೂಡೇ ಪಿ. ಕೃಷ್ಣ ಇವರು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿದವರು. ಸೇವಾ ಸಂಘಗಳು ಹರಿಜನ ಬಾಲಕಿಯರ ವಸತಿ ಶಾಲೆ, ವಯಸ್ಕರ ಶಿಕ್ಷಣ ಮಂಡಳಿ ಸ್ಥಾಪಿಸಿದವರೂ, ಮಹಾದಾನಿಗಳು, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ವಂಶದ ಹಿನ್ನೆಲೆಯುಳ್ಳವರೂ ಆಗಿದ್ದಾರೆ. ಇವರು ಬಿ.ಇ., ಎಂ.ಎಸ್., ಎಲ್.ಎಲ್.ಬಿ., ಎಂ.ಎಲ್, ಡಿಲಿಟ್ ಪದವಿ ಶಿಕ್ಷಣ ಪಡೆದವರಾಗಿದ್ದಾರೆ. ಶೇಷಾದ್ರಿ ಪುರಂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಖಾಸಗಿ ಶಿಕ್ಷಣ ಸಂಘದ ಅಧ್ಯಕ್ಷರು, ವಿಶ್ವನೀಡಂ ಟ್ರಸ್ಟ್‌ನ ವ್ಯವಸ್ಥಾಪಕ ಧರ್ಮದರ್ಶಿ, ಭಾರತೀಯ ವಿದ್ಯಾಭವನದ ಕಾರ್ಯಕಾರಿ ಸದಸ್ಯರಾಗಿ, ಭಾರತೀಯ ಇಂಜಿನಿಯರ್ ಸಮಿತಿ ಅಧ್ಯಕ್ಷರಾಗಿ ರಾ.ಸೇ.ಯೋ. ಸಲಹಾ ಸಮಿತಿ ಸದಸ್ಯರಾಗಿ, ನವಜೀವನ ಸಂಸ್ಥೆಯ ಉಪಾಧ್ಯಕ್ಷರಾಗಿ, ಗಾಂಧಿ ಭವನದ ಅಧ್ಯಕ್ಷರಾಗಿ ನಿರಂತರವಾಗಿ, ಯುವಜನರು ಮತ್ತು ವಿದ್ಯಾರ್ಥಿಗಳ ಏಳ್ಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷರಾಗಿದ್ದಾಗ, ಇವರ ಸೇವೆ ಪರಿಗಣಿಸಿ ರಾಷ್ಟ್ರಪತಿಗಳ ಚಿನ್ನದ ಪದಕ ಪ್ರಧಾನ ಮಾಡಿರುತ್ತಾರೆ. ರಾಜ್ಯೋತ್ಸವ ಪ್ರಶಸ್ತಿ, ಡಿ.ವಿ.ಜಿ. ಪ್ರಶಸ್ತಿ, ಶ್ರೇಷ್ಠ ಇಂಜಿನಿಯರ್ ಪ್ರಶಸ್ತಿ, ಗಾಂಧಿ ಪುದುವಟ್ಟು ಪ್ರಶಸ್ತಿ, ಕೆನಡಾದ ವಿಶ್ವ ಉತ್ಪಾದಕ ವಿಜ್ಞಾನ ಅಕಾಡೆಮಿ ಗೌರವ, ಇಂಗ್ಲೆಂಡಿನ ಇಂಜಿನಿಯರ್ ಮತ್ತು ಟೆಕ್ನಾಲಜಿ ಸಂಸ್ಥೆ ಫೆಲೋ ಗೌರವ, ನ್ಯೂಹೊರೈಜನ್‌ನಲ್ಲಿ ಗೌರವ ಪ್ರಾಧ್ಯಪಕ ಪುರಸ್ಕಾರಗಳಿಗೆ ಭಾಜನರಾದವರಿಗೆ, ಹಂಪಿ ವಿಶ್ವವಿದ್ಯಾಲಯ 'ನಾಡೋಜ' ಗೌರವ ಪದವಿಯು, ಚಿನ್ನದ ಕಿರೀಟಕ್ಕೆ ವಜ್ರ ಪೋಣಿಸಿದಂತಾಗಿದೆ. ಈ ಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ. ವೂಡೇ ಪಿ. ಕೃಷ್ಣ ಅವರಿಗೆ 'ನಾಡೋಜ' ಗೌರವ ಪದವಿ ಪ್ರಧಾನವಾಗಿರುವುದಕ್ಕೆ ಸಂಪಾದಕ ಮಂಡಳಿಯಿಂದ ಅಭಿನಂದನೆಗಳು.

ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು

ಬಾಪು ಎಂಬ ಬರಿದಾಗದ 'ಜೀವ-ಜೀವನ ಪ್ರೀತಿ'ಯ ಗಣಿ

ದಕ್ಷಿಣ ಆಫ್ರಿಕಾದಲ್ಲಿನ ತರುಣ ಬಾಪುವಿನ ಮನಸ್ಸಿನಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಬಗ್ಗೆ ಅಪಾರವಾದ ಗೌರವ ಇದ್ದದ್ದು ನಮಗೆಲ್ಲ ತಿಳಿದಿದೆ. ಆ ಮಹಾನ್ ಸಾಮ್ರಾಜ್ಯದ ಸ್ತುತಿಗೀತೆಯನ್ನು ಸುಶ್ರಾವ್ಯವಾಗಿ ತಾವೂ ಹಾಡಿದ್ದಲ್ಲದೆ ಭಾರತದ ಭೇಟಿಯ ಸಂದರ್ಭದಲ್ಲಿ ತಮ್ಮ ಮಕ್ಕಳಿಗೂ ಕಲಿಸಿದ್ದರು. ಆ ಗೀತೆಯ ಬಗ್ಗೆ ಅವರಿಗೆ ಅಪಾರ ಗೌರವಿದ್ದು ಅದರಲ್ಲಿನ 'ಶತ್ರುಗಳನ್ನು ಬೀಳಿಸು, ನಾಶ ಮಾಡು' ಎಂಬ ಪದಗಳು ಮತ್ತು ಅವು ಹೊಮ್ಮಿಸುವ ಅರ್ಥವನ್ನು ಕಟುವಾಗಿ ಟೀಕೆ ಮಾಡುತ್ತಿದ್ದರು. ತಮ್ಮ ಒಳಿತಿಗಾಗಿ ಪ್ರಾರ್ಥಿಸುವಾಗ ಶತ್ರುಗಳ ನಾಶದ ಅಗತ್ಯವೇನಿದೆ ಎನ್ನುವುದು ಅವರ ಕಟುವಾದವಾಗಿತ್ತು. ಅವರ ವಾದವು ಪರದ್ವೇಷಿ ಮನದ ಭಾವವು ದೌರ್ಬಲ್ಯದ ಸಂಕೇತವಾಗಿರುತ್ತದೆ, ತನ್ನ ಒಳಿತಿನ ಜೊತೆಗೆ ಅನ್ಯರ ಒಳಿತನ್ನು ಬಯಸುವುದು ಪ್ರೀತಿಯ ಸೆಲೆಯಿಂದ ಮಾತ್ರ ಸಾಧ್ಯ ಎಂಬುದು ಅವರ ಆಂತರ್ಯದ ಭಾವವಾಗಿ ಕಂಡುಬರುತ್ತದೆ. ಬಾಪು "ಪ್ರೀತಿ ಕ್ರಾಂತಿ"ಯ ಅದ್ವಿತೀಯ ನಾಯಕ. ಅವರ "ಪ್ರೀತಿ ಇರುವಲ್ಲಿ, ಜೀವನವಿದೆ ಮತ್ತು ಪ್ರೀತಿ ಇರುವಲ್ಲಿ ಬೆಳಕು ಇರುತ್ತದೆ." ಎನ್ನುವ ಮಾತಿನಿಂದಲೆ ಅದು ವ್ಯಕ್ತವಾಗುತ್ತದೆ. ಬುದ್ಧಿ ಬೆಳದಂದಿನಿಂದ ನಿಧನರಾಗುವ ಕೊನೆಯ ಕ್ಷಣದವರೆಗೆ ಅವರು ಜೀವನವನ್ನು ಉತ್ಕಟವಾಗಿ ಪ್ರೀತಿಸುತ್ತಿದ್ದರು. ಸಣ್ಣ ಪುಟ್ಟ ಕಾರಣಗಳಿಗೂ ಜೀವನವೇ ಬೇಡವೆನ್ನುವ ಇಂದಿನ ಯುವಜನರಿಗೆ ದೊಡ್ಡ ಜೀವನ ಪಾಠವಾಗಿದೆ. ಅಪರಿಚಿತ ವಿದೇಶಿದಲ್ಲಿನ ಅತಂತ್ರ ಬದುಕಿನಿಂದ ಮೊದಲ್ಗೊಂಡು ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕತ್ವದ ಸುದೀರ್ಘ ಜೀವನದಲ್ಲಿ ಎಲ್ಲರಿಗೂ ನೀಡಿದ್ದು ಪ್ರೀತಿಯನ್ನು ಮಾತ್ರ.

ಬಾಪುವಿಗೆ ಪ್ರೀತಿ ಎಂದರೆ ಸ್ವಾರ್ಥವನ್ನು ಮೀರಿದ್ದಾಗಿತ್ತು. ಅದು ಜೀವನದ ಪ್ರತಿ ಕ್ಷಣವನ್ನು ಆವರಿಸಿಕೊಂಡಿರಬೇಕು, ಪ್ರತಿ ವರ್ತನೆಯಲ್ಲೂ ಅದು ಬೇಷರತ್ತಾಗಿ ವ್ಯಕ್ತವಾಗಬೇಕು. ಅದು ಎಲ್ಲರನ್ನೂ ಸಂಘಟಿಸುವ ಬೀಜ ಮಂತ್ರವಾಗಬೇಕು ಮತ್ತು ಅದು ಮನುಷ್ಯ ನಿರ್ಮಿತ ಎಲ್ಲಾ ಗಡಿಗಳನ್ನೂ ಮೀರಿದ್ದಾಗಿರಬೇಕು ಎಲ್ಲಕ್ಕಿಂತ ಮುಖ್ಯವಾಗಿ ಅದು ತಾನು, ತನಗಾಗಿ, ತನ್ನ ಪರಿವಾರ, ತನ್ನ ಸಮುದಾಯ ಎನ್ನುವ ಸ್ವಾರ್ಥದ ಎಲ್ಲಾ ಗಡಿಗಳನ್ನು ದಾಟಿ ಸರ್ವವೂ, ಸರ್ವಕ್ಕೂ ಅನ್ನುವಲ್ಲಿಗೆ ತಲುಪಬೇಕು ಎನ್ನುವುದೇ ಆಗಿತ್ತು. ವ್ಯಕ್ತಿಯ ಜೀವನದಲ್ಲಿ ಪ್ರೀತಿ ನಿತ್ಯವೂ ವ್ಯಕ್ತವಾಗುತ್ತಿರಬೇಕು, ಅದೊಂದು ಜೀವನಾಭ್ಯಾಸವಾಗಬೇಕು. ಸದಾ ಅದರ ಪ್ರಯೋಗವಾಗುತ್ತಾ ಮನುಷ್ಯ ಮಾತ್ರವಲ್ಲದೆ ಭೂಮಿಯ ಎಲ್ಲಾ ಪರಿಸರ ಸೇರಿದಂತೆ ಸಕಲ ಜೀವರಾಶಿಗಳಿಗೂ ನೀರು, ಗಾಳಿ ವಿನಿಯೋಗವಾಗಬೇಕು ಎನ್ನುವುದು ವಾದ ಮಾತ್ರವಲ್ಲ ಅದು ಬಾಪು ಜೀವನದ ಅವಿಭಾಜ್ಯ ಅಂಗವಾಗಿತ್ತು.

ಕೃಷಿ, ಶಿಕ್ಷಣ, ಔಷಧ ಸಾಹಿತ್ಯ, ಕಲೆ ಮತ್ತು ಕರಕುಶಲತೆ ಎಲ್ಲಾ ಚಟುವಟಿಕೆಗಳು ಪ್ರೀತಿಯ ಅಡಿಪಾಯದಿಂದ ಹೊರಹೊಮ್ಮಬೇಕು ಎನ್ನುವುದೇ ಅವರ ಸಂದೇಶವಾಗಿತ್ತು. ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕತೆಯ ಎಲ್ಲಾ ಸಿದ್ಧಾಂತಗಳಿಗೆ ಪ್ರೀತಿಯೆ ಮೂಲವಾಗಿರಬೇಕು. ರೈತ, ಶಿಕ್ಷಕ, ವೈದ್ಯ, ಕಲಾವಿದ, ತಂತ್ರಜ್ಞ ಹಾಗೂ ಎಲ್ಲಾ ವೃತ್ತಿಪರರು ಪ್ರೀತಿಯನ್ನು ಮೂಲವಾಗಿಸಿಕೊಂಡಾಗ ಎಲ್ಲರನ್ನೂ ತಲುಪಲು ಸಾಧ್ಯ ಮತ್ತು ವೃತ್ತಿಗೆ ಘನತೆ ತಂದುಕೊಡಲು ಸಾಧ್ಯ. ರಾಜಕೀಯ ನೇತಾರನೋರ್ವ ಪ್ರೀತಿಯ ಹಿಡಿತ ಕಳೆದುಕೊಂಡರೆ ಸರ್ವಾಧಿಕಾರಿಯಾಗುತ್ತಾನೆ, ಸಾಮಾಜಿಕ ಕಾರ್ಯಕರ್ತ ಸ್ವಾರ್ಥಿ, ಆರ್ಥಿಕ ಚಿಂತಕ ವ್ಯವಹಾರಿ, ಧಾರ್ಮಿಕ ನಾಯಕ ಲಂಪಟ ಹಾಗೆಯೇ ಆಧ್ಯಾತ್ಮಿಕ ಚಿಂತಕ ಕ್ಷುಲ್ಲಕನಾಗುತ್ತಾನೆ. "ನಾನು ನಿಮಗೆ ಪ್ರೀತಿ ನೀಡುತ್ತೇನೆ" ಎಂದು ಸೂಚ್ಯವಾಗಿ ತಿಳಿಸುವ ಬಾಪು ಸಮಾಜದ ಪ್ರತಿ ಕ್ಷೇತ್ರದಲ್ಲೂ ಪ್ರೀತಿ ತುಂಬುವ ಸಲುವಾಗಿ ಸರ್ವೋದಯ ಪರಿಕಲ್ಪನೆಯನ್ನು ಸೃಜಿಸಿದರು. ರಸ್ಕಿನ್ ಕವಿಯ 'ಅನ್ ಟು ದಿಸ್ ಲಾಸ್ಟ್' ಕೃತಿಯಿಂದ ಪ್ರೇರಿತವಾದ ಈ ಪದವು ಸರ್ವರ ಯೋಗಕ್ಷೇಮ, ಎಲ್ಲರಿಗೂ ಪ್ರೀತಿ ಮತ್ತು ಎಲ್ಲರ ಸಂತೋಷದಂತಹ ಹಲವು ಅರ್ಥಗಳನ್ನು ಹೊಂದಿದೆ. ಇಲ್ಲಿ "ಎಲ್ಲ" ಎಂದರೆ ಎಲ್ಲವೂ; ಎಲ್ಲಾ ಜೀವಸಂಕುಲಗಳು ಮತ್ತು ಎಲ್ಲಾ ಸಂವೇದನಾಶೀಲ ಜೀವಿಗಳಲ್ಲಿ ಸಾಮರಸ್ಯವನ್ನು ಮೂಡಿಸುವುದೇ ಆಗಿದೆ.


ಅನೇಕ ಸಂದರ್ಭ ಮತ್ತು ಆಯಾಮಗಳಲ್ಲಿ ಪ್ರೀತಿಯನ್ನು ಕೇವಲ ವ್ಯಾವಹಾರಿಕ ಮತ್ತು ದೈಹಿಕ ಮಟ್ಟಕ್ಕೆ ಇಳಿಸಿರುವ ಇಂದಿನ ದಿನಮಾನದಲ್ಲಿ, ಬಾಪುವಿನ ಬತ್ತದ ಪ್ರೀತಿಯ ಮಧುರತೆ ತಮ್ಮದಾಗಿಸಿಕೊಂಡಲ್ಲಿ ಎಲ್ಲರ ಭವಿಷ್ಯ ಒಳಿತಾಗುವುದು. ಸರಳತೆ, ಪರಿಸರ ಕಾಳಜಿ, ಜೀವಪರ ನಿಲುವು, ತಪ್ಪುಗಳಿಗೆ ಸ್ವದಂಡನೆ, ಹಿಂಸಾ ವಿರೋಧಿ ಧೋರಣೆ ಮುಂತಾದ ಅವರ ಜೀವನ ಪ್ರಯೋಗಗಳು ಮತ್ತು ಅಳವಡಿಕೆಗಳು ಅಸಾಧಾರಣವಾಗಿ ತನ್ನನ್ನೂ ಪರರನ್ನೂ ಪ್ರೀತಿಸುವ ಹಾಗೆ ಮಾಡುತ್ತದೆ. ಎಲ್ಲರೂ ಅದರಲ್ಲಿನ ಮೂಲ ಸೆಲೆಯ ನೆಲೆ ಹಿಡಿದು ಅದರ ಕೆಲವು ಭಾಗಗಳನ್ನಾದರೂ ಬದುಕಿಗೆ ಅಳವಡಿಸಿಕೊಳ್ಳಬೇಕಷ್ಟೆ.

ಮುಂದುವರಿಯುವುದು...

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

ಹುಯಿಲಗೊಳ ನಾರಾಯಣರಾವ್

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು
ರಾಜನ್ಯರಿಪು ಪರಶುರಾಮನಮ್ಮನ ನಾಡು
ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು
ಓಜೆಯಿಂ ಮೆರೆದರಸುಗಳ ಸಾಹಸದ ಸೂಡು
ತೇಜವನು ನಮಗೀವ ನೀರವೃಂದದ ಬೀಡು



ಮಹಾತ್ಮ ಗಾಂಧಿ 150 : ನಾವೇನು ಕಲಿಯಬಹುದು – ಅನುಭವ ಕಥನ

ಎಸ್.ಎನ್. ಸುಬ್ಬರಾವ್

ಸರ್ವಮತ

ಒಬ್ಬ ಸತ್ಯಾಗ್ರಹಿಗೆ ಇರಬೇಕಾಗಿದ್ದ 18 ಗುಣಗಳು, ಸತ್ಯ, ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರ ಶ್ರಮ, ಅಸ್ವಾದ, ಸರ್ವತ್ರ ಭಯವರ್ಜನ, ಸರ್ವಧರ್ಮ ಸಮಾನತ್ವ, ಸ್ವದೇಶಿ, ಸ್ಪರ್ಶ ಭಾವನೆ, ತತ್ವರಹಿತ ರಾಜಕಾರಣ, ದುಡಿಮೆ ಇಲ್ಲದ ಸಂಪತ್ತು, ಆತ್ಮಸಾಕ್ಷಿ ಇಲ್ಲದ ಸಂತೋಷ, ಚಾರಿತ್ರ್ಯವಿಲ್ಲದ ಶಿಕ್ಷಣ, ನೀತಿ ಇಲ್ಲದ ವ್ಯಾಪಾರ, ಮಾನವೀಯತೆ ಇಲ್ಲದ ವಿಜ್ಞಾನ, ತ್ಯಾಗ ಇಲ್ಲದ ಪೂಜೆ. ಇವುಗಳನ್ನು ನಡೆನುಡಿಯಿಂದ ಗಾಂಧೀಜಿ ತೋರಿಸಿದರು. 1948ರ ಜವನರಿ 13 ರಿಂದ 17ರವರೆಗೂ ಗಾಂಧೀಜಿ ಜೀವನದ ಅಂತಿಮ ಉಪವಾಸ ಪ್ರಯೋಗ ದಿಲ್ಲಿಯ ಮೂಲೆ ಮೂಲೆಯಲ್ಲೂ ಉರಿಯುತ್ತಿದ್ದ ಹಿಂದೂ-ಮುಸ್ಲಿಂ ಜ್ವಾಲೆಯನ್ನು ನಿಲ್ಲಿಸಿತ್ತು. ನಿರಾಶ್ರಿತರ ಶಿಬಿರಗಳಲ್ಲಿ ಸಮಾನತೆಯ ಪ್ರಾರ್ಥನೆಗಳಾದವು. ಚೂರಿ, ಕತ್ತಿ, ಬಂದೂಕು ಎಲ್ಲವನ್ನೂ ಗಾಂಧೀಜಿ ಎದುರಿಗೆ ರಾಶಿ ಹಾಕಿದ್ದರು. ದಿಲ್ಲಿಯ ವರ್ತಕರು ಪಾಕಿಸ್ತಾನಕ್ಕೆ ಓಡಿಹೋಗಿದ್ದ ಜನರನ್ನು ವಾಪಸ್ ಬರಲು ಮನವಿ ಮಾಡಿದರು. ದಿಲ್ಲಿಯಲ್ಲಿ ಶಾಂತಿ ನೆಲಸಿತು. ಗಾಂಧೀಜಿ 17.01.1948ರಂದು ಉಪವಾಸ ಮುಗಿಸಿದರು. ಹರಿಜನಾಶ್ರಮವು ನಿರಾಶ್ರಿತರಿಂದ ತುಂಬಿಹೋಗಿದ್ದರಿಂದ ಗಾಂಧೀಜಿ ಬಿರ್ಲಾ ಮಂದಿರ ಭವನದಲ್ಲಿ ತಂಗಬೇಕಾಯಿತು. ಈಗ ಆ ಭವನ "ಗಾಂಧಿ ಸ್ಮೃತಿ" ಆಗಿ ಸಾರ್ವಜನಿಕ ಸಂಪತ್ತಾಗಿದೆ. ದಿನದಿನಕ್ಕೂ ಸಂಜೆ ಪ್ರಾರ್ಥನೆಗೆ ಅಲ್ಲಿ ಹೆಚ್ಚು ಜನ ಸೇರುತ್ತಾರೆ.

1948 ಜನವರಿ 30ರ ಸಂಜೆ ಶಾಂತವಾಗಿ ಪ್ರಾರ್ಥನೆ ಜರುಗಿತ್ತು. ಒಂದು ಮೂಲೆಯಿಂದ ದೊಡ್ಡ ಶಬ್ದ; ಬಾಂಬ್ ಸಿಡಿದಿತ್ತು. ಜನ ಆತಂಕಿತರಾದರು. ಆದರೆ ಗಾಂಧೀಜಿ ಏನೂ ಆಗದಂತೆ ಪ್ರಾರ್ಥನೆ ಮುಂದುವರೆಸಿದರು. ಶಾಂತಿಯಿಂದ ಪ್ರಾರ್ಥನೆ ನಡೆಯಿತು. ಬಿರ್ಲಾ ಭವನದ ಪಕ್ಕದಲ್ಲಿಯೇ ರಾಷ್ಟ್ರಪತಿ ಭವನ. ಅಲ್ಲಿ ತಂಗಿದ್ದ ಲಾರ್ಡ್ ಮತ್ತು ಲೇಡಿ ಮೌಂಟ್ ಬ್ಯಾಟನ್ ಇಬ್ಬರೂ ಬಿರ್ಲಾ ಭವನಕ್ಕೆ ಧಾವಿಸಿ ಬಂದರು. "ನಿಮಗೆ ಅಭಿನಂದನೆ ಮಾಡಲು ಬಂದೆವು! ನೀವು ಸ್ವಸ್ಥವಾಗಿರುವುದನ್ನು ನೋಡಿ ಸಮಾಧಾನವಾಯಿತು" ಎಂದರು. ಗಾಂಧೀಜಿ "ಅದರಲ್ಲೇನಿದೆ ಅಭಿನಂದನೆಗೆ? ಆ ಮೂಲೆಯಲ್ಲಿ ಬಾಂಬ್ ಸಿಡಿಯಿತು.. ಈ ಕಡೆ ಪ್ರಾರ್ಥನೆ ನಡೆಯುತ್ತಿತ್ತು. ಗಾಂಧಿ ಅಭಿನಂದನೆಗೆ ಹೇಗೆ ಪಾತ್ರನಾಗುತ್ತಾನೆ ಎಂದರು. ಒಬ್ಬ ಬುದ್ಧಿ ಹೀನ ವ್ಯಕ್ತಿ ಗಾಂಧಿಗೆ ಎದುರಾಗಿ ನಿಂತು ಗುಂಡು ಹಾರಿಸಿ ಕೊಂದರೂ ಗಾಂಧಿ ಸಿಟ್ಟಾಗದೆ, ದೇವರ ಹೆಸರು ಹೇಳಿಕೊಂಡು ಸತ್ತರೆ ಮಾತ್ರ!" ಎಂದು ಮೌಂಟ್ ಬ್ಯಾಟನ್ ಹೇಳಿದರು. ಎಂತಹ ಭವಿಷ್ಯದ ದೃಷ್ಟಿ ಗಾಂಧಿಗೆ ಸರಿಯಾಗಿ ಹತ್ತು ದಿನಗಳ ನಂತರ ಅದೇ ಆಯಿತು. ಬಾಂಬ್ ಸಿಡಿದ ಮೇಲೆ ಬಿರ್ಲಾ ಭವನವನ್ನು ಪೋಲೀಸರಿಂದ ರಕ್ಷಣೆ ಮಾಡುವ ಯೋಚನೆ ಸರ್‌ದಾರ್ ಪಟೇಲ್ ಮಾಡಿದರು. ಆದರೆ ಗಾಂಧೀಜಿ ಅದನ್ನು ಕಟ್ಟು ನಿಟ್ಟಾಗಿ ಬಹಿಷ್ಕರಿಸಿದ್ದರು. ಅವರು ಹೇಳಿದರು. "ಸರ್ದಾರ್, ಭಗವಂತನು ನನ್ನನ್ನು ತೆಗೆದುಕೊಂಡು ಹೋಗಬೇಕು ಎಂದಿದ್ದರೆ ನಿಮ್ಮ ಸಾವಿರಾರು ಪೋಲೀಸರೂ ನನ್ನನ್ನು ರಕ್ಷಿಸುವುದು ಅಸಾಧ್ಯ. ಅವನು ನನ್ನನ್ನು ರಕ್ಷಿಸಬೇಕು ಎಂದಿದ್ದರೆ, ನನಗೆ ಯಾವ ರಕ್ಷಣೆಯೂ ಬೇಕಾಗಿಲ್ಲ" ಎಂದರು.

ಮುಂದುವರಿಯುವುದು...

ಕೃಷ್ಣ ನೆಹರೂ ಹತಿಸಿಂಗ್ (02.11.1907 – 9.11.1967)



ಇವರು ಜವಾಹರಲಾಲ್ ನೆಹರೂ ಮತ್ತು ವಿಜಯಲಕ್ಷ್ಮೀ ಪಂಡಿತ್ ಅವರ ಕಿರಿಯ ಸಹೋದರಿ, ನೆಹರೂ-ಗಾಂಧಿ ಕುಟುಂಬದ ಭಾಗವಾಗಿದ್ದವರು. ಅಲಹಾಬಾದ್‌ನ ಮಿರ್‌ಗಂಜ್‌ನಲ್ಲಿ ಮೋತಿಲಾಲ್ ನೆಹರೂ ಮತ್ತು ಸ್ವರೂಪ್ ರಾಣಿ ದಂಪತಿಗೆ ಜನಿಸಿದ ಕೃಷ್ಣ ನೆಹರೂ, ಜೈನ ಕುಟುಂಬಕ್ಕೆ ಸೇರಿದ ಗುನೋತ್ತಮ್ (ರಾಜಾ) ಹತಿಸಿಂಗ್ ಅವರನ್ನು ವಿವಾಹವಾದರು. 1950ರ ದಶಕದ ನಂತರ, ನೆಹರೂ ಅವರನ್ನು ಟೀಕಿಸುತ್ತ, 1959ರಲ್ಲಿ ಮಾಜಿ ಗವರ್ನರ್ ಜನರಲ್ ಸಿ. ರಾಜಗೋಪಾಲಾಚಾರಿ ಅವರನ್ನು ಬೆಂಬಲಿಸಿದ ಅವರು 'ಸ್ವತಂತ್ರ ಪಕ್ಷ' ಎಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹತಿಸಿಂಗ್ ಅವರು ಪತಿಯೊಂದಿಗೆ ಜೈಲಿನಲ್ಲಿಯೇ ಸಾಕಷ್ಟು ಸಮಯ ಕಳೆದರು. ಇಂದಿರಾ ಅವರ ಹಿರಿಯ ಮಗ ರಾಜೀವ್ ಗಾಂಧಿ ಅವರು ಇವರ ಮನೆಯಲ್ಲೇ ಜನಿಸಿದರು. ತಮ್ಮ ಸಹೋದರ ಜವಹರಲಾಲ್ ಮತ್ತು ಸೊಸೆ ಇಂದಿರಾ ಗಾಂಧಿಯವರ ಜೀವನವನ್ನು ಕುರಿತು ಬರೆದ ಹಲವಾರು ಪುಸ್ತಕಗಳಲ್ಲಿ ನೆಹರೂ ಅವರ ವೈಯಕ್ತಿಕ ಸಂಗತಿಗಳ ಜೊತೆಗೆ ಇತಿಹಾಸವನ್ನು ಬೆಸೆದುಕೊಂಡ ಪುಸ್ತಕಗಳನ್ನು ಪ್ರಕಟಗೊಳಿಸಿದ್ದಾರೆ.

ಸಂಗ್ರಹ : ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

ಗಾಯತ್ರಿಯದ್ಭುತ ಮಂತ್ರ

ಸಾಲಿ ರಾಮಚಂದ್ರರಾಯ

ಕನ್ನಡದ ನೆಲದ ಪುಲ್ಲೆನಗೆ ಪಾವನ ತುಲಸಿ
ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ
ಕನ್ನಡದ ನೆಲದ ಕಲ್ಲೆನಗೆ ಸಾಲಿಗ್ರಾಮ ಶಿಲೆ
ಕನ್ನಡ ದೈವಮ್ಮೆ

ಗಾಂಧೀಜಿ ಅವರ 'ಹಿಂದ್ ಸ್ವರಾಜ್'ನ ಶತಮಾನೋತ್ತರ ಪ್ರಸ್ತುತತೆ

ಡಾ.ಎಸ್.ಬಿ. ಬಸೆಟ್ಟಿ

"ಈ ಭೂಮಿ ಪ್ರತಿಯೊಬ್ಬ ಮಾನವನ ಅಗತ್ಯಗಳನ್ನು ಪೂರೈಸುವಷ್ಟು ಸಂಪನ್ಮೂಲಗಳನ್ನು ಒದಗಿಸುತ್ತದೆ. ಆದರೆ ಆತನ ಆಸೆಗಳನ್ನು ಪೂರೈಸುವಷ್ಟಲ್ಲ"

- ಎಂ.ಕೆ. ಗಾಂಧೀ

'ಹಿಂದ್ ಸ್ವರಾಜ್' ಕೃತಿ ಬರೆಯುವಾಗ ಬಲಗೈಯಲ್ಲಿ ಬರೆದು ಕೈಸೋತಾಗ ಎಡಗೈಯಲ್ಲೂ ಗಾಂಧೀಜಿ ಬರೆಯುತ್ತಿದ್ದುದು ವಿಶೇಷವೇ ಸರಿ. ಈ ಕೃತಿಯನ್ನು 'ರಾಷ್ಟ್ರೀಯ ಹೋರಾಟದ ಪ್ರಣಾಳಿಕೆ', 'ಬೈಬಲ್', 'ಗಾಂಧೀ ಚಿಂತನೆಯ ಹೆಮ್ಮರ', 'ಪಾಶ್ಚಿಮಾತ್ಯ ಆಧುನಿಕತೆಯ ಕಟು ವಿಮರ್ಶೆ' ಎಂದೆಲ್ಲಾ ವ್ಯಾಖ್ಯಾನಿಸಲಾಗುತ್ತದೆ. ಇದನ್ನು ಹತ್ತು ದಿನಗಳಲ್ಲಿ ಬರೆದು ಮುಗಿಸಿದ್ದು ಸಹ ದಾಖಲೆಯೇ ಎನ್ನಬಹುದು. ಇದನ್ನು ಬರೆಯುವಾಗ ಗಾಂಧೀಜಿಗೆ 40 ವರ್ಷ. ಈ ಗ್ರಂಥದಲ್ಲಿರುವ ತಮ್ಮ ಅಭಿಪ್ರಾಯಗಳನ್ನು ತಾವೇ ಸಂಪಾದಕರಾಗಿದ್ದ 'ಇಂಡಿಯನ್ ಒಪಿನಿಯನ್'ನಲ್ಲಿ ಕ್ರಮವಾಗಿ ಮೊದಲೇ ಪ್ರಕಟಿಸಿದರು. ಹಿಂಸೆಯಲ್ಲಿ ನಂಬಿಕೆ ಇದ್ದ ಭಾರತೀಯ ಕ್ರಾಂತಿವಾದಿಗಳಿಗೆ ಉತ್ತರವಾಗಿ ಈ ಗ್ರಂಥ ಹೊರಹೊಮ್ಮಿತು. ನಿಖರ ಕೃತಿ ರೂಪ ಪಡೆಯಿತು. ಗಾಂಧೀಜಿ ಹಿಂದ್ ಸ್ವರಾಜ್ ಕೃತಿಯನ್ನು ಮೊದಲು ಗುಜರಾತಿ ಭಾಷೆಯಲ್ಲಿ ಬರೆದರು. ಅದನ್ನು ಪ್ರಕಟಿಸುತ್ತಿದ್ದಂತೆಯೇ ಬ್ರಿಟೀಷ್ ಸಾಮ್ರಾಜ್ಯಶಾಹಿ, ಇದು ಪ್ರಭುತ್ವದ ವಿರುದ್ಧ ದಂಗೆಯನ್ನು ಪ್ರಚೋದಿಸುವ ಕೃತಿ ಎಂದು ನಿರ್ಧರಿಸಿ, ಪುಸ್ತಕವನ್ನು ನಿಷೇಧಿಸಿತ್ತು. ಗಾಂಧೀಜಿಗೆ ವಾಸ್ತವವಾಗಿ ಬ್ರಿಟೀಷರು ಯಾವ ಕಾರಣಕ್ಕಾಗಿ ಪುಸ್ತಕವನ್ನು ನಿಷೇಧಿಸಿದ್ದರು ಎಂದು ತಿಳಿದಿರಲಿಲ್ಲ. ಗಾಂಧಿ ಸ್ವತಃ ಈ ಪುಸ್ತಕವನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದರು. ಅವರು ಜೀವಮಾನದಲ್ಲಿ ಭಾಷಾಂತರಿಸಿದ್ದು ಇದೊಂದೇ ಪುಸ್ತಕ ಮಾತ್ರವಾಗಿದೆ. 'ಹಿಂದ್ ಸ್ವರಾಜ್' ಬರೆಯುವ ಸಂದರ್ಭದಲ್ಲಿ ಗಾಂಧೀಜಿ ಅವರಿಗೆ ಭಾರತದ ವಾಸ್ತವಿಕ ಸ್ಥಿತಿಗತಿಯ ಅರಿವು ಇರಲಿಲ್ಲ; 1915ರವರೆಗೆ ಅವರು ದಕ್ಷಿಣ ಆಫ್ರಿಕದಲ್ಲಿ ಸಾಮಾಜಿಕ ಸಮಸ್ಯೆಗಳು, ಸವಾಲುಗಳಿಗೆ, ಹೋರಾಟ ನಡೆಸುತ್ತಿದ್ದರು. ಅದೇ ಸುಮಾರಿಗೆ ಭಾರತದಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಹೋರಾಟಕ್ಕೂ ನಿರ್ದಿಷ್ಟ ರೂಪುರೇಷೆಗಳು ಇರಲಿಲ್ಲ. ಹಿಂಸಾಪ್ರಧಾನ ಪ್ರತಿರೋಧ ರಾಷ್ಟ್ರೀಯ ಹೋರಾಟಕ್ಕೆ ಹಿಂಸೆಯ ಚೌಕಟ್ಟನ್ನು ನೀಡುತ್ತಿರುವುದನ್ನು ಅವರು ಗಮನಿಸಿದ್ದರು. ವಸಾಹತುಶಾಹಿ ವ್ಯವಸ್ಥೆಗೆ, ಕ್ರಾಂತಿಕಾರರಿಗೆ, ಹಿಂಸೆಗೆ, ಆಧುನಿಕತೆಗೆ, ಪಾಶ್ಚಾತ್ಯ ನಾಗರೀಕತೆಗೆ, ಹಾಗೂ ರಾಜಕೀಯ ಚೌಕಟ್ಟಿಗೆ "ಹಿಂದ್ ಸ್ವರಾಜ್" ಉತ್ತರವಾಗಿ ಪ್ರಕಟಿತವಾಯಿತು. ಗಾಂಧೀಜಿ ಅವರ 'ಹಿಂದ್ ಸ್ವರಾಜ್' ವೈಚಾರಿಕವಾಗಿ, ತಾರ್ಕಿಕವಾಗಿ ಚಿಂತನೆಗೆ ಒಳಪಡಿಸಿದ ಕೃತಿಯಾಗಿದೆ.

ಮುಂದುವರಿಯುವುದು....

ಚರಿತ್ರೆಯಲ್ಲಿ ಮರೆಯಾದ ಮಹಾತ್ಮರ ಅಕ್ಷರ ಮಾಧ್ಯಮ ಕಾಯಕ

ಯ. ರು. ಪಾಟೀಲ

ತಿಳುವಳಿಕೆ ಹಾಗೂ ಪ್ರಾಮಾಣಿಕತೆ ಕತ್ತಲೆಯಲ್ಲಿ ಸಾಗುವವರಿಗೆ ದೀವಟಿಗೆಯಾಗಿವೆ. ಆದರೆ ಇದಕ್ಕೆ ಪ್ರಾಮಾಣಿಕತೆ ಬಹುಮುಖ್ಯವಾದ ಸಾಧನವೂ ಆಗಿದೆ. ಗಾಂಧೀಜಿ ಅವರು ಪತ್ರಿಕಾ ಕಾಯಕವನ್ನು ತಾವು ನಂಬಿದ ತತ್ವ, ಮೌಲ್ಯ ಸಂದೇಶಗಳನ್ನು ಸರಳ ಭಾಷೆಯಲ್ಲಿ ಶ್ರೀಸಾಮಾನ್ಯನಿಗೆ ತಲುಪಿಸುವ ಮಾರ್ಗವಾಗಿಸಿದರು. ಇಲ್ಲಿ ಪ್ರಚಾರ ಹಾಗೂ ಜಾಹಿರಾತು ಮೂಲಕ ಧನ ಸಂಪಾದನೆ ಗೌಣವಾಗಿತ್ತು. ಈ ಕುರಿತು ಅವರ ಮಾತುಗಳನ್ನೆ ನೇರವಾಗಿ ಹೇಳಬೇಕೆಂದರೆ 'ಪತ್ರಿಕೋದ್ಯಮ, ಒಟ್ಟು ಉದ್ದೇಶವೇ ಸೇವೆ. ಪತ್ರಿಕಾ ಸಂಸ್ಥೆ ಒಂದು ಪ್ರಚಂಡ ಶಕ್ತಿ. ಆದರೆ ತಡೆಯಿಲ್ಲದೆ ಸೊಕ್ಕಿ, ಉಕ್ಕಿ ಬಂದ ನೀರು ಬೆಳೆಯನ್ನು ಹಾಳು ಮಾಡುವಂತೆ, ನಿಯಂತ್ರಣವಿಲ್ಲದ ಲೇಖನಿ ಸೇವೆಮಾಡುವ ಬದಲು, ನಾಶ ಮಾಡುತ್ತದೆ. ಈ ನಿಯಂತ್ರಣ ಹೊರಗಿನಿಂದ ಆದರೆ ಅದು ನಿಯಂತ್ರಣವಿಲ್ಲದಿರುವುದಕ್ಕಿಂತ ಹೆಚ್ಚು ವಿಷಯುಕ್ತ. ಅಂತರ್ಯದಿಂದ ಈ ಆಜ್ಞಾಶಕ್ತಿ ಬಂದಾಗ ಮಾತ್ರ ಅದು ಸಾರ್ಥಕ. ಅದು ತರ್ಕಬದ್ಧವೆಂದಾದರೆ ಜಗತ್ತಿನ ಎಷ್ಟು ಪತ್ರಿಕೆಗಳು ಈ ಸತ್ವಪರೀಕ್ಷೆಯನ್ನು ಎದುರಿಸಲು ಸಿದ್ಧವಾಗಿವೆ? ಆದರೆ ತೀರ್ಪು ಕೊಡಬೇಕಾದವರು ಯಾರು? ಉಪಯೋಗ ಆಗುವಂಥದ್ದು ಹಾಗೂ ಉಪಯೋಗವಿಲ್ಲದ್ದು, ಇವುಗಳು ಜತೆಜತೆಯಾಗಿಯೇ ಹೋಗುತ್ತವೆ. ಅವುಗಳ ಆಯ್ಕೆಯಲ್ಲಿ ತಾರತಮ್ಯವನ್ನು ನಾವು ಮನುಷ್ಯರೇ ಮಾಡಬೇಕು' ಎಂದು ಗಾಂಧಿ ನಂಬಿದ್ದರು.

ಬರಹದ ಶೈಲಿ ವ್ಯಕ್ತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ ಎನ್ನುವುದಕ್ಕೆ ಗಾಂಧೀಜಿ ನಿದರ್ಶನವಾಗಿದ್ದರು. ಅವರ ಬರಹಗಳು ಎಂತಹವರನ್ನೂ ಕೆಣಕುವಂತವು. ಅವರ ಬರಹಗಳನ್ನು ಓದಿ ಮನವರಿಕೆ ಮಾಡಿಕೊಂಡವರು ಪತ್ರಿಕಾ ರಂಗಕ್ಕೆ ಧುಮುಕುತ್ತಿದ್ದರು. ಇರುವುದನ್ನು ಇರುವಂತೆಯೇ ಹೇಳುವ ಅವರ ಅಕ್ಷರದ ಶಕ್ತಿ ಎಲ್ಲರಿಗೂ ಮೆಚ್ಚುಗೆಯಾಗುತ್ತಿತ್ತು. ಇವೆಲ್ಲ ಕಾರಣಗಳಿಂದಾಗಿ ಭಾರತೀಯ ಪತ್ರಿಕೋದ್ಯಮ ಸ್ವದೇಶಿಯತೆಯ ಕಸುವು ಪಡೆಯಿತು. ಗಾಂಧೀಜಿ ಅವರ ಈ ನೆಲೆಗಟ್ಟು ಮತ್ತು ಮೌಲ್ಯ ಈಗಲೂ ಪ್ರಸ್ತುತ ಸಂಗತಿಗಳಾಗಿವೆ. 'ನನ್ನ ವಿಚಾರಗಳ ಪ್ರಚಾರಕ್ಕಾಗಿ ನಾನು ಬರೆಯುತ್ತೇನೆ. ನಾನು ಎಷ್ಟೊಂದು ನಿಯಂತ್ರಣದಲ್ಲಿ ಬರೆಯಬೇಕು ಎಂಬ ಕಲ್ಪನೆಯೂ ಓದುಗರಿಗೆ ಇರಲಾರದು. ನನ್ನ ವಿಷಯಗಳ ಹಾಗೂ ಶಬ್ದಗಳ ಆಯ್ಕೆ, ದೊಡ್ಡ ಜವಾಬ್ದಾರಿ. ಇದೆಲ್ಲ ನನಗೊಂದು ತರಬೇತಿ. ಅದು ನನ್ನನ್ನೇ ಕಾಣಲು, ನನ್ನ ದೌರ್ಬಲ್ಯಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು.

ಮುಂದುವರಿಯುವುದು....

ಕನಸುಗಳು ಬೇಕು, ಕಲ್ಪನೆಗಳೂ ಬೇಕು
ಆಗ ಬದುಕು ಒಂದು ಕಾಮನಬಿಲ್ಲು
ವಾಸ್ತವಿಕ ಅರಿವು – ಲೆಕ್ಕಾಚಾರವೂ ಬೇಕು
ಇವಿಲ್ಲದಿದ್ದರೆ ಬದುಕು ಬರೀ ಬಿದಿರಿನ ಬಿಲ್ಲು

– ಡಾ. ಸಿ.ಆರ್. ಚಂದ್ರಶೇಖರ್



ನುಡಿನಮನ



ಉದ್ಯೋಗ ಖಾತ್ರಿಯ ಜನಕ ರಘುವಂಶ ಪ್ರಸಾದ್ ಇನ್ನಿಲ್ಲ

ಮಹತ್ವದ ಉದ್ಯೋಗ ಖಾತ್ರಿ ಯೋಜನೆಯ ಜನಕರಲ್ಲಿ ಒಬ್ಬರು ಎಂದೇ ಖ್ಯಾತರಾಗಿದ್ದು ಕೇಂದ್ರದ ಮಾಜಿ ಸಚಿವ ರಘುವಂಶ ಪ್ರಸಾದ್ ಸಿಂಗ್ ದಿ.13.09.2020ರಂದು ನಿಧನರಾದರು. ಅವರಿಗೆ 74 ವರ್ಷ ವಯಸ್ಸಾಗಿತ್ತು. ಅನಾರೋಗ್ಯ ಪೀಡಿತರಾಗಿದ್ದ ಅವರು, ದಿಲ್ಲಿ ಏಮ್ಸ್‌ಗೆ ದಾಖಲಾಗಿದ್ದರು. ಬೆಳಗ್ಗೆ 11 ಗಂಟೆಗೆ ಅವರಿಗೆ ಉಸಿರಾಟ ಸಮಸ್ಯೆ ಕಾಣಿಸಿಕೊಂಡು ಅಸುನೀಗಿದರು ಎಂದು ಅವರ ಆಪ್ತ ಕೇದಾರ್ ಯಾದವ್ ತಿಳಿಸಿದ್ದಾರೆ. ರಘುವಂಶ ಅವರ ಮನಮೋಹನ ಸಿಂಗ್ ಸಚಿವ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ಈ ವೇಳೆ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ ಆರಂಭವಾಗಿತ್ತು. ಈ ಕಾರಣ ಅವರನ್ನು ಯೋಜನೆಯ ಜನಕರಲ್ಲಿ ಒಬ್ಬರು ಎಂದು ಕರೆಯಲಾಗುತ್ತಿತ್ತು. ಸಿಂಗ್ ನಿಧನಕ್ಕೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ, ಲಾಲು, ನಿತಿಶ್ ಕಂಬನಿ ಮಿಡಿದಿದ್ದಾರೆ.

ಕೃಪೆ : ಕನ್ನಡ ಪ್ರಭ, 14.09.2020




10 ಸಲ ಮೌಂಟ್ ಎವರೆಸ್ಟ್ ಏರಿದ್ದ ಆಂಗ್ ರಿಟಾ ಶೆರ್ಪಾ ಇನ್ನಿಲ್ಲ

ಜಗತ್ತಿನ ಅತಿ ಎತ್ತರದ ಶಿಖರ ಮೌಂಟ್ ಎವರೆಸ್ಟ್‌ನ್ನು 10ಸಲ ಆರೋಹಣ ಮಾಡಿರುವವರಲ್ಲಿ ಮೊದಲಿಗರಾಗಿದ್ದ ಆಂಗ್‌ರಿಟಾ ಶೆರ್ಪಾ ಅವರು ದಿ. 21.09.2020ರಂದು ನಿಧನರಾಗಿದ್ದಾರೆ. ದೀರ್ಘಕಾಲದ ಅಸ್ವಸ್ಥತೆಯಿಂದ ಬಳಲುತ್ತಿದ್ದ ಅವರು ಸೋಮವಾರ ಬೆಳಗ್ಗೆ ನೇಪಾಳ ರಾಜಧಾನಿ ಕಠ್ಮಂಡುವಿನಲ್ಲಿರುವ ಸ್ವಗೃಹದಲ್ಲಿ ಕೊನೆಯುಸಿರೆಳೆದಿದ್ದಾರೆಂದು ಅವರ ಪುತ್ರ ಪುರ್ಬಾ ಶೆರಿಂಗ್ ತಿಳಿಸಿದ್ದಾರೆ. ಪರ್ವತಾರೋಹಣದಲ್ಲಿ ಅಪಾರ ಚಾಕಚಕ್ಯತೆಯನ್ನು ಹೊಂದಿದ್ದ ಆಂಗ್ ರಿಟಾ 'ಹಿಮದ ಚಿರತೆ' ಎಂದೇ ಜನಪ್ರಿಯರಾಗಿದ್ದಾರೆ. 1983 ರಿಂದ 1996ರ ನಡುವೆ ಆಂಗ್ ರಿಟಾ ಅವರು 8850 ಮೀಟರ್ ಎತ್ತರದ ಮೌಂಟ್ ಎವರೆಸ್ಟ್ ಶಿಖರವನ್ನು 10 ಸಲ ಆರೋಹಣ ಮಾಡಿದ್ದಾರೆ. ಯಾವುದೇ ಆಕ್ಸಿಜನ್ ಸಿಲಿಂಡರ್‌ಗಳ ನೆರವಿಲ್ಲದೆ ಪರ್ವತವನ್ನೇರಿರುವುದು ಇವರ ಮೇರು ಸಾಧನೆಯಾಗಿದೆ.

ಕೃಪೆ : ವಾರ್ತಾಭಾರತಿ,22.09.2020
ಸಂಗ್ರಹ : ಡಾ. ಪೂರ್ಣಿಮಾಜೋಗಿ
ಕಾರ್ಯಕ್ರಮ ಅನುಷ್ಠಾನಾಧಿಕಾರಿ, ರಾ.ಸೇ.ಯೋ.


ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ
ಹಸಿಗೋಡೆಯ ಹರಳಿನಂತೆ ಹುಸಿಹೋಗದ ಕನ್ನಡ
– ಚೆನ್ನವೀರ ಕಣವಿ



ಎಸ್.ಜಿ. ಸೋಮಶೇಖರ್ ರಾವ್

ರಂಗಭೂಮಿ ಸಿನಿಮಾ, ಕಿರುತೆರೆ, ಹಿರಿಯ ರಂಗಕರ್ಮಿ, ನಟ ಎಸ್.ಜಿ. ಸೋಮಶೇಖರ್ ರಾವ್ ದಿ.3.11.2020ರಂದು ಹೃದಯಾಘಾತದಿಂದ ನಿಧನರಾಗಿದ್ದಾರೆ. ಇವರು ಪಾಶ್ಚಿಮಾತ್ಯ ಮತ್ತು ಭಾರತೀಯ ಅನೇಕ ನಾಟಕಗಳ ಕನ್ನಡ ಅವತರಣಿಕೆಯಲ್ಲಿ ನಟಿಸಿದ್ದರು. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪುರಸ್ಕಾರದ ಜೊತೆಗೆ ಅನೇಕ ಪ್ರಶಸ್ತಿಗಳು ಸಂದಿವೆ.

ಕೃಪೆ : ವಿಜಯ ಕರ್ನಾಟಕ 04.11.2020



ಖ್ಯಾತ ವಯೋಲಿನ್ ವಾದಕ ಕೃಷ್ಣನ್ ವಿಧಿವಶ

ಖ್ಯಾತ ವಯೋಲಿನ್ ವಾದಕ ಕೃಷ್ಣನ್ ಅವರು ದಿ.2.11.2020ರಂದು ನಿಧನರಾಗಿದ್ದಾರೆ. ಅವರು ಸಂಗೀತ ಕಲಾನಿಧಿ, ಪದ್ಮವಿಭೂಷಣ ಪ್ರಶಸ್ತಿಗಳಿಂದ ಸನ್ಮಾನಿತರಾಗಿದ್ದರು.

ಕೃಪೆ : ಕನ್ನಡ ಪ್ರಭ, 04.11.2020



ಸ್ವಾತಂತ್ರ್ಯ ಹೋರಾಟಗಾರ ಎಂ.ಡಿ. ಶ್ಯಾಮರಾವ್

ಸ್ವಾತಂತ್ರ್ಯ ಹೋರಾಟಗಾರ ಎಂ.ಡಿ. ಶ್ಯಾಮರಾವ್ ಅವರು ಅನಾರೋಗ್ಯದಿಂದ 3.11.2020ರಂದು ಶಿವಮೊಗ್ಗದಲ್ಲಿ ನಿಧನರಾಗಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡು, 1916ರಲ್ಲಿ 2 ತಿಂಗಳ ಜೈಲು ಶಿಕ್ಷೆ ಅನುಭವಿಸಿದ್ದರು. ಬ್ರಿಟಿಷರ ದೂರವಾಣಿ ಸಂಪರ್ಕ ಕಡಿತಗೊಳಿಸುತ್ತಿದ್ದ ಇವರು, ಚಳುವಳಿಗಾರರಿಗೆ ಗುಪ್ತ ಮಾಹಿತಿ ನೀಡುತ್ತಿದ್ದರು.

ಕೃಪೆ : ಕನ್ನಡ ಪ್ರಭ, 04.11.2020



ಸ್ವಾತಂತ್ರ್ಯ ಹೋರಾಟಗಾರ ಕೆಂಪಯ್ಯ

ಯಲಹಂಕ ತಾಲ್ಲೂಕು ಬಾಗಲೂರು ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರೂ ಆದ ಕಾಂಗ್ರೆಸ್‌ನ ಹಿರಿಯ ಮುಖಂಡ ಎಚ್. ಕೆಂಪಯ್ಯ ಶುಕ್ರವಾರ ನಿಧನರಾದರು. ಬಾಗಲೂರು ಗ್ರಾಮದಲ್ಲಿ ಜನಿಸಿದ್ದ ಕೆಂಪಯ್ಯ 50 ವರ್ಷ ಬಾಗಲೂರು ಗ್ರಾ.ಪಂಚಾಯಿತಿ ಅಧ್ಯಕ್ಷರಾಗಿದ್ದರು. ದೇವನಹಳ್ಳಿ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ 10 ವರ್ಷ ಸೇವೆ ಸಲ್ಲಿಸಿದ್ದರು.

ಕೃಪೆ : ಉದಯವಾಣಿ, 08.11.2020

ಕನ್ನಡ... ಕನ್ನಡಿಗ... ಕರ್ನಾಟಕ

ಕರ್ನಾಟಕ ಏಕೀಕರಣವಾಗಿ 2020ನೇ ನವೆಂಬರ್ 1ನೆಯ ತಾರೀಖಿಗೆ ಅರವತ್ತನಾಲ್ಕು ವರ್ಷಗಳಾಗುತ್ತದೆ. ಕರ್ನಾಟಕದ ಏಕೀಕರಣ ಹೋರಾಟವು ಕಹಿ–ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.



ಕರ್ನಾಟಕ ಏಕೀಕರಣ ರೂವಾರಿ ಆಲೂರು ವೆಂಕಟರಾಯರು

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಮೊದಲಿಗೆ, ಮುನ್ನೆಲೆಗೆ ಬರುವ ಹೆಸರು ಆಲೂರು ವೆಂಕಟರಾಯರು. ಇವರು ಕರ್ನಾಟಕ ಕುಲಪುರೋಹಿತರೆಂದೇ ಪ್ರಖ್ಯಾತರು. ಕನ್ನಡ ಭಾಷೆಯ ಅಳಿವು–ಉಳಿವಿನ ಪ್ರಶ್ನೆ ಬಂದಾಗ ಕನ್ನಡ ನಾಡು ನುಡಿ ಕಟ್ಟಿದವರು ಇವರು. ಕನ್ನಡ ಕನ್ನಡತ್ವ, ಕರ್ನಾಟಕದ ಬಗ್ಗೆ ಬಹುದೊಡ್ಡ ಕನಸು ಕಂಡಿದ್ದವರು. ಗದಗ ಜಿಲ್ಲೆಯ ಹೊಲೆ ಆಲೂರು ವೆಂಕಟರಾಯರಿಗೆ ಅವರ ಪೂರ್ವಜರಿಂದ ಆಂಧ್ರ ಪ್ರದೇಶದ ಆದೋನಿ ಜಹಗೀರಾಗಿ ದೊರಕಿತು. 1880 ಜುಲೈ 12ರಂದು ಭೀಮರಾಯ ಮತ್ತು ಭಾಗೀರಥಿಬಾಯಿ ದಂಪತಿಗಳ ಮಗನಾಗಿ ಬಿಜಾಪುರದಲ್ಲಿ ಆಲೂರು ವೆಂಕಟರಾಯರು ಜನಿಸಿದರು. ಇವರ ತಂದೆಯವರು ಸರ್ಕಾರಿ ವೃತ್ತಿಯಲ್ಲಿದ್ದುದ್ದರಿಂದ ನವಲಗುಂದ, ಧಾರವಾಡ, ಗದಗ, ಹಾನಗಲ್ ಹೀಗೆ ಬೇರೆ ಬೇರೆ ಊರುಗಳಲ್ಲಿ ವಿದ್ಯಾಭ್ಯಾಸ ನಡೆಯಿತು. ಹೈಸ್ಕೂಲ್ ವಿದ್ಯಾರ್ಥಿಗಳಾಗಿದ್ದಾಗಲೇ ಸಂಸ್ಕೃತದ 'ವೇಣಿ ಸಂಹಾರ' – ನಾಟಕವನ್ನು ರಂಗಭೂಮಿ ಮೇಲೆ ತಂದರು. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ನಡೆಯುತ್ತಿದ್ದ ಅನೇಕ ಹೋರಾಟಗಳು, ಆಲೂರರನ್ನು ದೇಶದ ಚಿಂತನೆಯ ಕಡೆ ಹರಿಸಿತು. ಸ್ವಾಮಿ ವಿವೇಕಾನಂದರ ಶಿಕಾಗೋ ಭಾಷಣವು ಆಲೂರರಿಗೆ ಪ್ರೇರಣೆ ಒದಗಿಸಿತು. ಪುಣೆಯ ಫರ್ಗ್ಯುಷನ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ, ತಿಲಕ್, ಗೋಖಲೆ, ರಾಜವಾಡೆ, ಕರ್ವೆ ಇವರ ಪ್ರಭಾವಕ್ಕೊಳಗಾದರು. ಕಾನೂನು ವ್ಯಾಸಂಗದ ನಂತರ ವಕೀಲಿ ವೃತ್ತಿಯನ್ನು ಮುಂಬಯಿಯಲ್ಲಿ ಆರಂಭಿಸಿದರು. 1912ರಲ್ಲಿ ಆಲೂರರು ಪ್ರಸಿದ್ಧ ಕೃತಿ 'ಕರ್ನಾಟಕ ಗತವೈಭವ'ವನ್ನು ಪ್ರಕಟಿಸಿದರು. ಈ ಕೃತಿಯು ಭಾರತ ಮತ್ತು ಕರ್ನಾಟಕದ ಸಮಗ್ರ ದರ್ಶನವನ್ನು ಮೂಡಿಸುವಂಥದ್ದಾಗಿದೆ. 'ಶಿಕ್ಷಣ ಮೀಮಾಂಸೆ', 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ವಿದ್ಯಾರಣ್ಯ', 'ಕರ್ನಾಟಕದ ವೀರರತ್ನಗಳು' 1930ರಲ್ಲಿ 'ಕರ್ನಾಟಕತ್ವ ವಿಕಾಸ' 1952ರಲ್ಲಿ ಪ್ರಕಟಗೊಂಡಿವೆ. 'ಕರ್ನಾಟಕತ್ವದ ಸೂತ್ರಗಳು' ಕೃತಿಯಂತು ರಾಜಕಾರಣ ಧರ್ಮ, ವಾಙ್ಮಯ ಇತಿಹಾಸ, ಕಲೆ ಮುಂತಾದವು ರಾಷ್ಟ್ರೀಯತ್ವ, ಕರ್ನಾಟಕತ್ವದ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟು ಕನ್ನಡಿಗರನ್ನು ಜಾಗೃತಗೊಳಿಸಿದ ಕೃತಿಯಾಗಿದೆ. ಕರ್ನಾಟಕದ ಏಕೀಕರಣಕ್ಕೆ ಆಲೂರರು ಕರ್ನಾಟಕ ಐತಿಹಾಸಿಕ ಪ್ರವಾಸ, ಕರ್ನಾಟಕ ಗತವೈಭವದ ಚರಿತ್ರೆ, ಐತಿಹಾಸಿಕ ಸಮ್ಮೇಳನಗಳು, ಹೀಗೆ ಹತ್ತಾರು ಸಂಘಟನಾತ್ಮಕ ಚಟುವಟಿಕೆಗಳ ಮುಖೇನ ಕರ್ನಾಟಕದ ಪರಿಕಲ್ಪನೆಯನ್ನು ಕನ್ನಡದ ಜನತೆಗೆ ತಿಳಿಸುವ ಮೂಲಕ ಕರ್ನಾಟಕ ಏಕೀಕರಣ ಚಳುವಳಿ ಜಾಗೃತವಾಗುವಂತೆ ಮಾಡಿದ ಕೀರ್ತಿ ಶ್ರೀಯುತರಿಗೆ ಸಲ್ಲುತ್ತದೆ. ಆಲೂರರು 1915ರಿಂದ ನಡೆಸಿದ ಕನ್ನಡ ಕಟ್ಟುವ ಚಳುವಳಿಗಳನ್ನು ಎರಡು ಆಯಾಮಗಳಲ್ಲಿ ವಿಶ್ಲೇಷಿಸಿಕೊಳ್ಳಬಹುದು.

ರಾಷ್ಟ್ರೀಯ ಚಳವಳಿಗಳು : ವಿದೇಶಿ ವಸ್ತು ಬಹಿಷ್ಕಾರ, ಸ್ವದೇಶಿಯತೆ, ರಾಷ್ಟ್ರೀಯ ಶಿಕ್ಷಣ, ಹೋಮ್‌ರೂಲ್ ಲೀಗ್, ಸ್ವರಾಜ್ಯ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಳವಳಿಗಳು : ಕರ್ನಾಟಕ ಇತಿಹಾಸ ಮಂಡಲ, ಕನ್ನಡ ಗ್ರಂಥಕರ್ತರ ಮಂಡಲ, ಗ್ರಂಥಕರ್ತರ ಮತ್ತು ವಾಚನಾಲಯಗಳ ಸಮ್ಮೇಳನ, ಕಲೆ ಮತ್ತು ಸಾಹಿತ್ಯ ಸಮ್ಮೇಳನ, ಕೀರ್ತನೆ ಸಮ್ಮೇಳನ, ವಿಜಯನಗರ, ಬಸವೇಶ್ವರ, ನಿಜಗುಣ ಶಿವಯೋಗಿ, ಪಂಪ, ಕುಮಾರವ್ಯಾಸ ಉತ್ಸವ, 1907 ಮತ್ತು 1916ರಲ್ಲಿ ವಾಗ್ಭೂಷಣ ಪತ್ರಿಕೆ, 'ಕನ್ನಡಿಗ' ದೈನಿಕ, ಜಯಕರ್ನಾಟಕ ಪತ್ರಿಕೆ, ಕರ್ಮವೀರ – ಸಾಪ್ತಾಹಿಕ ಪತ್ರಿಕೆ ಒಂದು ವರ್ಷ ನಡೆಸಿದರು. ಇವರಿಗೆ ಕನ್ನಡ ಜನತೆ, ಗೌರವಪೂರ್ವಕವಾಗಿ ದೇಶ ಸೇವಾಧುರೀಣ, ಸ್ವಭಾಷಾ ರಕ್ಷಕ, ಇನ್ನು ಮುಂತಾದ ಬಿರುದುಗಳೊಂದಿಗೆ ಗೌರವ ಅರ್ಪಿಸಿದ್ದಾರೆ.



ಅರಕಲಗೂಡು ನರಸಿಂಗರಾಯ ಕೃಷ್ಣರಾಯ

ಅ.ನ.ಕೃ. ಎಂದೇ ಖ್ಯಾತರು, ಕನ್ನಡದ ಏಕೀಕರಣದ ಪ್ರಮುಖ ಹೋರಾಟಗಾರ, ಕಾದಂಬರಿ ಸಾರ್ವಭೌಮ ಪ್ರಗತಿಶೀಲ ಸಾಹಿತ್ಯ ಚಳುವಳಿ ರೂವಾರಿ, ಪತ್ರಕರ್ತ, ಸಾಹಿತಿ, ಅ.ನ. ಕೃಷ್ಣರಾಯರಾಗಿದ್ದಾರೆ. "ಕರ್ನಾಟಕದಲ್ಲಿ ಎಲ್ಲಾ ಭಾಷೆಯ ಜನರೂ ಇರಲಿ, ಆದರೆ ಅವರು ನಮ್ಮೊಂದಿಗೆ ಹೊಂದಿಕೊಂಡು ಹೋಗಲಿ", ಮಾತೃ ಭಾಷೆಯನ್ನು ಮೆಟ್ಟಿ, ಮುನ್ನುಗ್ಗುವುದು ಸರಿಯಲ್ಲ ಎಂಬುದೇ ಅವರ ಮೂಲತತ್ವವಾಗಿತ್ತು. ತಮ್ಮ ಜೀವಮಾನದುದ್ದಕ್ಕೂ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಿದರು. ಅದಕ್ಕಾಗಿ "ಸಂಯುಕ್ತರಂಗ" ಎಂಬ ಸಂಸ್ಥೆ ಕಟ್ಟಿದರು. ತಮ್ಮ ಚಳುವಳಿ, ಭಾಷಣಗಳು, ಪತ್ರಿಕೆ, ಸಾಹಿತ್ಯದ ಮೂಲಕ ಕನ್ನಡಿಗರನ್ನು ಹುರಿದುಂಬಿಸಿ ಸ್ವಾಭಿಮಾನವನ್ನು ಜಾಗೃತಗೊಳಿಸಿದರು. ಇವರು ಒಟ್ಟು 115 ಕಾದಂಬರಿ, 18 ನಾಟಕಗಳು, 9 ಜೀವನಚರಿತ್ರೆ, 9 ಕಥಾಸಂಕಲನ, 2 ಅನುವಾದ ಗ್ರಂಥಗಳು, 11 ಸಂಪಾದಿತ ಮತ್ತು 9 ಸಂಕೀರ್ಣ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯ ಅಕಾಡೆಮಿ ಗೌರವ, ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಧಾನ ಮಾಡಿವೆ. ಸಂಘ ಸಂಸ್ಥೆಗಳು, ಕನ್ನಡ ಸೇನಾನಿ ಕಾದಂಬರಿ ಸಾರ್ವಭೌಮ, ರಸಚೇತನ, ಬಿರುದು ನೀಡಿ ಪುರಸ್ಕರಿಸಿವೆ. 'ಕಾಮಧೇನು' ಅಭಿನಂದನಾ ಗ್ರಂಥ ಸಮರ್ಪಣೆ, 1960ರಲ್ಲಿ 42ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, 1966ರಲ್ಲಿ ರಾಜ್ಯ ಪ್ರಶಸ್ತಿಗಳು ಸಂದಿವೆ.

ಹಚ್ಚೇವು ಕನ್ನಡದ ದೀಪ ಕರುನಾಡ ದೀಪ
ಸಿರಿನುಡಿಯ ದೀಪ ಒಲವೆತ್ತಿ ತೋರುವಾ ದೀಪ

– ಡಿ.ಎಸ್. ಕರ್ಕಿ

ಕನ್ನಡ ನಾಡ ರಾಣಿ

ಏಳು ಶೂರರ ರಾಣಿ । ಏಳು ಶೂರರ ಖಣೀ
ಏಳು ತೀರದ ವೀರರಸದ ವಾಣಿ । ಏಳು ಈ ಸ್ಥಿತಿಗಾಣಿ
ಏಳು ಮೀರಿದ ಜಾನಿ । ಏಳು ವರ ವರದ ಪಾಣಿ

–ಅಂಬಿಕಾತನಯದತ್ತ



ನೆನೆಯುದಾದರೆ ನೆನೆ ಕನ್ನಡದ ಹುತಾತ್ಮರನ್ನು

– ಇಂದಿರಾ ಕೃಷ್ಣಪ್ಪ



ರಂಜಾನ್‌ಸಾಬ್

ಸೆಪ್ಟೆಂಬರ್ 30 ರಂದು ರಾತ್ರಿ ಸಂಭ್ರಮದಿಂದ ಮರುದಿನವನ್ನು ಸ್ವಾಗತಿಸಲು ಕಾದಿದ್ದ ಬಳ್ಳಾರಿಯ ಜನತೆ ಅತೀವ ಅಘಾತದ ಸುದ್ದಿಯನ್ನು ಕೇಳಬೇಕಾಯಿತು. ಬಳ್ಳಾರಿ ಕನ್ನಡನಾಡಿನೊಂದಿಗೆ ವಿಲೀನವಾದ ಸಂತೋಷದ ಸಂಭ್ರಮ ಆಚರಿಸಬೇಕಾದ ಶುಭದಿನ, ಮೈಸೂರು ರಾಜ್ಯದ ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಇಲ್ಲಿ ಸಾರ್ವಜನಿಕ ಭಾಷಣ ಮಾಡುವವರಿದ್ದರು.ಕರ್ನಾಟಕ ಕ್ರಿಯಾ ಸಮಿತಿಯ ಸದಸ್ಯರಾಗಿದ್ದ ರಂಜಾನ್ ಸಾಬ್ ಕಟ್ಟಾ ಕನ್ನಡ ಪ್ರೇಮಿ. ಕನ್ನಡದ ರಂಜಾನ್‌ಸಾಬ್ ಬಳ್ಳಾರಿ–ಮೈಸೂರು ವಿಲೀನ ಸಮಾರಂಭದ ಸಭಾಮಂಟಪದ ರಚನೆ ಮತ್ತು ಉಸ್ತುವಾರಿ ಜವಾಬ್ದಾರಿ ಹೊತ್ತು, ಕೆಲಸ ಮಾಡುತ್ತಿದ್ದರು. ಸಭಾಮಂಟಪವನ್ನು ಸುಟ್ಟು ಹಾಕಲು ಕೆಲವು ದುಷ್ಟಶಕ್ತಿಗಳು ಸಂಚು ನಡೆಸುತ್ತಿವೆ ಎಂಬ ಸುಳಿವು ಸಿಕ್ಕಿದ ರಂಜಾನ್‌ಸಾಬ್ ಸಭಾಮಂಟಪದ ಕಾವಲನ್ನು ಬಿಗಿಗೊಳಿಸಿದರು. ಮತ್ತು ಖುದ್ದಾಗಿ ಕಾವಲು ಕಾಯಲು ನಿಂತರು. 30ನೆಯ ತಾರೀಕು ರಾತ್ರಿ ಕೆಲವು ದುಷ್ಕರ್ಮಿಗಳು ಮಂಟಪದಲ್ಲೇ ಮಲಗಿದ್ದ ರಂಜಾನ್ ಸಾಹೇಬರ ಮುಖದ ಮೇಲೆ ಆಸಿಡ್ ತುಂಬಿದ ಬಲ್ಬನ್ನೆಸದರು. ರಂಜಾನ್ ಸಾಬ್‌ರ ಮುಖದ ಮೇಲಿನ ಚರ್ಮ ಸುಟ್ಟುಹೋಯಿತು. ದುಷ್ಕರ್ಮಿಗಳನ್ನು ಹಿಡಿಯಲು ರಂಜಾನ್ ಪ್ರಯತ್ನಿಸಿ ವಿಫಲರಾದರು. ಮಧ್ಯ ರಾತ್ರಿಯೇ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆಯಲ್ಲಿ 1953ರ ಅಕ್ಟೋಬರ್ 2ನೆಯ ತಾರೀಕು ಬೆಳಿಗ್ಗೆ 8 ಗಂಟೆಯ ಸುಮಾರಿಗೆ ರಂಜಾನ್ ಸಾಬ್ ನಿಧನರಾದರು. ಕನ್ನಡಿಗರಿಗೆ ರಂಜಾನ್ ಸಾಬ್ ಸಾವು ಅತ್ಯಂತ ದುಃಖದಾಯಕವಾಗಿದೆ.



ಮ. ರಾಮಮೂರ್ತಿ

ಕನ್ನಡ ವೀರಕೇಸರಿಯೆಂದೇ ಖ್ಯಾತರಾದವರು. ಮ. ರಾಮಮೂರ್ತಿ ಅವರು. ಕನ್ನಡ ಭಾಷೆ, ಡಬ್ಬಿಂಗ್ ಚಲನಚಿತ್ರಗಳು, ಕಾರ್ಮಿಕರ ಕನ್ನಡ ಹೋರಾಟ, ಕನ್ನಡ ಬಾವುಟ, ಕನ್ನಡ ಸಿನಿಮಾ ಪ್ರದರ್ಶನ, ಕನ್ನಡ ಫಲಕಗಳಿಗಾಗಿ ನಡೆಸಿದ ಹೋರಾಟಗಳಲ್ಲಿ ಮ. ರಾಮಮೂರ್ತಿ ಅವರ ಶ್ರಮ, ಜನಪರ ನಿಲುವುಗಳು, ಕನ್ನಡ ಪ್ರೇಮ ಸ್ಮರಣೀಯವಾಗಿವೆ. ಇಂತಹ ಬೀದಿ ಹೋರಾಟಗಳಿಂದಾಗಿ ಅವರ ಮೇಲೆ ಅಸಂಖ್ಯಾತ ಮೊಕದ್ದಮೆಗಳಿದ್ದವು. ಇದರಿಂದಾಗಿ ಜಾಮೀನು ಪ್ರಕರಣಗಳು ಹಾಗೂ ಪೋಲೀಸ್ – ನ್ಯಾಯಾಲಯ ಮೆಟ್ಟಿಲು ಹತ್ತುವುದೇ ಕಾಯಕವಾಯಿತು. ಕೈಯಲ್ಲಿ ಕಾಸಿಲ್ಲದೆ ಒದ್ದಾಡುತ್ತಿದ್ದಾಗ ಇವರ ಸ್ನೇಹಿತರು, "ಜೀವನೋಪಾಯದ ಅನುಕೂಲ ಮಾಡಿಕೊಂಡು ನಂತರ ನಿನ್ನ ಸಮಾಜ ಕಾರ್ಯಮಾಡು" ಎಂದು ಸಲಹೆ ನೀಡುತ್ತಿದ್ದರು. ಅವರ ಸಲಹೆಯಂತೆ ದುಡಿಮೆಯಿಲ್ಲದ ರಾಮಮೂರ್ತಿ, ಬೆಂಗಳೂರು ಸಮೀಪದ ಕಗ್ಗಲೀಪುರ ಜಮೀನಿನಲ್ಲಿ ವ್ಯವಸಾಯ ಮಾಡಲು ಬಾವಿ ತೋಡಿಸಲು ಆರಂಭಿಸಿದರು. ಬಾವಿಯಲ್ಲಿ ನೀರು ಬಂದಿರುವುದನ್ನು ಮಕ್ಕಳೊಂದಿಗೆ ಸಂತೋಷದಿಂದ ವೀಕ್ಷಿಸುತ್ತಿದ್ದಾಗ ಮಣ್ಣು ಕುಸಿದು ಮಕ್ಕಳೊಡನೆ ರಾಮಮೂರ್ತಿ ಅವರು ಭೂಮಿಯಲ್ಲಿ ಹೂತುಹೋದದ್ದು, ಕನ್ನಡ ಚಳುವಳಿಯ ಪ್ರಾಮಾಣಿಕ ನಾಯಕನನ್ನು ಕಳೆದುಕೊಂಡಂತಾಯಿತು.

ಎಂ. ನಾಗರಾಜ್

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ನಡೆಯುವ ರಾಮೋತ್ಸವ ಅಂದಿಗೂ ಇಂದಿಗೂ ಪ್ರಖ್ಯಾತವಾಗಿದೆ. ದಿ.27.02.1962ರಲ್ಲಿ ನಡೆದ ರಾಮೋತ್ಸವ ಸಮಾರಂಭದಲ್ಲಿ ಎಂ.ಎಸ್. ಸುಬ್ಬಲಕ್ಷ್ಮಿ ಅವರ ಸಂಗೀತ ಕಚೇರಿ ನಡೆಯುತ್ತಿತ್ತು. ಅದೇ ವೇಳೆಗೆ ರಾಮೋತ್ಸವದಲ್ಲಿ ಕನ್ನಡ ಗೀತೆಗಳಿಗೆ ಆದ್ಯತೆ ಇರಬೇಕೆಂದು ವೀರಕೇಸರಿ ಮ. ರಾಮಮೂರ್ತಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆದು, ಸಂಗೀತ ಕಚೇರಿ ಅರ್ಧಕ್ಕೆ ನಿಂತಿತ್ತು. ಇದು ಕನ್ನಡಕ್ಕಾಗಿ ಚಳುವಳಿ ರೂಪುಗೊಂಡ ಕಾಲ, ಎನ್ನಬಹುದು. ಇದರಿಂದಾಗಿ ಹಾದಿ ಬೀದಿಗಳಲ್ಲಿ ಪ್ರತಿಭಟಿಸುವ, ಕನ್ನಡಿಗರ ಅವಮಾನವನ್ನು ಸಹಿಸದ ಪ್ರತಿಭಟನೆಗಳು ಆರಂಭವಾದವು. ಮರುದಿನವೇ ಅನಕೃ ಅವರು ಗಾಂಧೀ ಬಜಾರ್‌ನಲ್ಲಿ ಭಾಷಣ ಮಾಡಿದ್ದು, ಅಲ್ಲಿನವರಿಗೆ ದೀಕ್ಷೆ ಕೊಟ್ಟಂತಾಗಿತ್ತು. ಇದನ್ನು ಎಂ. ನಾಗರಾಜ್ ಅವರ ಪತ್ರಿಕೆ "ಕನ್ನಡ ಜಾಗ್ರತಿ ಪತ್ರ"ದಲ್ಲಿ ಬರೆದರು. ಕನ್ನಡಕ್ಕಾಗಿ ನಿಯಮಿತವಾಗಿ ಪತ್ರಿಕೆ ತರುತ್ತಿದ್ದ ಇವರು "ಧ್ರುವ" ಮಾಸ ಪತ್ರಿಕೆಯನ್ನು ಕನ್ನಡದ ವ್ಯಾಪಕವಾದ ಪ್ರಚಾರಕ್ಕಾಗಿ ಆರಂಭಿಸಿದರು. ಇದಕ್ಕಾಗಿ ಸಾಲ ಸೋಲ ಮಾಡಿದರು. ಪತ್ರಿಕೆ ನಷ್ಟದಲ್ಲಿ ಬಹಳ ದಿನ ನಡೆಸಿದರು. ಕಡೆಗೆ ಸಾಲ ತೀರಿಸಲಾರದೆ ಆತ್ಮಹತ್ಯೆಗೆ ಒಳಗಾದರು. ಸಾಮಾನ್ಯರ ತ್ಯಾಗಸೇವೆಗಳು ಚರಿತ್ರೆಯಲ್ಲಿ ದಾಖಲಾಗದೆ ಇರುವುದಕ್ಕೆ ಇವರ ಬದುಕು ಸಹ ನಿದರ್ಶನವಾಗಿದೆ.

ಮು. ಗೋವಿಂದರಾಜು

ಮಹಾಜನ್ ವರದಿಯ ಅನುಷ್ಠಾನಕ್ಕಾಗಿ ನಡೆದ ಕನ್ನಡ ಹೋರಾಟದ ಸಂದರ್ಭದಲ್ಲಿ ರೈಲು ತಡೆಯುವುದು ಸಹ ಚಳವಳಿಯ ಒಂದು ಭಾಗವಾಗಿತ್ತು. ಕನ್ನಡ ಪಕ್ಷ – 1970ರಲ್ಲಿ ರೈಲುತಡೆ ಸಪ್ತಾಹ ಆರಂಭಿಸಿತು. ಮೊದಲದಿನ ಮುಖಂಡರು, ರೈಲುತಡೆ ಚಳವಳಿಯಲ್ಲಿ ಭಾಗವಹಿಸುವುದೆಂದು ನಿರ್ಧಾರವಾಯಿತು. ಹೆಸರಿಗಾಗಿ, ರೈಲು ತಡೆದು ಪ್ರಚಾರ ಗಿಟ್ಟಿಸದೆ, ನಿಜವಾಗಿ ರೈಲು ತಡೆಯಬೇಕೆಂದು ನಿರ್ಧರಿಸಿದರಾದರೂ, ಎಲ್ಲರಲ್ಲೂ ಆತಂಕ ಮನೆಮಾಡಿತ್ತು. ಓಡುವ ರೈಲನ್ನು ತಡೆಯಲು ನಿರ್ಧರಿಸಿ ಶ್ರೀರಾಮಪುರದಲ್ಲಿ ಚಳವಳಿ ಆರಂಭಿಸಿದರು. ರೈಲು ಹಳಿಗಳ ಮೇಲೆ, ರೈಲುಬರುವ ವೇಳೆ ಅಡ್ಡವಾಗಿ ಮಲಗಲು ತೀರ್ಮಾನಿಸಿ, ಸಂಪಂಗಿರಾಮಯ್ಯ, ಜಗದೀಶ ರೆಡ್ಡಿ, ರಾಜಣ್ಣ, ಶಂಕರಪ್ಪ, ಕರ್ಲಮಂಗಲಂ ತಂಡ, ಶ್ರೀರಾಮಪುರಕ್ಕೆ ಧಾವಿಸಿದರು. ರೈಲು ಹತ್ತಿರ ಬರುತ್ತಿದ್ದಂತೆ ಚಾಲಕ ಹಳಿಗಳ ಮೇಲೆ ಮಲಗಿದವರನ್ನು ಕಂಡು ರೈಲು ನಿಲ್ಲಿಸಲು ಪ್ರಯತ್ನಿಸಿದ. ಆದರೆ ಫಲಕಾರಿಯಾಗಲಿಲ್ಲ ಮೊದಲು ಮಲಗಿದ್ದ ಸಂಪಂಗಿರಾಮಯ್ಯ, ಕರ್ಲಮಂಗಲಂ, ಶಂಕರಪ್ಪ ಇವರನ್ನು ಇಂಜಿನ್ ಎದುರಿನ ಬಂಪರ್ ಎತ್ತಿ ದೂರ ಬಿಸಾಕಿತು. ನಂತರ ಮಲಗಿದ್ದ ಮು. ಗೋವಿಂದರಾಜುವಿನ ಮೇಲೆ ರೈಲು ಚಕ್ರಗಳು ಹರಿದವು. ರೈಲು ಹಳಿಗಳ ಮೇಲೆ ಮಲಗಿ ಕನ್ನಡಕ್ಕಾಗಿ ಪ್ರಾಣತೆತ್ತ ಮು. ಗೋವಿಂದರಾಜುವಿನ ಮನದ ಅಂದಿನ ನುಡಿಗಳು ನಮ್ಮನ್ನು ಸದಾ ಕನ್ನಡಕ್ಕಾಗಿ ಜಾಗೃತರಾಗಿಸುತ್ತದೆ.

ಹೆಮ್ಮೆಯ ಕನ್ನಡಿಗ :


ದ.ರಾ. ಬೇಂದ್ರೆ (31.01.1896–26.10.1981)

– ಡಾ. ರಾಮಲಿಂಗೇಶ್ವರ (ಸಿಸಿರಾ)

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

ಅಂಬಿಕಾತನಯದತ್ತ ಕಾವ್ಯನಾಮಾಂಕಿತದ ದ.ರಾ.ಬೇಂದ್ರೆ ಅವರು ದಾರ್ಶನಿಕ, ಯುಗದ ಮಹಾನ್ ಕವಿಯಾಗಿದ್ದಾರೆ. ಸರ್ವ ಕಾಲಕ್ಕೂ ಸಲ್ಲುವಂತ ಕವನಗಳನ್ನು ರಚಿಸಿದ ಕೀರ್ತಿ ಅವರದು. ಬೇಂದ್ರೆ ಅವರ ಮನೆತನದ ಮೂಲ ಹೆಸರು ಠೋಸರ. ವೈದಿಕ ವೃತ್ತಿಯ ಕುಟುಂಬದವರಾಗಿದ್ದ ರಾಮಚಂದ್ರ ಭಟ್ಟ ಮತ್ತು ಅಂಬಿಕೆ(ಅಂಬವ್ವ) ದಂಪತಿಗಳ ಪುತ್ರನೇ ದತ್ತಾತ್ರೆಯ ರಾಮಚಂದ್ರ ಬೇಂದ್ರೆ ಅವರಾಗಿದ್ದಾರೆ. 1913ರಲ್ಲಿ ಮೆಟ್ರಿಕ್ಯುಲೇಶನ್, 1918ರಲ್ಲಿ ಬಿ.ಎ. ಪದವಿ ಪುಣೆಯ ಕಾಲೇಜಿನಲ್ಲಿ ಪಡೆದರು. ನಂತರ ಅಧ್ಯಾಪಕ ವೃತ್ತಿ. 1935ರಲ್ಲಿ ಎಂ.ಎ. ಮಾಡಿಕೊಂಡು ಕೆಲಕಾಲ (1944 – 1956) ಸೊಲ್ಲಾಪುರದ ಡಿ.ಎ.ವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಬೇಂದ್ರೆಯವರು ಲಕ್ಷ್ಮೀಬಾಯಿ ಅವರನ್ನು 1919ರಲ್ಲಿ ಹುಬ್ಬಳ್ಳಿಯಲ್ಲಿ ವಿವಾಹವಾದರು. ಅವರ ಪ್ರಥಮ ಕವನ ಸಂಕಲನ "ಕೃಷ್ಣ ಕುಮಾರಿ"ಯು ಆಗಲೇ ಪ್ರಕಟವಾಗಿತ್ತು. ಅವರ ಕಾವ್ಯದ ಪ್ರತಿ ಸೊಲ್ಲುಗಳು, ನಾಡಿ ಮಿಡಿತದಂತೆ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಜೀವನನಾಡಿಯನ್ನು ಮಿಡಿಯುತ್ತವೆ. ನಿಸ್ವಾರ್ಥಿ "ಧಾರವಾಡದ ಅಜ್ಜ" ಅವರ, ಮಕ್ಕಳ ಕವಿತೆ ಕತೆಗಳು ಮಕ್ಕಳನ್ನು ಕುಣಿಯುವಂತೆ ಮಾಡು

"ಕುಣಿಯೋಣು ಬಾರಾ ಕುಣಿಯೋಣು ಬಾ", "ಇಳಿದು ಬಾ ತಾಯಿ ಇಳಿದು ಬಾ", "ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು", ನಾರಿ ನಿನ್ನ ಮಾರಿಮ್ಯಾಗ, ಪಾತರಗಿತ್ತಿ ಪಕ್ಕ, ಕುರುಡು ಕಾಂಚಾಣ ಇನ್ನೂ ಮುಂತಾದ ಕವಿತೆಗಳನ್ನು ಕೇಳದ ಕನ್ನಡಿಗನಿಲ್ಲ. ಉತ್ಸಾಹದ ಚಿಲುಮೆಯನ್ನುಕ್ಕಿಸಬಲ್ಲ, ನೊಂದ ಜೀವಕೆ ಸಾಂತ್ವನ ನೀಡಬಲ್ಲ, ಪ್ರೀತಿ ಪ್ರೇಮ ಮೂಡಿಸುವ ಕವಿತೆಗಳ ವರಕವಿ ಬೇಂದ್ರೆ, "ರಸವೇ ಜನನ, ವಿರಸ ಮರಣ, ಸಮರಸವೆ ಜೀವನ" ಎಂದು ಜೀವನದ ಸಾರಸತ್ವವನ್ನು ನುಡಿಮುತ್ತಿನಂತೆ ಹೇಳಿದ್ದಾರೆ. ಅವರ ಮೊದಲ ಕವನ "ಪ್ರಭಾತ" ಎಂಬ ಪತ್ರಿಕೆಯಲ್ಲಿ 1918ರಲ್ಲಿ ಪ್ರಕಟವಾಯಿತು. ಅಲ್ಲಿಂದಾಚೆಗೆ ಅವರು ಕಾವ್ಯಸುಧೆ ಧುಮ್ಮಿಕ್ಕಿ ಹರಿಯಿತು. "ಗರಿ", "ಕಾಮಕಸ್ತೂರಿ", "ಸೂರ್ಯಪಾನ", "ನಾದಲೀಲೆ", "ನಾಕುತಂತಿ" ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದರು. ಇವರ ನಾಕುತಂತಿ ಕೃತಿಗೆ 1974ರಲ್ಲಿ ಜ್ಞಾನಪೀಠ ಪ್ರಶಸ್ತಿ ಬಂದಿತು. ಕವಿತೆಗಳನ್ನಲ್ಲದೆ ನಾಟಕಗಳು, ಸಂಶೋಧನಾತ್ಮಕ ಲೇಖನಗಳು, ವಿಮರ್ಶೆಗಳನ್ನು ಅವರು ಬರೆದಿದ್ದಾರೆ. 1921ರಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾವು ಏರಿದ್ದ ಸಮಯ. ಬೇಂದ್ರೆ ಅವರ "ಗರಿ" ಕವನ ಸಂಕಲನದಲ್ಲಿನ "ನರಬಲಿ" ಎಂಬ ಕವನವು ಅಂದಿನ ಬ್ರಿಟಿಷ್ ಸರ್ಕಾರದ ಕೋಪಕ್ಕೆ ಕಾರಣವಾಯಿತು. ದೇಶಪ್ರೇಮಿ ಬೇಂದ್ರೆ ಚಳುವಳಿಯಲ್ಲಿ ಭಾಗವಹಿಸಿ ಕೆಲಕಾಲ ಸೆರೆಮನೆವಾಸವನ್ನೂ ಅನುಭವಿಸಿದರು.



ಉತ್ತಮ ವಾಗ್ಮಿಗಳಾಗಿದ್ದ ಬೇಂದ್ರೆ ಅವರ ಉಪನ್ಯಾಸಗಳೆಂದರೆ ಜನರಿಗೆ ಹಿಗ್ಗು. ಅವರ ಮಾತೆಲ್ಲ ಕವನೋಪಾದಿಯಲ್ಲಿಹೊರ ಹೊಮ್ಮುತ್ತಿದ್ದವು. ಕನ್ನಡ ಮಾತ್ರವಲ್ಲದೆ ಮರಾಠಿ ಭಾಷೆಯಲ್ಲೂ ಇವರು ಕೆಲವು ಕೃತಿಗಳನ್ನು ರಚಿಸಿದರು. ಆಧ್ಯಾತ್ಮದಲ್ಲಿ ಒಲವು ಹೆಚ್ಚಾದಂತೆ ಅರವಿಂದರ ವಿಚಾರಗಳಲ್ಲಿ ಆಸಕ್ತಿ ಹೊಂದಿ ಅರವಿಂದರ ಕೃತಿಗಳನ್ನು ಇಂಗ್ಲೀಷಿನಿಂದ ಅನುವಾದ ಮಾಡಿದರು. ಜಾನಪದ ಧಾಟಿಯ, ಪ್ರಾಸ ಪ್ರಧಾನವಾದ ಅವರ ಕವಿತೆಗಳನ್ನು ಗಾಯಕರು ಸುಶ್ರಾವ್ಯವಾಗಿ ಹಾಡಿದ್ದಾರೆ. ಅವರ ಕವಿತೆಗಳ ನಾದಮಾಧುರ್ಯ ಅಪಾರ. ಇವರ "ಪಾತರಗಿತ್ತಿ ಪಕ್ಕ, ನೋಡಿದೇನ ಅಕ್ಕ" ಇಂದಿಗೂ ಚಿಣ್ಣರ ಪ್ರೀತಿಯ ಕವನವಾಗಿದೆ. ಗಣಿತದ ಲೆಕ್ಕಾಚಾರ ಮಾಡುತ್ತ ಬಾಳೆಹಣ್ಣಿನ ಗೊನೆಯಲ್ಲಿ, ಹಲಸಿನ ಮುಳ್ಳುಗಳಲ್ಲಿ, ಜೇನುಗೂಡಿನಲ್ಲಿ, ಕಿರುಬೆರಳಿನ ಅಂಚಿಗಿಂತ ಚಿಕ್ಕದಾಗಿರುವ ಹೂವುಗಳಲ್ಲಿ, ಎಲ್ಲೆಲ್ಲೂ ಲೆಕ್ಕಾಚಾರವಿದೆ ಎನ್ನುತ್ತಾ, ಕೊನೆಗೆ ಅವರು ಗಣಿತದ ಲೆಕ್ಕಾಚಾರದಲ್ಲೇ ಮುಳುಗಿದ್ದರು. ಇವರನ್ನು "ಕನ್ನಡದ ಠಾಗೋರ್" ಎಂದು ಕರೆಯಲಾಗುತ್ತದೆ. "ನಮನ" ಕವಿತೆ ಮೂಲಕ ಬೇಂದ್ರೆಯವರು ಸಂಖ್ಯೆಗಳ ಹೊಸ ಲೋಕವೊಂದನ್ನು ತೆರೆದರು. ಬೇಂದ್ರೆ ಅವರು, ಮನಸ್ಸಿಗೆ–441 ಹಾಗೂ ಹೃದಯಕ್ಕೆ–881 ಎಂದು ಸಂಖ್ಯೆ ನೀಡಿದ್ದರು.

ಇವರಿಗೆ, 1943ರಲ್ಲಿ ಶಿವಮೊಗ್ಗದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ. 1958ರಲ್ಲಿ 'ಅರಳು ಮರಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1964ರ ಮೈಸೂರು ದಸರಾದಲ್ಲಿ ಗೌರವಸನ್ಮಾನ, 1965ರಲ್ಲಿ "ಸಂವಾದ" ಮರಾಠಿ ಕೃತಿಗೆ ಕೇಳ್ಕರ್ ಬಹುಮಾನ, 1968ರಲ್ಲಿ 'ಪದ್ಮಶ್ರೀ', 1973ರಲ್ಲಿ 'ನಾಕುತಂತಿ' ಕೃತಿಗೆ ಜ್ಞಾನಪೀಠಪ್ರಶಸ್ತಿ, ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್ ಗೌರವಗಳು ಸಂದಿವೆ.

ನಾವು ಬಂದೆವಲ್ಲಿಂದಿಲ್ಲಿಗೆ
ಬಾಯಿ ಬಿಟ್ಟವಲ್ಲ ಮಲ್ಲಿಗೆ
ನೀರೊಡಿದಿತಲ್ಲ ಕಲ್ಲಿಗೆ
ನೀವು ಹೊರಟಿದ್ದೀಗ ಎಲ್ಲಿಗೆ ।
ಬಿಂತ್ಯಾಕ ನಿಮಗ ಇಂದು ಮುನಿಸು
ಬೀಳಲಿಲ್ಲ ನಮಗ ಇದರ ಕನಸು
ರಾಯ ತಿಳಿಯಲಿಲ್ಲ ನಿಮ್ಮ ಮನಸು
ನೀವು ಹೊರಟಿದ್ದೀಗ ಎಲ್ಲಿಗೆ॥



ಭಾರತೀಯರ ಮಾತೆ ಕಸ್ತೂರ್‌ಬಾ ಮತ್ತು ಸುಭಾಷ್ ಚಂದ್ರ ಬೋಸ್

– ಸುಭಾಷ್ ಗಟಾಡೆ

ದೇಶವು ಕಸ್ತೂರ್‌ಬಾ ಅವರ 75ನೇ ಪುಣ್ಯತಿಥಿಯನ್ನು ಹಾಗೂ 150ನೇ ಜನ್ಮದಿನವನ್ನು ಜ್ಞಾಪಿಸಿಕೊಳ್ಳುವ ಸಂದರ್ಭದಲ್ಲಿ ಅವರ 60ಕ್ಕೂ ಹೆಚ್ಚು ವರ್ಷಗಳ ಅವಧಿಯ ಸಾರ್ವಜನಿಕ ಬದುಕಿನ ಹಲವು ಮುಖಗಳು ನಮ್ಮೆದುರು ಬಂದು ನಿಲ್ಲುತ್ತವೆ. ಒಬ್ಬಳು ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಹಲವಾರು ನಾಗರಿಕ ಪ್ರತಿಭಟನೆಗಳಲ್ಲಿ ಓರ್ವ ಕಾರ್ಯಕರ್ತೆಯಾಗಿ ಅವರು ಭಾಗವಹಿಸಿದ್ದರು.

ಸಾವರ್ಕರ್ ಅವರು ಯಾವುದೇ ಅಳುಕು, ಮುಜುಗರ ಇಲ್ಲದೆ ಗಾಂಧೀಜಿಯ ದೇಶಭಕ್ತಿಯನ್ನು ಪ್ರಶ್ನಿಸಿದ್ದರು. ಆದರೆ ಆಗ ಅವರು (ಮತ್ತು ಅವರ ಹಿಂದೂ ಮಹಾಸಭಾ) ಸಿಂಧ್ ಮತ್ತು ಬಂಗಾಳ ಪ್ರಾಂತದಲ್ಲಿ ಮುಸ್ಲಿಮರ ಜೊತೆ ಕೈಜೋಡಿಸಿ ಸಮ್ಮಿಶ್ರ ಸರಕಾರಗಳನ್ನು ನಡೆಸುತ್ತಿದ್ದರು ಮತ್ತು ಯಾವುದೇ ಮುಜುಗರ ಇಲ್ಲದೆ ಈ ಅಧಿಕಾರ ಹಂಚಿಕೆಯನ್ನು ಅವರು ಸಮರ್ಥಿಸಿಕೊಂಡಿದ್ದರು. "ಪ್ರಾಯೋಗಿಕ ರಾಜಕಾರಣದಲ್ಲಿ ಕೂಡ ನಾವು ತಕ್ಕಮಟ್ಟಿನ ರಾಜಿ ಪಂಚಾಯಿತಿಗಳ ಮೂಲಕ ಮುಂದುವರಿಯಬೇಕೆಂದು ಮಹಾಸಭಾಕ್ಕೆ ತಿಳಿದಿದೆ".

ಅವರ ಬಲಗೈಯಂತಿದ್ದ ಶ್ಯಾಮಪ್ರಸಾದ್ ಮುಖರ್ಜಿ ಬಂಗಾಳ ಸರಕಾರದಲ್ಲಿ ಮುಖ್ಯವಾದ ಹುದ್ದೆ ಹೊಂದಿದ್ದರು. ಮುಖರ್ಜಿ ಅವರ ಬಳಿಕ ಇವರು ಹಿಂದೂ ಮಹಾಸಭಾದ ಅಧ್ಯಕ್ಷರಾದರು.

ಕಾಂಗ್ರೆಸ್‌ಗೆ ಎದುರಾಗಿ ಹಿಂದೂ ಸಂಘಟನಾಕಾರರನ್ನು ಬಲಪಡಿಸುವುದು ಗಾಂಧಿ ಮತ್ತು ಕಸ್ತೂರ್‌ಬಾ ಅವರನ್ನು ಅಮುಖ್ಯಗೊಳಿಸುವ, ಅವರ ಪಾತ್ರವನ್ನು ಚಿಕ್ಕದಾಗಿಸುವುದು ತಂತ್ರದ ಹಿಂದಿನ ಉದ್ದೇಶವಾಗಿರಬಹುದು.

1942ರಲ್ಲಿ ಕಾಂಗ್ರೆಸ್ "ನಿಷೇಧ ಮತ್ತು ರಾಜಕೀಯ ರಂಗದಿಂದ ಒಂದು ಮುಕ್ತ ವೇದಿಕೆಯಾಗಿ ಅದನ್ನು ಕಿತ್ತು ಹಾಕಿದಾಗ 'ಭಾರತೀಯ ರಾಷ್ಟ್ರೀಯ' ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಕೇವಲ ಹಿಂದೂ ಮಹಾಸಭಾ ಮಾತ್ರ ಉಳಿದಂತಾಗಿದೆ" ಎಂಬುದು ಸಾವರ್ಕರ್ ಅವರ ಅಭಿಪ್ರಾಯವಾಗಿತ್ತು. ಕಸ್ತೂರ್‌ಬಾ ಸ್ಮಾರಕ ನಿಧಿಗಾಗಿ ಸಂಗ್ರಹಿಸಲ್ಪಟ್ಟ ಹಣವನ್ನು ಕಾಂಗ್ರೆಸ್ ಹಿಂದೂ ಮುಸ್ಲಿಂ ಏಕತೆಗಾಗಿ ಬಳಸುತ್ತದೆ. ಮತ್ತು ಅಂತಿಮವಾಗಿ ಅದು ಮುಸ್ಲಿಂ ನಿಧಿಗೆ ಹೋಗುತ್ತದೆ ಎಂದು ಸಾವರ್ಕರ್ ಹೇಳಿದ್ದರು.



ಹಿಂದುತ್ವದ ಈ ಸಿದ್ಧಾಂತದಿಂದ ಪ್ರಭಾವಿತರಾಗಿ ಇರಬಹುದು; ಪೂನಾದ ಅವರ ಅನುಯಾಯಿಯೊಬ್ಬ ಕಸ್ತೂರ್‌ಬಾ ಅವರನ್ನು ನಿಂದಿಸುವುದರಲ್ಲಿ ಇನ್ನೂ ಒಂದೆಜ್ಜೆ ಮುಂದೆ ಹೋದ. ಎಸ್.ಎಲ್. ಕರಂಡಿಕರ್ "ಕಸ್ತೂರ್‌ಬಾ ಅವರೇ ಸ್ವತಃ ಶಿಕ್ಷಿತೆಯಲ್ಲ; ಮಹಿಳಾ ಶಿಕ್ಷಣವನ್ನು ಆರಂಭಿಸಿದ ಮೊದಲಿಗರೂ ಅಲ್ಲ. ಹಾಗಿರುವಾಗ ಕಸ್ತೂರ್‌ಬಾ ಸ್ಮಾರಕವಾಗಿ ಹುಡುಗಿಯರಿಗೆ ಹಾಗೂ ಮಹಿಳೆಯರಿಗೆ ಶಾಲೆಗಳನ್ನು ಯಾಕೆ ತೆರೆಯಬೇಕು? ಕಸ್ತೂರ್‌ಬಾ ಒಬ್ಬಳು ಪಕ್ಕಾ ಹಿಂದೂ ಮಹಿಳೆ. ಹಿಂದೂ ಮಹಿಳೆಯ ಪರಮ ಸಂತೋಷ, ಕರ್ತವ್ಯ ಎಂದರೆ ಅವಳ ಗಂಡನ ಬದುಕಿನ ಒಂದು ಭಾಗವಾಗುವುದು. ಕಸ್ತೂರ್‌ಬಾ ಅವರ ಬದುಕು ಮತ್ತು ಸಾವು ಇಷ್ಟೇ ಅಲ್ಲದೆ ಇನ್ನೇನು?" ಎಂದಿದ್ದರು. ಆದ್ದರಿಂದ ಹಿಂದೂ ಸ್ತ್ರೀತ್ವದ ಪರಂಪರೆಯನ್ನು ವೈಭವೀಕರಿಸುವ ಒಂದು ಸ್ಮಾರಕವಾಗಿ ಸ್ಥಾಪಿಸಬೇಕು.

ಮುಂದುವರಿಯುವುದು...

ಸೌಜನ್ಯ : ವಾರ್ತಾಭಾರತಿ : ದಿ.11.03.2019
ಸಂಗ್ರಹ : ಡಾ. ವಿ. ಪ್ರಶಾಂತ್, ಸಂ : ಬೆಂ. ಗ್ರಾ. ಜಿಲ್ಲೆ

ಎಲ್ಲಾದರು ಇರು, ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು
ಕನ್ನಡ ಗೋವಿನ ಓ ಮುದ್ದಿನ ಕರು
ಕನ್ನಡತನವೊಂದಿದ್ದರೆ ನೀನಮಗೆ ಕಲ್ಪತರು

ಕುವೆಂಪು

ಕನ್ನಡಿಗರ ತಾಯಿ

ಎಂ. ಗೋವಿಂದ ಪೈ

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ
ಹರಸು ತಾಯಿ, ಸುತರ ಕಾಯೆ, ನಮ್ಮ ಜನ್ಮದಾತೆಯೆ
ನಮ್ಮ ತಪ್ಪನೆನಿತೊ ತಾಳ್ವೆ
ಅಕ್ಕರೆಯಿಂದೆಮ್ಮ ನಾಳ್ವೆ
ನೀನೆ ಕಣಾ ನಮ್ಮ ಬಾಳ್ವೆ
ನಿನ್ನ ಮರೆಯಲಮ್ಮೆವು
ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು

ಹೊತ್ತಿತೋ ಹೊತ್ತಿತೋ ಕನ್ನಡದ ದೀಪ

ಕಾವ್ಯಾನಂದ

ಹೊತ್ತಿತೋ ಹೊತ್ತಿತು ಕನ್ನಡದ ದೀಪ
ಮುಗಿಯಿತೋ ಮುಗಿಯಿತು ಶತಮಾನಗಳ ಶಾಪ
ಹೊತ್ತಿತೋ ಹೊತ್ತಿತು ಕನ್ನಡದ ದೀಪ

ಕಣ್ಣು ಕುಕ್ಕಿಸುವಂತೆ ದೇದೀಪ್ಯಮಾನ
ಹರ್ಷವುಕ್ಕಿಸುವಂತೆ ಶೋಭಾಯಮಾನ
ಕನ್ನಡದ ಮನೆಯಾಗೆ ಜ್ಯೋತಿರ್ನಿಧಾನ
ಕನ್ನಡದ ಪ್ರಾಣ ಕನ್ನಡದ ಮಾನ
ಹೊತ್ತಿತೋ ಹೊತ್ತಿತು ಕನ್ನಡದ ದೀಪ

ಕರ್ನಾಟಕ ಕಟ್ಟಿದ ಕೃಷ್ಣರಾಜ

ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)


ಈ ವಿವಾದ ಮೈಸೂರಿನವರೇ ಆದ ಸರ್. ಎಂ. ವಿಶ್ವೇಶ್ವರಯ್ಯನವರು ದಿವಾನರಾಗುವವರೆಗೂ ಮುಂದುವರೆದಿತ್ತು. ಅದುವರೆವಿಗೂ ಮದ್ರಾಸ್ ಬ್ರಾಹ್ಮಣರನ್ನು ಮೈಸೂರು ಆಡಳಿತಕ್ಕೆ ಅಧಿಕಾರಿಗಳನ್ನಾಗಿ ತೆಗೆದುಕೊಳ್ಳುವ ಕಾರ್ಯವೂ ಅಂದಿನಿಂದ ನಿಂತುಹೋಯಿತು. ಜೊತೆಗೆ ಆಯಾಯ ಜನಾಂಗದ ಮುಖಂಡರುಗಳು, ವೀರಶೈವ ಮಹಾಸಭಾ, ಮೈಸೂರು ಲಿಂಗಾಯಿತ ಶೈಕ್ಷಣಿಕ ದತ್ತಿ ಸಂಘ, ಒಕ್ಕಲಿಗರ ಸಂಘ, ಮಹಮದೀಯ ಕೇಂದ್ರೀಯ ಸಂಘಗಳನ್ನು ಸ್ಥಾಪಿಸಿ, ಜನಾಂಗದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಲು ಪ್ರಯತ್ನಿಸಿದರು. ಅದರೊಂದಿಗೇ ಆಡಳಿತದಲ್ಲಿ ಹಾಗೂ ರಾಜಕೀಯದಲ್ಲಿ ಪ್ರಾತಿನಿಧ್ಯವೂ ಈ ಸಂಘಟನೆಗಳ ಗುರಿಯಾಗಿದ್ದವು. ಇದೇ ಸಂದರ್ಭದಲ್ಲಿ, ಮದ್ರಾಸ್‌ನಲ್ಲಿ ಬ್ರಾಹ್ಮಣೇತರ ಚಳುವಳಿಯ ಮುಖಂಡರಾಗಿದ್ದ ಸಿ.ಆರ್. ರೆಡ್ಡಿಯವರು ಮೈಸೂರಿನ ಮಹಾರಾಜ ಕಾಲೇಜಿನ ಪ್ರೊಫೆಸರ್ ಆಗಿ ನೇಮಕಗೊಂಡರು. ಇವರೇ ಮುಂದೆ ಬ್ರಾಹ್ಮಣೇತರ ಸಂಘಟನೆಯ ರೂವಾರಿಯಾದರು. ಇವರು 1917ರಲ್ಲಿ ಪ್ರಜಾಮಿತ್ರ ಮಂಡಳಿ ಎಂಬ ರಾಜಕೀಯ ಪಕ್ಷವನ್ನು ಪ್ರಥಮವಾಗಿ ಮೈಸೂರಿನಲ್ಲಿ ಸ್ಥಾಪಿಸಿದರು. ಮೈಸೂರಿನಲ್ಲಿ ಪ್ರಜಾ ಪ್ರತಿನಿಧಿಸಭೆಯಲ್ಲಿ ಮತ್ತು ನ್ಯಾಯ ವಿಧೇಯಕ ಸಭೆಯಲ್ಲಿ ಬ್ರಾಹ್ಮಣೇತರರಿಗೆ ಅವಕಾಶಕ್ಕಾಗಿ ಪ್ರಸ್ತಾವನೆಗಳು ಕೇಳಿಬರತೊಡಗಿದವು. "ಮೈಸೂರು ಸ್ಟಾರ್" ಈ ಧ್ವನಿಗಳ ಪ್ರತಿಧ್ವನಿಯಾಗಿ ಮೊಳಗಿತು. ಆಗಿನ ಬ್ರಾಹ್ಮಣೇತರ ಸಂಘಟನೆಯ ನಾಯಕರಾದ ಎಂ. ಬಸವಯ್ಯ ಹಿಂದುಳಿದ ಜಾತಿಗಳ ಪ್ರಾತಿನಿಧ್ಯಕ್ಕಾಗಿ, ನ್ಯಾಯ ವಿಧೇಯಕ ಸಮಿತಿಯ ಮುಂದೆ ಒಂದು ಪ್ರಸ್ತಾವನೆಯನ್ನು ಮಂಡಿಸಿದರು.



"ಪುರಸಭೆಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯಾಬಲವನ್ನು ಹೆಚ್ಚಿಸಲಾಗುತ್ತಿರುವಂತೆ, ವಿವಿಧ ಹಿಂದುಳಿದ ಕೋಮುಗಳಿಗೆ ಮೀಸಲಾತಿ ನೀಡಬೇಕು, ಮೈಸೂರು ಹಾಗೂ ಬೆಂಗಳೂರು ಪುರಸಭೆಗಳಲ್ಲಿ ಹಾಗೂ ಮತ್ತಿತರೆ ಪುರಸಭೆಗಳಲ್ಲಿ ಕ್ರಮವಾಗಿ ಶೇಕಡಾ 40% ಹಾಗೂ ಶೇಕಡಾ 50% ಬ್ರಾಹ್ಮಣರ ಸದಸ್ಯತ್ವವಿದೆ. ಇತರೆ ಕೋಮಿನವರ ಪ್ರಾತಿನಿಧ್ಯಕ್ಕಾಗಿ ಮೀಸಲಾತಿ ನೀಡಬೇಕು ಹಾಗೂ ಹಿಂದುಳಿದವರ ಶೈಕ್ಷಣಿಕ ಸೌಲಭ್ಯಗಳಿಗಾಗಿ ಒಂದು ಲಕ್ಷ ರೂಪಾಯಿಗಳನ್ನು ಮೀಸಲಿಡಬೇಕು" ಎಂಬ ವಿಷಯವನ್ನು ಮಂಡಿಸಿದರು.

ಮುಂದುವರಿಯುವುದು...


ಸೌಜನ್ಯ : ಕ.ಆ.ಸೇ. ಸಂಘದ 2013–14ರ 'ಅನುಷ್ಠಾನ' ಸಂಚಿಕೆ



ಅನಂತ ಪೈ–ಕಿರುಪರಿಚಯ : ಭಾರತದ ಕಾಮಿಕ್ಸ್ ಜಗತ್ತಿಗೆ ಭಾಷ್ಯ ಬರೆದ ಕನ್ನಡವನ್ನು ಅಂತರರಾಷ್ಟ್ರೀಯಗೊಳಿಸಿದ ದಂತಕಥೆ

ಭಾರತದ ಇತಿಹಾಸ, ಪುರಾಣ, ಮಹಾಕಾವ್ಯಗಳಲ್ಲಿ ಮಕ್ಕಳಿಗೆ ರುಚಿಸುವ ಕತೆಗಳನ್ನು ಆರಿಸಬೇಕು. ಮಕ್ಕಳ ಮನಸ್ಸಿಗೆ ಮತ್ತು ವಯಸ್ಸಿಗೆ ಅನುಗುಣವಾಗಿ ಕಥೆ ಹೇಳಬೇಕು. ಕತೆಗಳೆಲ್ಲವೂ ಹೆಚ್ಚಾಗಿ ಚುರುಕು ಸಂಭಾಷಣೆಯನ್ನು ಒಳಗೊಳ್ಳುವಂತಿರಬೇಕು. ಕತೆಗೆ, ಸಂಭಾಷಣೆಗೆ ತಕ್ಕಂತ ಸುಂದರ ಚಿತ್ರಗಳನ್ನು ಬರೆಸಬೇಕು. ಅವನ್ನು ಕಾಮಿಕ್ಸ್ ರೂಪಕ್ಕೆ ಹೊಂದಿಸಿ ನಂತರ ಪ್ರಕಟಿಸಬೇಕು. ಕತೆಗಳ ಆಯ್ಕೆಯಿಂದ ಮೊದಲ್ಗೊಂಡು ಅವು ಹೊತ್ತಗೆಗಳಾಗಿ ಹೊರಬರುವವರೆಗಿನ ಮೇಲುಸ್ತುವಾರಿ ಎಲ್ಲವೂ ಅನಂತ ಪೈಗಳದ್ದೇ. ಯಾವ ಹಂತದಲ್ಲೂ ಮಕ್ಕಳಿಗೆ ಮುಜುಗರವಾಗುವಂಥ ಸಂಭಾಷಣೆ, ಚಿತ್ರಗಳಿರಬಾರದು. ತಪ್ಪು ಸಂದೇಶ ಹೋಗುವಂತಿರಬಾರದು. ನಮ್ಮ ಸಂಸ್ಕೃತಿಯ ಬಗ್ಗೆ ನಮಗೇ ಅಸಹ್ಯ ಹುಟ್ಟುವಂತಿರಬಾರದು. ಎಷ್ಟೊಂದು ಸವಾಲುಗಳು! ಆದರೆ ಅನಂತ ಪೈ ಯಾವ ಬಿರುಗಾಳಿಗೂ ಜಗ್ಗದ ಹಡಗಿನ ಹಾಯಿಯಂತೆ ನಿಂತಿದ್ದರು. ತಜ್ಞರಿಂದಲೇ ಕತೆಗಳನ್ನು ಬರೆಸಿದರು. ಬರೆಸಿದ್ದನ್ನು ಮರುಪರಿಶೀಲಿಸಿದರು. ಅವಕ್ಕೆ ಬೇಕಾದ ಚಿತ್ರಗಳನ್ನು ನುರಿತ ಕಲಾವಿದರಿಂದ ಬರೆಸಿದರು. ಗುಣಮಟ್ಟದಲ್ಲಿ ರಾಜಿ ಇಲ್ಲವೇ ಇಲ್ಲ – ಇದು ಅವರು ಮೊದಲಿಂದಲೂ ಪಾಲಿಸಿಕೊಂಡು ಬಂದ ಕಠೋರನಿಷ್ಠೆ. ವಿದೇಶಿ ಕಾಮಿಕ್ಸ್‌ಗಳು ಮಕ್ಕಳ ಮನಸೂರೆಗೊಂಡಿದ್ದನ್ನು ಅರಿತ ಪೈ ಅವರು, ಭಾರತದ ಸಂಸ್ಕೃತಿ, ಕಾವ್ಯ, ಇತಿಹಾಸ, ಧರ್ಮ ಮುಂತಾದವುಗಳನ್ನು ಮಕ್ಕಳಿಗೆ ಪರಿಚಯಿಸಲು ಹೊಸತೇನಾದರೂ ಮಾಡಬೇಕೆಂದು ತುಡಿಯುತ್ತಿದ್ದ ಅವರ ಮನಸ್ಸಿನಲ್ಲಿ ಹೊತ್ತಗೆಯೊಂದನ್ನು ಪ್ರಕಟಿಸಲು ಮುಂದಾದರು. ಅದರ ಪರಿಣಾಮವೇ ಅಮರ ಚಿತ್ರಕಥಾ ಸರಣಿ. ಅಲ್ಲಿಂದ ಮುಂದಕ್ಕೆ ಅದು ನಿಲ್ಲದ ಓಟ. ವಾರವಾರವೂ ಹೊಸ ಪುಸ್ತಕಗಳ, ಹೊಸ ಸರಣಿಗಳ ಬಿಡುಗಡೆ. ಅನಂತ ಪೈಗಳು ಕಾಲಕ್ರಮದಲ್ಲಿ ರಂಗ್‌ರೇಖಾ ಫೀಚರ್ಸ್ ಎಂಬ ಮತ್ತೊಂದು ಕಾಮಿಕ್ಸ್ ಸರಣಿಯನ್ನೂ ಪ್ರಾರಂಭಿಸಿದರು. ಹೋದಲ್ಲೆಲ್ಲಾ ಅಮರ ಚಿತ್ರಕಥೆಯ ಪ್ರಚಾರ ಮಾಡಿದರು. ಮಕ್ಕಳಿಗೆ ಮಾತ್ರವಲ್ಲ, ಕಾಮಿಕ್ಸ್‌ಗಳ ಬಗ್ಗೆ ಅನಾಸಕ್ತಿ, ಅಸಡ್ಡೆ, ಪೂರ್ವಾಗ್ರಹಗಳಿದ್ದ ದೊಡ್ಡವರಿಗೂ ಅಮರ ಚಿತ್ರಕತೆಯ ಕಂತೆ ಕಂತೆ ಪುಸ್ತಕಗಳನ್ನು ಕೊಟ್ಟು ಓದಿಸಿದರು. 40 ವರ್ಷಗಳ ಅವಧಿಯಲ್ಲಿ ಅಮರ ಚಿತ್ರಕಥೆಯ ಪುಸ್ತಿಕೆಗಳು 36 ರಾಷ್ಟ್ರೀಯ, ಅಂತರರಾಷ್ಟ್ರೀಯ ಭಾಷೆಗಳಲ್ಲಿ ಪ್ರಕಟವಾದವು. ಪ್ರೀತಿ ವಿಶ್ವಾಸವನ್ನು ಮಾತ್ರ ಬಯಸಿದ್ದ ಪೈ ಅವರಿಗೆ 2019ಕ್ಕೆ ತೊಂಬತ್ತು ವರ್ಷ ತುಂಬಿದಾಗ ಅಮರ ಚಿತ್ರಕಥಾ ಸಂಸ್ಥೆ ಅವರದ್ದೇ ಜೀವನದ ಕಥೆಯನ್ನಾಧರಿಸಿ ಪುಟ್ಟ ಸಾಕ್ಷ್ಯಚಿತ್ರ ನಿರ್ಮಿಸಿ ಕೃತಜ್ಞತೆ ಮತ್ತು ಗೌರವಗಳನ್ನು ಸಮರ್ಪಿಸಿತು.

ಕೃಪೆ : ಕರ್ಮವೀರ ನವೆಂಬರ್ 10, 2019, ಸಂಗ್ರಹ : ಲೀಲಾ ವಾಸುದೇವ್. ಪ್ರಾಧ್ಯಾಪಕರು (ನಿ) ಮತ್ತು ಲೇಖಕರು



ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ

ಡಾ. ವೂಡೇ ಪಿ. ಕೃಷ್ಣ

'ವಿಶ್ವ ತತ್ವಜ್ಞಾನ ದಿನ'ವಾದ ಇಂದು 'ಮಹಾತ್ಮ ಗಾಂಧಿ : ರಾಜಕಾರಣವನ್ನು ಆಧ್ಯಾತ್ಮೀಕರಿಸಿದ ಸಂತ' ಎನ್ನುವ ವಿಚಾರ ಕುರಿತು ನನ್ನ ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ನನ್ನನ್ನು ಇಲ್ಲಿಗೆ ಆಹ್ವಾನಿಸಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಭಾರತೀಯ ತತ್ವಜ್ಞಾನ ಸಂಶೋಧನಾ ಪರಿಷತ್ತಿಗೆ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರಿನ ಗಾಂಧಿ ಭವನದಲ್ಲಿ ಇತ್ತೀಚೆಗೆ ನಡೆದ ಒಂದು ಸಮಾರಂಭದಲ್ಲಿ ಮಾತನಾಡಿದ ಹೆಸರಾಂತ ವಿದ್ವಾಂಸರಾದ ವಿದ್ವಾನ್ ಕೆ. ಜಿ. ಸುಬ್ರಾಯ ಶರ್ಮರು ಈ ಕೆಳಕಂಡ ಸಾಲುಗಳ ಮೂಲಕ ಗಾಂಧೀಜಿ ಅವರಿಗೆ ತಮ್ಮ ನಮನಗಳನ್ನು ಸಲ್ಲಿಸಿದರು.

ಆ ಸಾಲುಗಳು ಹೀಗಿವೆ ;

ಪಿತಾಮಹಾಯ ರಾಷ್ಟ್ರಸ್ಯ
ಸತ್ಯಸಂಧಾಯ ಧೀಮತೆ
ಈಶಾಗೀತಾರ್ಥ ನಿಷ್ಠಾಯ
ಮಹಾತ್ಮ ಗಾಂಧಿನೇ ನಮಃ

ನಿಜ, ಗಾಂಧೀಜಿ ಅವರು ಈಶನಿಷ್ಠರೂ, ಗೀತೆಯ ನಿಷ್ಠರೂ, ರಾಮ ಭಕ್ತರೂ ಆಗಿದ್ದರು. ಎಂಥ ಅನರ್ಘ್ಯ, ಅಮೂಲ್ಯವಾದ ಮಾತುಗಳನ್ನು ಶರ್ಮರು ಆಡಿದ್ದಾರೆ.

ಆತ್ಮವಿಮರ್ಶೆ

ಗಾಂಧೀಜಿ ಅವರನ್ನು ಮನುಕುಲದ ಸಕ್ರಿಯ ಆಧ್ಯಾತ್ಮಿಕ ನಾಯಕರಲ್ಲಿ ಒಬ್ಬರೆಂದು ಗುರುತಿಸಲಾಗಿದೆ. ಏಕೆಂದರೆ, ಈ ಲೌಕಿಕ ಜಗತ್ತಿನಲ್ಲಿದ್ದುಕೊಂಡೇ ಆಧ್ಯಾತ್ಮಿಕತೆಯನ್ನು ಅವರು ರೂಢಿಸಿಕೊಂಡಿದ್ದರು. ಅವರು ಸುತ್ತಮುತ್ತಲಿನ ಅನ್ಯಾಯ, ದ್ವೇಷ, ಕ್ಷುಲ್ಲಕತೆ, ಭಯ ಮತ್ತು ಹಿಂಸೆ ಇವುಗಳನ್ನೆಲ್ಲ ನ್ಯಾಯ, ಪ್ರೀತಿ, ಕರುಣೆ, ಸಮಚಿತ್ತ, ಧೈರ್ಯ ಮತ್ತು ಅಹಿಂಸೆಗಳ ಮೂಲಕವೇ ನಿವಾರಿಸಲು ಶ್ರಮಿಸಿದರು. ಗಾಂಧೀಜಿ ಅವರ ಬದುಕು, ಅವರ ಕಾಲದ ಉಳಿದೆಲ್ಲ ನಾಯಕರ ಬದುಕಿಗಿಂತ ಅತ್ಯಂತ ಪಾರದರ್ಶಕವಾಗಿತ್ತು. ಹೀಗಾಗಿಯೇ ಅವರು 'ನನ್ನ ಬದುಕೇ ನನ್ನ ಸಂದೇಶ' ಎಂದು ಘೋಷಿಸಿದರು.

ಗಾಂಧೀಜಿ ಅವರ ಆತ್ಮಕತೆ 'ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರೂತ್' (ನನ್ನ ಸತ್ಯಾನ್ವೇಷಣೆ) 1927ರಲ್ಲಿ ಪ್ರಕಟವಾಯಿತಷ್ಟೆ. ಅವರ 1920ರವರೆಗಿನ ಬದುಕಿನ ಕಥನವನ್ನು ಅದು ಒಳಗೊಂಡಿದೆ. ಈ ಆತ್ಮಕತೆಯಲ್ಲಿ ಗಾಂಧೀಜಿ ಅವರು ತಮ್ಮ ಬಾಲ್ಯ ಮತ್ತು ಪ್ರಾಯದ ದಿನಗಳಲ್ಲಿ ಆಧ್ಯಾತ್ಮಿಕತೆಯು ಹೇಗೆ ಪ್ರಭಾವ ಬೀರಿತು ಎನ್ನುವುದನ್ನು ದೀರ್ಘವಾಗಿ ಹೇಳಿಕೊಂಡಿದ್ದಾರೆ. ಬಾಲ್ಯದಲ್ಲಿ ಸತ್ಯಹರಿಶ್ಚಂದ್ರನನ್ನು ಕುರಿತು ನಾಟಕವನ್ನು ನೋಡಿ, ಅದರಿಂದ ಪ್ರಭಾವಿತರಾದ ಗಾಂಧೀಜಿ, ಜೀವನದಲ್ಲಿ ಯಾವತ್ತಿಗೂ ಸುಳ್ಳು ಹೇಳಬಾರದೆಂದು ತೀರ್ಮಾನಿಸಿದರು. ಅಷ್ಟೇ ಅಲ್ಲ, ಅವರು ಅಲ್ಲಿಂದಾಚೆಗೆ ತಮ್ಮ ಕೊನೆಯುಸಿರು ಇರುವವರೆಗು ಸುಳ್ಳನ್ನಾಡಲಿಲ್ಲ. ಅವರ ಪಾಲಿಗೆ 'ಸತ್ಯವೇ ದೇವರು ಮತ್ತು ದೇವರೇ ಸತ್ಯ'ವಾಗಿತ್ತು. ಆಧ್ಯಾತ್ಮಿಕತೆಯ ದೃಷ್ಟಿಯಿಂದ ಹೇಳುವುದಾದರೆ, ಗಾಂಧೀಜಿ ಅವರು ತಮ್ಮ ತಾಯಿ-ತಂದೆ ಮತ್ತು ಸಂತ ಜೈನ ಕವಿ ಶ್ರೀಮದ್ ರಾಜಚಂದ್ರ ಅವರಿಂದ ಪ್ರಭಾವಿತರಾಗಿದ್ದರು. ಅಂದಹಾಗೆ, ಇದು ಶ್ರೀಮದ್ ರಾಜಚಂದ್ರ ಅವರ 150ನೇ ಜನ್ಮ ದಿನಾಚರಣೆಯ ವರ್ಷವಾಗಿದೆ. ಇಂಥ ಗಾಂಧೀಜಿ ಅವರು ಭಗವದ್ಗೀತೆ, ಬೈಬಲ್, ಲಿಯೋ ಟಾಲ್‌ಸ್ಟಾಯ್ ಅವರ 'ಕಿಂಗ್ಡಮ್ ಆಫ್ ಗಾಡ್ ಈಸ್ ವಿತಿನ್ ಯು,' ಗ್ರಂಥಗಳನ್ನು ಓದಿದ್ದರು. ಅಲ್ಲದೆ, ಥೋರೋನ 'ಸಿವಿಲ್ ಡಿಸ್‌ಒಬಿಡಿಯನ್ಸ್' ಮತ್ತು ರಸ್ಕಿನ್ ಬಾಂಡ್‌ನ 'ಅನ್ ಟು ದಿಸ್ ಲಾಸ್ಟ್' ಕೃತಿಗಳಿಂದಲೂ ಅವರು ಅಪಾರ ಪ್ರಭಾವಕ್ಕೊಳಗಾಗಿದ್ದರು.

ಮುಂದುವರಿಯುವುದು...



ದೇಶಬಂಧು ಚಿತ್ತರಂಜನ್ ದಾಸ್ : (05.11.1870–16.06.1925)
ಇವರು ಇಂದಿನ ಬಂಗಾಳದ ಬಿಕ್ರಮ್ ಪುರ್, ಢಾಕಾ, ಅಂದಿನ ಬಾಂಗ್ಲಾದೇಶದ ಮುನ್ಷಿಗಂಜ್ ಜಿಲ್ಲೆಯ ಭಾಗವಾದ ತೆಲಿರ್ ಬಾಗ್‌ನ ಪ್ರಸಿದ್ಧ ದಾಸ್ ಕುಟುಂಬದಲ್ಲಿ ಜನಿಸಿದ್ದರು. ದೇಶಬಂಧು (ರಾಷ್ಟ್ರಮಿತ್ರ) ಎಂದೇ ಖ್ಯಾತರಾದ ಚಿತ್ತರಂಜನ್ ದಾಸ್‌ರು ಪ್ರಮುಖ ಬಂಗಾಳಿ ರಾಷ್ಟ್ರೀಯವಾದಿಗಳು, ವಕೀಲರು, ಲೇಖಕರೂ ಮತ್ತು ಕವಿಗಳಾಗಿದ್ದರು. ಭಾರತ ಸ್ವಾತಂತ್ರ್ಯ ಚಳುವಳಿಯ ನಾಯಕರಾಗಿದ್ದ ಇವರು ಬ್ರಿಟಿಷ್ ಭಾರತದ ಬಂಗಾಳದಲ್ಲಿ ಸ್ವರಾಜ್ ಪಕ್ಷ ಸ್ಥಾಪಿಸಿದ್ದರು. ಇಂಗ್ಲೆಂಡಿನಲ್ಲಿ ಕಾನೂನು ಪದವಿ ಪಡೆದ ಇವರು 1909ರಲ್ಲಿ ನಡೆದ 'ಆಲಿಪುರ ಸ್ಫೋಟ' ಘಟನೆಯಲ್ಲಿ ಅರವಿಂದ ಘೋಷ್ ಅವರ ಪರ ವಾದಿಸಿ ನ್ಯಾಯಾಂಗ ಬಂಧನದಿಂದ ಅವರನ್ನು ಮುಕ್ತಗೊಳಿಸಿದ್ದರು. ಅನೇಕ ಸಾಹಿತ್ಯ ಸಂಘಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದ ಇವರು ಹಲವಾರು ಲೇಖನಗಳು ಮತ್ತು ಪ್ರಬಂಧಗಳಲ್ಲದೆ ಕವನಗಳನ್ನು ಬರೆದರು. ಇವರ ಪತ್ನಿ ಬಸಂತಿದೇವಿಯವರೂ ಸಹ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು 1921ರ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿ ಕೋರ್ಟ್ ಮೆಟ್ಟಲೇರಿದ ಮೊದಲ ಮಹಿಳೆಯಾಗಿದ್ದಾರೆ. ನೇತಾಜಿ ಸುಭಾಸ್ ಚಂದ್ರ ಬೋಸ್ ಇವರನ್ನು 'ಮಾ' ಎಂದು ಪರಿಗಣಿಸಿದ್ದರು.

ಮಳೆಗಾಲದ ಆರೈಕೆ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ತುಟಿಗಳ ಆರೈಕೆ : ಪ್ರತಿದಿನ ರಾತ್ರಿ ಮಲಗುವಾಗ ತುಪ್ಪ ಅಥವಾ ಬೆಣ್ಣೆ ಇಲ್ಲವೇ ಮಜ್ಜಿಗೆ ತುಟಿಗಳಿಗೆ ಹಚ್ಚಿಕೊಂಡು ಮೃದುವಾಗಿ ಮಸಾಜ್ ಮಾಡಿಕೊಳ್ಳಬೇಕು.

ಸ್ನಾನದ ಚೂರ್ಣ : ಕಡಲೆಕಾಳು, ಹೆಸರುಕಾಳು, ಮೆಂತ್ಯ ಇವುಗಳ (1:1:1/4 ಪ್ರಮಾಣದಲ್ಲಿ) ಹಿಟ್ಟು ತಯಾರಿಸಿಕೊಂಡು ಸ್ವಲ್ಪ ನೀರಿನಲ್ಲಿ ಕಲೆಸಿ ಸ್ನಾನಕ್ಕೆ ಬಳಸುವುದರಿಂದ ಸಾಬೂನಿನಂತೆ ಸ್ವಚ್ಛ ಮಾಡುವುದಲ್ಲದೇ ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ. ಚರ್ಮರೋಗದಿಂದ ಬಳಲುವವರು ಈ ಪುಡಿಗೆ ನಿಂಬೆಹಣ್ಣು, ಕಿತ್ತಳೆ ಸಿಪ್ಪೆ, ತುಳಸಿ, ಕಸ್ತೂರಿ, ಅರಿಶಿನ, ಕಚೋರ ಮತ್ತು ಬೆರೆಸಿಟ್ಟು ಬಳಸಬೇಕು.

ಬಿಳಿಚಿಬ್ಬು : ಕೆಲವರಲ್ಲಿ ಎದೆ, ಕುತ್ತಿಗೆ, ಬೆನ್ನಿನ ಭಾಗದಲ್ಲಿ ಬಿಳಿಯ ಚುಕ್ಕೆ ಮತ್ತು ಮಚ್ಚೆಗಳಾಗಿರುತ್ತವೆ. ಅಂತಹವರು ಶ್ರೀಗಂಧ ಮತ್ತು ಬಜೆಯನ್ನು ಮಜ್ಜಿಗೆಯಲ್ಲಿ ಅರೆದು ಲೇಪಿಸಿಕೊಂಡು ಒಂದು ಗಂಟೆ ನಂತರ ಸ್ನಾನ ಮಾಡಬೇಕು.

ಕೆಸರು ಹುಣ್ಣು : ಕಾಲಿನ ಬೆರಳುಗಳ ಸಂದಿಗಳಲ್ಲಿ ನವೆಯಾಗುವುದು; ಕೆಂಪಾಗಿ ನೋವು ಉಂಟಾಗುತ್ತದೆ. ಸದಾ ನೀರಿನಲ್ಲಿ ಕೆಲಸ ಮಾಡುವವರಲ್ಲಿ ಇದು ಸಾಮಾನ್ಯವಾಗಿ ಕಂಡುಬರುತ್ತದೆ. 20 ಗ್ರಾಂ ಜೇನುಮೇಣವನ್ನು ಪಾತ್ರೆಯಲ್ಲಿ ಹಾಕಿ ಒಲೆಯ ಮೇಲಿಟ್ಟು ಕರಗಿಸಿ ನಂತರ ಅದಕ್ಕೆ 10 ಮಿಲಿ ಬೇವಿನೆಣ್ಣೆ ಮತ್ತು 10 ಮಿಲಿ ಕೊಬ್ಬರಿಎಣ್ಣೆ ಬೆರೆಸಿ ಆರಿದ ನಂತರ ಬಾಟಲಿಯಲ್ಲಿ ತುಂಬಿಟ್ಟುಕೊಳ್ಳಬೇಕು. ಬೆಳಗ್ಗೆ ಕೆಲಸವೆಲ್ಲ ಮುಗಿದಾಗ ಕಾಲಿನ ಬೆರಳುಗಳ ಸಂದಿಗಳಲ್ಲಿರುವ ತೇವಾಂಶ ಒರೆಸಿಕೊಂಡು, ಒಣಗಿದ ನಂತರ ಈ ಮುಲಾಮನ್ನು ಹಚ್ಚಿಕೊಳ್ಳಬೇಕು. ರಾತ್ರಿ ಮಲಗುವ ಮುಂಚೆ ಮುಲಾಮನ್ನು ಲೇಪಿಸಿಕೊಂಡಲ್ಲಿ ಒಳ್ಳೆಯದು.

ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು

ಕಾಯಿಲೆಗಳು ಬಾರದಂತೆ ದೇಹದ ರೋಗ ನಿರೋಧಕಶಕ್ತಿ ಹೆಚ್ಚಿಸಿಕೊಳ್ಳಲು ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಗೆ ಒಂದು ಚಮಚೆ ನೆಲ್ಲಿಕಾಯಿ ಪುಡಿಯನ್ನು ಜೇನುತುಪ್ಪದೊಂದಿಗೆ ಬೆರೆಸಿ ತಿನ್ನಬೇಕು.

ಕರೊನಾ ಬಾರದಂತೆ ನೋಡಿಕೊಳ್ಳಲು ಅಮೃತಬಳ್ಳಿ ಮತ್ತು ತುಳಸಿ ರಸವನ್ನು ನೆಲ್ಲಿಕಾಯಿ ಪುಡಿಯೊಂದಿಗೆ ಜೇನುತುಪ್ಪ ಬೆರೆಸಿ ದಿನಕ್ಕೆರಡು ಬಾರಿ ಸೇವಿಸಬೇಕು. ಅರಿಶಿನ, ಬೆಳ್ಳುಳ್ಳಿ, ಶುಂಠಿ, ಮೆಣಸುಗಳನ್ನು ಆಹಾರ ಅಡುಗೆ ತಯಾರಿಸುವಾಗ ಹೆಚ್ಚಾಗಿ ಬಳಸಬೇಕು.

Chronology of events of personal & Public life of Mahatma Gandhi

(year wise - from 1869)

1869 October 2. Mohandas the youngest child of Karamchand Gandhi and Putlibai, born at Porbandar in western India

1875 Attended a primary school at Porbandar for one year

1876 Betrothed to Kasturibai. Joined the Branch School at Rajkot for two years Read the play Sravan Ptirabhakti while in primary school witnessed another play Harishchandra, also thought, why should not all be truthful like Harischandra?

1879 January 21. Joined the City Taluka School Rajkot Studied Gujarati standards III and IV till October 2. 1880

1880 November 18. Appeared in the entrance examination of the Kathiawar High School, Rajkot

December 1. Enrolled in the General Register of the Kathiawar High School, Rajkot, admitted to Anglo Vernacular Standard I. During the visit of Mr Giles. Educational Inspector ignored teacher's prompting to copy from a neighbour's slate Passed seven years in this school which was later known as Alfred High School

1883 Married Kasturbai at the age of 13. Influenced by friends, started taking meat secretly, as it was forbidden in his family who were Vaishnavas. Soon after, he abjured meat out of his desire not to lie to his parents

1885 Stole coppers from his servant's pocket money for smoking. but gave up the practice. Stole a little gold from his brother's armlet to clear a debt, but felt ashamed and confessed to his father who pardoned him. From that day. Gandhi noted, "truth-telling became a passion with me."

1886 In his sick-bed, 63-year-old Karamchand Gandhi has discussions with Parsi and Muslim friends about their faiths. Mohandas, while nursing his father, listened to these discussions and developed toleration for all faiths. Karamchand Gandhi's condition became grave and he began to sink fast. Late one night, shortly after Mohandas had left him, he passed away

1887 Passed Matriculation examination from Ahmedabad Centre.

to be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India
Collection by : Dr. Poornima Jogi, N.S.S.



ಗರಿಕೆ (ಕರಿಕೆ) ಹುಲ್ಲಿನ ರಸ –ದೇಹಕ್ಕಾಗುವ ಲಾಭಗಳು

– ಡಾ. ಸಂದೀಪ್

'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ಗರಿಕೆ ಹುಲ್ಲಿಗೆ – ದೂರ್ವಾ – ಡಾಗ್ ಗ್ರಾಸ್ ಇಂಗ್ಲೀಷನಲ್ಲಿ **SINODON DYAQUILOS** ಎಂತಲೂ ಕರೆಯುತ್ತಾರೆ. ರೈತರು ಇದಕ್ಕೆ ಕಳೆ ಎನ್ನುತ್ತಾರೆ. ಇದನ್ನು ತೆಗೆದು ಹಾಕುವುದು ರೈತರಿಗೆ ಬಹಳ ಕಷ್ಟದ ಕೆಲಸ. ಗಣಪತಿ ಪೂಜೆಗೆ ಗರಿಕೆ ಶ್ರೇಷ್ಠವೆಂದು ನಂಬಿಕೆ ಇದೆ. ಗಣೇಶನಿಗೆ ಗರಿಕೆಪತ್ರಿ ಬಹಳ ಪ್ರಿಯ ಎನ್ನುವರು. "ಮಲವೇ ರೋಗದ ಮೂಲ" ಎಂಬುದು ರೋಗದ ಸಿದ್ಧಾಂತ. ಮಲವಿಕಾರಗಳು ಅನೇಕವಿವೆ. ಅದರಲ್ಲಿ ಮಲ ವಿಸರ್ಜನೆಯು ಬಹಳ ಮುಖ್ಯ. ದೈಹಿಕ ಪ್ರಕ್ರಿಯೆಯ ಈ ಕ್ರಿಯೆಗೆ ಗರಿಕೆಯು ಬಹಳ ಸಹಕಾರಿಯಾಗಿದೆ.

ಬಹಳಷ್ಟು ಜನರು ಗಮನಿಸಿರಬಹುದು ಬೆಕ್ಕು, ನಾಯಿಗಳಿಗೆ ಕಾಯಿಲೆ ಬಂದರೆ ಅಹಾರವನ್ನೆಲ್ಲ ತ್ಯಜಿಸಿ(ಉಪವಾಸ ಮಾಡಿ) ತೋಟ ಅಥವಾ ಹೊಲದಲ್ಲಿಯ ಗರಿಕೆ ಹುಲ್ಲನ್ನು ತಿನ್ನುತ್ತವೆ. ನಂತರ ಪೊದೆ ಅಥವಾ ಮರದ ಕೆಳಗೆ ಮಣ್ಣು ಕೆದರಿ, ತಗ್ಗು ಮಾಡಿ, ಆ ಸ್ಥಳದಲ್ಲಿಯೇ ವಮನ ವಿರೇಚನಗಳನ್ನು (ಮಲಕ್ರಿಯೆ –ವಾಂತಿ ಕ್ರಿಯೆ) ಮಾಡಿಕೊಳ್ಳುತ್ತವೆ. ತನ್ನ ದೇಹವನ್ನು ಸಂಪೂರ್ಣ ಶುದ್ಧಿ ಮಾಡಿಕೊಳ್ಳುತ್ತದೆ. ನಂತರ ಪುನಃ ಮಣ್ಣು ಕೆದರಿ ಆ ತಗ್ಗನ್ನು ಮುಚ್ಚುತ್ತವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, "ಸರ್ವೇ ರೋಗಾಃ ಮಲಾವಶಃ ಲಂಘನಂ ಪರಮೌಷಧಂ" ಎಂಬ ಈ ಶ್ಲೋಕ ಅಥವಾ ಅದರ ಅರ್ಥವನ್ನು ನಾಯಿ ಬೆಕ್ಕುಗಳಿಗೆ ಯಾರು ಹೇಳಿ ಕೊಟ್ಟವರು? ಉಪವಾಸವನ್ನು ಮಾಡಿತು, ಶರೀರ ಶುದ್ಧಿಯನ್ನು ಸಹ ಮಾಡಿಕೊಂಡಿತು. ಇದೆಲ್ಲಾ ಗರಿಕೆಯ ಪ್ರಭಾವ. ಅಷ್ಟೇ ಅಲ್ಲ ಅದು ಗಿಡದ ಕೆಳಗೆ ಮಣ್ಣು ಕೆದರಿದಲ್ಲಿಯೇ ವಿಸರ್ಜನೆ ಮಾಡಿತು.ಅಂದರೆ ಸ್ವಚ್ಛತೆಯನ್ನು ಕಾಪಾಡಿತು. ಅಲ್ಲದೆ ಆ ಗಿಡಕ್ಕೆ ಗೊಬ್ಬರ ಪೂರೈಕೆ ಆಗುವಂತೆ ಮಾಡಿತು . ಇದು ನಿಸರ್ಗ ನಿಯಮ. ಈ ನಿಸರ್ಗ ನಿಯಮವನ್ನು ಪ್ರಾಣಿಗಳಿಗೆ ಹೇಳಿ ಕೊಟ್ಟವರು ಯಾರು ?

ಪ್ರಕೃತಿಯ ಈ ನಿಯಮವನ್ನು ಕಂಡೇ **Toxin Theory-foreign matter theory - auto intoxication theory** ಹುಟ್ಟುತೇನೋ, ಪ್ರಚಲಿತವಾಯಿತೇನೋ ಎಂದು ಕಂಡು ಬರುತ್ತದೆ. ಅದಕ್ಕಾಗಿ ಶರೀರ ಶುದ್ಧಿ ಕ್ರಿಯೆಯು ರೋಗ ನಿವಾರಣೆಯಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇವುಗಳೆಲ್ಲವನ್ನು ನಿಸರ್ಗ ಚಿಕಿತ್ಸೆಗಳಲ್ಲಿ (ಪ್ರಕೃತಿ ಚಿಕಿತ್ಸೆಗಳಲ್ಲಿ)ವೈಜ್ಞಾನಿಕವಾಗಿ ಮಾಡುತ್ತಾರೆ. ಗರಿಕೆಯೇ ಏಕೆ ಪ್ರಧಾನ ಪಾತ್ರವನ್ನು ವಹಿಸುತ್ತದೆ? ಗರಿಕೆಯಲ್ಲಿ ನಾರಿನಂಶ ಯಥೇಚ್ಛವಿದೆ. ಇದರಲ್ಲಿ ಕ್ಲೋರೋಫಿಲ್ (**Chlorophil**) ಎಂಬ ಅಂಶ ಇರುವುದರಿಂದ ಜೀವ ಶಕ್ತಿಯನ್ನು ಬಲಿಷ್ಟಗೊಳಿಸುತ್ತದೆ, ರಕ್ತ ಶುದ್ಧಿಯಾಗುತ್ತದೆ.

ಎ –ಸಿ – ಮತ್ತು ಕ್ಯಾಲ್ಸಿಯಂ, ಸಸಾರಜನಕ (**Nitrogen**) ಇದರಲ್ಲಿರುವ ಪ್ರಾಣಶಕ್ತಿ ಹೆಚ್ಚಿಸುತ್ತದೆ ಮತ್ತು ಕಬ್ಬಿಣಾಂಶವು ಇರುವುದರಿಂದ ರಕ್ತದಲ್ಲಿ ಹಿಮೋಗ್ಲೋಬಿನ್ ಹೆಚ್ಚಿಸುತ್ತದೆ. ಹಾಗಾಗಿ ಮಲ ಶುದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಅದರಂತೆ "ಕಫದ " ಮಲವನ್ನು ಹೊರ ತೆಗೆಯಲಿಕ್ಕೆ ಗರಿಕೆ ಹುಲ್ಲಿನ ರಸ **3** ಚಮಚ ಜೇನುತುಪ್ಪ, **1** ಚಮಚ ಮಿಶ್ರ ಮಾಡಿ ಸೇವಿಸಬೇಕು.

ಬೆವರಿನ ಮಲ ಮತ್ತು ಚರ್ಮ ರೋಗಕ್ಕೆ ಸಂಬಂಧ ಪಟ್ಟಂತೆ ಗರಿಕೆ ರಸವನ್ನು ಬಿಸಿ ನೀರಿನಲ್ಲಿ (ಒಂದು ಗ್ಲಾಸ್ ರಸ) ಹಾಕಿ, ಉಪ್ಪು ಸೇರಿಸಿ ಸ್ನಾನ ಮಾಡಬೇಕು. ಆಗ ಮೈಗೆ ಸೋಪು ಹಚ್ಚಬಾರದು. (ಒಂದು ಗ್ಲಾಸ್‌ರಸ ಅಂದರೆ ಗರಿಕೆಯನ್ನು**100 mls** ಮಾಡಿಕೊಂಡು ಅದಕ್ಕೆ **100 ml** ನೀರು ಸೇರಿಸಿರುವುದನ್ನು ಇದಕ್ಕೆ **1** ಗ್ಲಾಸ್ ರಸ ಎಂದು ಹೇಳುತ್ತೇವೆ.

ವರ್ಷ ಪೂರೈಸಿದ ಬಾಪು ಪ್ರಪಂಚ



2ನೇ ಮಹಾಯುದ್ಧ @ 75



ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಆಯೋಗ

ಯುನೆಸ್ಕೋ 1945ನೇ ನವಂಬರ್ 16ರಂದು ಸ್ಥಾಪಿಸಲಾದ ವಿಶ್ವಸಂಸ್ಥೆಯ ಭಾಗವೇ ಆಗಿರುವ ಸಂಸ್ಥೆಯಾಗಿದೆ. ವಿಶ್ವಸಂಸ್ಥೆಯ ಸ್ಥಾಪನ ಶಾಸನದಲ್ಲಿ ಸೂಚಿಸಲಾದ ನ್ಯಾಯ, ನ್ಯಾಯ ಪರಿಪಾಲನೆ, ಮತ್ತು ಮಾನವ ಹಕ್ಕುಗಳು ಹಾಗೂ ಮೂಲಭೂತ ಸ್ವಾತಂತ್ರ್ಯಗಳಿಗಾಗಿ ವಿಶ್ವವ್ಯಾಪಿ ಗೌರವವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಶಿಕ್ಷಣ, ವಿಜ್ಞಾನ, ಮತ್ತು ಸಂಸ್ಕೃತಿಯ ಮೂಲಕ ಅಂತರರಾಷ್ಟ್ರೀಯ ಸಹಯೋಗಕ್ಕೆ ಪ್ರೋತ್ಸಾಹ ನೀಡಿ ಶಾಂತಿ ಮತ್ತು ಭದ್ರತೆಗೆ ನೆರವಾಗುವುದು ಅಧಿಕೃತ ಉದ್ದೇಶವಾಗಿದೆ. ಅದು ರಾಷ್ಟ್ರಗಳ ಒಕ್ಕೂಟದ ಬೌದ್ಧಿಕ ಸಹಕಾರದ ಅಂತರರಾಷ್ಟ್ರೀಯ ಆಯೋಗದ ಉತ್ತರಾಧಿಕಾರಿತ್ವ ಹೊಂದಿದೆ. ಇದರ ಕೇಂದ್ರ ಕಚೇರಿ ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿದೆ. ಇದು ವಿಶ್ವದಾದ್ಯಂತ ಐತಿಹಾಸಿಕ ಸ್ಥಳಗಳ ರಕ್ಷಣೆ, ಶಿಕ್ಷಣ, ಸಂಸ್ಕೃತಿ ಮುಂತಾದವುಗಳಿಗೆ ಪ್ರೋತ್ಸಾಹ ಮತ್ತು ವಿಕಾಸ ಕಾರ್ಯದಲ್ಲಿ ನಿರತವಾಗಿದೆ. ಪ್ರಪಂಚದಾದ್ಯಂತ ಶಿಕ್ಷಣ ಹಾಗೂ ಜ್ಞಾನ ಪ್ರಸಾರಕ್ಕಾಗಿ ಸರ್ಕಾರಗಳಿಗೆ ಹಾಗೂ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ ಮತ್ತು ಸಹಕಾರ ನೀಡುತ್ತದೆ.

ಸಂಗ್ರಹ : ಡಾ. ವಿ. ಪ್ರಶಾಂತ್, ಸಂ : ಬೆಂ. ಗ್ರಾ. ಜಿಲ್ಲೆ

ವಿಶ್ವಸಂಸ್ಥೆಯು ಭದ್ರತಾ ಸಮಿತಿ ಸದಸ್ಯ ರಾಷ್ಟ್ರವಾಗಿ ಭಾರತವನ್ನು ದಿ.11.11.1966 ರಂದು ಆಯ್ಕೆ ಮಾಡಲಾಯಿತು

ಕನ್ನಡವೆನುಳಿದೆನಗೆ । ಅನ್ಯಜೀವನವಿಲ್ಲ
ಕನ್ನಡವೆ ಎನ್ನುಸಿರು । ಪೆತ್ತೆನ್ನ ತಾಯಿ
ಕನ್ನಡವೆ ಧನಧಾನ್ಯ । ಕನ್ನಡವೆ ಮನೆಮಾನ್ಯ
ಕನ್ನಡವೆಂಯೆನಗಾಯ್ತು । ಕಣ್ಣು ಕಿವಿ ಬಾಯಿ

ಬೆನಗಲ್ ರಾಮರಾವ್





ವಿಶ್ವಸಂಸ್ಥೆಯು 1945ರಲ್ಲಿ ಸ್ಥಾಪನೆಗೊಂಡ ಒಂದು ಅಂತಾರಾಷ್ಟ್ರೀಯ ಸಂಸ್ಥೆ. ಪ್ರಸ್ತುತ ಇದು 193 ಸದಸ್ಯ ದೇಶಗಳನ್ನು ಒಳಗೊಂಡಿದೆ. ವಿಶ್ವಸಂಸ್ಥೆಯ ಲಿಖಿತ ಸಂವಿಧಾನದಲ್ಲಿ ಉಲ್ಲೇಖವಾಗಿರುವಂತಹ ಉದ್ದೇಶ ಮತ್ತು ತತ್ವಗಳಿಗೆ ಅನುಸಾರವಾಗಿ ಅದು ಕಾರ್ಯನಿರ್ವಹಿಸುತ್ತದೆ.

ಸದಸ್ಯ ರಾಷ್ಟಗಳು

ಎಲ್ಲಾ 193 ಸದಸ್ಯ ರಾಷ್ಟ್ರಗಳೂ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸದಸ್ಯತ್ವ ಹೊಂದಿವೆ. ಭದ್ರತಾ ಮಂಡಳಿಯ ಶಿಫಾರಸಿನ ಮೇರೆಗೆ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡು ದೇಶಗಳಿಗೆ ವಿಶ್ವಸಂಸ್ಥೆಯ ಸದಸ್ಯತ್ವ ನೀಡಲಾಗುತ್ತದೆ.

ಪ್ರಮುಖ ಅಂಗಸಂಸ್ಥೆಗಳು

ವಿಶ್ವಸಂಸ್ಥೆಯ ಪ್ರಮುಖ ಅಂಗಸಂಸ್ಥೆಗಳೆಂದರೆ: ಸಾಮಾನ್ಯ ಸಭೆ, ಭದ್ರತಾ ಮಂಡಳಿ, ಆರ್ಥಿಕ ಮತ್ತು ಸಾಮಾಜಿಕ ಮಂಡಳಿ, ಧರ್ಮದರ್ಶಿ ಮಂಡಳಿ, ಅಂತಾರಾಷ್ಟ್ರೀಯ ನ್ಯಾಯಾಲಯ ಮತ್ತು ವಿಶ್ವಸಂಸ್ಥೆಯ ಸಚಿವಾಲಯ. ಇವೆಲ್ಲವುಗಳೂ 1945ರಲ್ಲಿ ವಿಶ್ವಸಂಸ್ಥೆಯ ಸಂಸ್ಥಾಪನೆಯೊಂದಿಗೇ ಅಸ್ತಿತ್ವಕ್ಕೆ ಬಂದವು.

ನಾಯಕತ್ವ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಸಂಸ್ಥೆಯ ತತ್ವಾದರ್ಶಗಳಿಗೆ ಪ್ರತಿರೂಪ. ವಿಶ್ವದ ಜನತೆಯ ಅದರಲ್ಲೂ ಬಡ ಮತ್ತು ದುರ್ಬಲ ವರ್ಗದವರ ಹಿತಾಸಕ್ತಿಗೆ ದನಿಯಾಗಿರುತ್ತಾರೆ. ಶ್ರೀ ಆಂಟೊನಿಯೊ ಗುಟೆರಸ್ ಅವರು ವಿಶ್ವಸಂಸ್ಥೆಯ ಹಾಲಿ ಮತ್ತು ಒಂಬತ್ತನೇ ಪ್ರಧಾನ ಕಾರ್ಯದರ್ಶಿ. 2017ರ ಜನವರಿ 1ರಂದು ಅವರು ಅಧಿಕಾರ ವಹಿಸಿಕೊಂಡರು. ವಿಶ್ವಸಂಸ್ಥೆಯ ಲಿಖಿತ ಸಂವಿಧಾನವು ಪ್ರಧಾನ ಕಾರ್ಯದರ್ಶಿಗಳನ್ನು ಸಂಸ್ಥೆಯ "ಪ್ರಧಾನ ಆಡಳಿತ ಅಧಿಕಾರಿ"ಎಂದು ವ್ಯಾಖ್ಯಾನಿಸುತ್ತದೆ.

ಸಚಿವಾಲಯ

ಸಚಿವಾಲಯವು ವಿಶ್ವಸಂಸ್ಥೆಯ ಪ್ರಮುಖ ಅಂಗ ಸಂಸ್ಥೆಗಳಲ್ಲಿ ಒಂದಾಗಿದೆ. ಇದೂ ಸಹ ಒಂದು ಇಲಾಖೆಯಂತೆಯೇ ರಚನೆಯನ್ನು ಒಳಗೊಂಡಿದೆ. ವಿಶ್ವಸಂಸ್ಥೆಯ ಒಂದೊಂದು ಇಲಾಖೆಯು ವಿಶೇಷವಾದ ಜವಾಬ್ದಾರಿ ಮತ್ತು ಕಾರ್ಯಕಲಾಪಗಳನ್ನು ಹೊಂದಿವೆ. ವಿಶ್ವಾದ್ಯಂತ ವಿವಿಧ ದೇಶಗಳಲ್ಲಿರುವ ಶಾಖಾ ಕಚೇರಿಗಳಲ್ಲಿ ವಿಶ್ವಸಂಸ್ಥೆಯ ಕಾರ್ಯಕಲಾಪಗಳಲ್ಲಿ ಸಮನ್ವಯತೆ ಸಾಧಿಸಲು ವಿವಿಧ ಇಲಾಖೆಗಳು ಪರಸ್ಪರ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತವೆ. ಪ್ರಧಾನ ಕಾರ್ಯದರ್ಶಿಗಳು ವಿಶ್ವಸಂಸ್ಥೆಯ ಸಚಿವಾಲಯದ ಮುಖ್ಯಸ್ಥರಾಗಿರುತ್ತಾರೆ.

24 ಅಕ್ಟೋಬರ್ 1945

ವಿಶ್ವಸಂಸ್ಥೆಯ ಅಧಿಕೃತ ಹುಟ್ಟು

1945ರಲ್ಲಿ ವಿಶ್ವಸಂಸ್ಥೆಯ ಲಿಖಿತ ಸಂವಿಧಾನದ ರಚನೆಗಾಗಿ 50 ದೇಶಗಳ ಪ್ರತಿನಿಧಿಗಳು ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ನಡೆದ 'ಅಂತಾರಾಷ್ಟ್ರೀಯ ಸಂಸ್ಥೆ ಕುರಿತಾದ ವಿಶ್ವಸಂಸ್ಥೆ ಅಧಿವೇಶನ'ದಲ್ಲಿ ಪಾಲ್ಗೊಂಡರು. 1944 ಆಗಸ್ಟ್–ಅಕ್ಟೋಬರ್ ಅವಧಿಯಲ್ಲಿ ಅಮೆರಿಕದ ಡಂಬರ್ಟನ್ ಓಕ್ಸ್‌ನಲ್ಲಿ ಚೀನಾ, ರಷ್ಯಾ, ಬ್ರಿಟನ್ ಮತ್ತು ಅಮೆರಿಕದ ಪ್ರತಿನಿಧಿಗಳು ಸಿದ್ಧಪಡಿಸಿದ ಪ್ರಸ್ತಾವನೆಯನ್ನು ಆಧಾರವಾಗಿರಿಸಿಕೊಂಡು ಅಧಿವೇಶನದಲ್ಲಿ ಚರ್ಚೆ ನಡೆಸಲಾಯಿತು.

ಹೆಸರಿನ ಮೂಲ

ಅಮೆರಿಕದ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರು ಮೊದಲ ಬಾರಿಗೆ "ವಿಶ್ವಸಂಸ್ಥೆ" ಪದವನ್ನು ರಚಿಸಿ, ಬಳಸಿದರು. ಎರಡನೇ ವಿಶ್ವ ಯುದ್ಧದ ಸಂದರ್ಭದಲ್ಲಿ ಆಕ್ಸಿಸ್ ಶಕ್ತಿಗಳ (ನಾಜಿ ಜರ್ಮನಿ, ಇಟಲಿ ಮತ್ತು ಜಪಾನ್) ವಿರುದ್ಧ ಹೋರಾಟಕ್ಕೆ ಸಂಕಲ್ಪಿಸಿ 26 ದೇಶಗಳ ಪ್ರತಿನಿಧಿಗಳು 1942ರ ಜನವರಿ 1ರಂದು "ವಿಶ್ವಸಂಸ್ಥೆಯ ಘೋಷಣೆ" ಹೊರಡಿಸಿದರು. ಈ ವೇಳೆ ರೂಸ್‌ವೆಲ್ಟ್ ಅವರು ಈ ಪದವನ್ನು ಬಳಸಿದರು.

ಸೌಜನ್ಯ : ಯೋಜನಾ, ಅಕ್ಟೋಬರ್ 2020

ಸಂಗ್ರಹ : ವಿ.ತಿಪ್ಪನಗೌಡ, ಉಪಾಧ್ಯಕ್ಷರು, ಗಾಂಧಿ ಭವನ

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

Sonja looked at the bottles. She could hardly believe what she saw. Every carpet of cells in the infected group was covered with plaques white spots or holes that looked as if the carpet were covered with chickenpox. A virus was eating with away a vengeance. Yet it was strange that her tissue cultures should have responded before the mice, which had been inoculated three days earlier. Possibly her bottles had been contaminated by some other virus. She decided the whole to try process once more. By the following Tuesday, March 18, she had her answer. Every single infected bottle again showed the tell tale "moth hole! She knew then that she was working with an "agent," an unknown virus of great potency

Wil Downs and Jordi Casals were elated at her results, but puzzled by the continued health of their mice. Then a rather obvious thought occurred to them. They had used baby mice, thinking they might be more susceptible to disease. But there are strange variations in the nature of viruses What if they tried tougher, adult mice? They started to work with an adult colony. The following day, Jordi Casals went to his cages, not really expecting anything. He picked up an adult mouse by the tail. He was startled to feel a faint tremor coming from the mouse into his hand. Going from box to box, he found that practically all the mice infected with the African serum showed the same tremors. His control group showed none. A few days later, nearly all the infected mice were dead.

LETHAL DOSE 50

JORDI CASALS now began a series of new tests. Was this "new" virus only a duplicate of others already identified in South America and Africa? How powerful was it? What was its size? Could it be seen and identified under the clectron microscope? The answer to these questions would involve intimate work with the infected material and, even if the lab people used extreme caution, disasters could still happen. For example, they remembered that 35 per cent of the early Rockefeller Foundation yellow-fever researchers, in the era before the vaccine, had been killed as a result of their laboratory work. The overwhelming power of the new African virus was obvious to find its exact strength, Casals and Buckley independently embarked on a process called titring. Since virus particles cannot be counted, even under an clectron microscope, it is necessary to have some scale on which to judge their potency. The titring process provides a means of doing this. Basically, both Sonja Buckley and Jordi Casals followed the same methods.

To be continued...



ಪುಸ್ತಕ ಪರಿಚಯ : ಜೀವಸೆಲೆ

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ), ಕೃತಿಕಾರರು : ಡಾ. ವಸುಂಧರಾ ಭೂಪತಿ

ಕೃತಿಯ ಲೇಖಕರಾದ ಡಾ. ವಸುಂಧರಾ ಭೂಪತಿ ಅವರು ವೃತ್ತಿಯಲ್ಲಿ ಆಯುರ್ವೇದ ವೈದ್ಯರು. ಪ್ರವೃತ್ತಿಯಲ್ಲಿ ಲೇಖಕಿ, ಸಮಾಜಮುಖಿ ಚಿಂತಕಿ, ಪ್ರಗತಿಪರ ಹೋರಾಟಗಾರರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು. ಸಂಸ್ಕೃತಿ ಬುಕ್ ಪ್ಯಾರಡೈಸ್ ಪ್ರಕಟಿಸಿರುವ 'ಜೀವಸೆಲೆ' ಕೃತಿಯು ಕನ್ನಡ ನೆಲದ ಸಾಹಿತ್ಯ, ಸಂಸ್ಕೃತಿ, ಹೋರಾಟ, ವೈದ್ಯಕೀಯ, ಪ್ರಗತಿಪರ ಆಲೋಚನೆ, ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ಹೀಗೆ ಬಹುಮುಖಿ ನೆಲೆಯಲ್ಲಿ ಸಮಾಜದ ಆಗು ಹೋಗುಗಳಲ್ಲಿ ಸದಾ ಸ್ಪಂದಿಸುತ್ತಿರುವ ಗಣ್ಯಮಾನ್ಯರುಗಳನ್ನು, ಸಾಧಕರ ಅನುಭವಗಳನ್ನು ಕಟ್ಟಿಕೊಡುವ 'ಸಂಸ್ಕೃತಿ ಕಥನ' ರೂಪದ ಕೃತಿಯಾಗಿದೆ. ಎಚ್.ಎಸ್. ದೊರೆಸ್ವಾಮಿ ಅವರ ಹೋರಾಟದ ಹಾದಿ, ನಿಟ್ಟೂರು ಶ್ರೀನಿವಾಸರಾಯರ ಸೌಹಾರ್ದ ಸಂಬಂಧ, ಜಾನಪದ ಕ್ಷೇತ್ರದ ಎಸ್.ಕೆ. ಕರೀಂಖಾನ್, ಚಲನಚಿತ್ರ ಕ್ಷೇತ್ರದ ಜಿ.ವಿ. ಅಯ್ಯರ್, ನಿಘಂಟುತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯ, ನಗೆ ಸಾಹಿತ್ಯದ ಲೇಖಕಿ ಟಿ. ಸುನಂದಮ್ಮ, ಖ್ಯಾತ ವೈದ್ಯಸಾಹಿತಿ ಡಾ. ಲೀಲಾವತಿ ದೇವದಾಸ್, ಹಿಂದುಳಿದವರ್ಗಗಳ ನೇತಾರರಾದ ದೇವರಾಜ ಅರಸು, ಗಿರಿಜನರ ಬದುಕಿಗೆ ಬೆಳಕಾಗಿರುವ ಡಾ. ಎಚ್. ಸುದರ್ಶನ್, ಭಾರತ ರತ್ನ ಸಿ.ಎನ್.ಆರ್. ರಾವ್, ಖ್ಯಾತ ವಿಚಾರವಾದಿ ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) ಮುಂತಾದವರೊಂದಿಗಿನ ಪ್ರಶ್ನೋತ್ತರ ಮಾಲಿಕೆ ಅವರ ಜೀವನಾನುಭವಗಳ ಸಂದರ್ಶನ ರೂಪದಲ್ಲಿ ಹಿಡಿದಿಟ್ಟು ಸಾರ್ವಜನಿಕರಿಗೆ ಉಣಬಡಿಸುವ ಅತ್ಯುತ್ತಮ ಲೇಖನಗಳಾಗಿವೆ. ಹಾಗೆಯೇ ಶ್ರೀಸಿದ್ದಗಂಗಾ ಶ್ರೀಗಳು, ಚೆನ್ನಮ್ಮ ಹಳ್ಳಿಕೇರಿ, ಡಾ. ಸಿ.ಎನ್. ಮಂಜುನಾಥ್, ನಟ ಶಿವರಾಂ ಅವರೊಂದಿಗಿನ ಸಿನಿಮಾ ವಿಚಾರಧಾರೆಗಳನ್ನು, ಕುಷ್ಠರೋಗದ ಚಿಕಿತ್ಸಕ ಡಾ. ಈಶ್ವರ ರೆಡ್ಡಿ ಅವರ ಅನೇಕ ವಿಚಾರಗಳನ್ನು ಪರಿಚಯಿಸಿ, ಮಹಾನ್ ವ್ಯಕ್ತಿಗಳ ಬಾಳ್ವೆಯೇ ಬೆಳಕಾಗಿರುವುದನ್ನು ಸವಿವರವಾಗಿ ಚಿತ್ರೀಕರಿಸಿರುವ ಡಾ. ವಸುಂಧರಾ ಭೂಪತಿ ಅವರಿಗೆ ಗಾಂಧಿ ಭವನದ ಪರವಾಗಿ ಅಭಿನಂದನೆಗಳು ಇಲ್ಲಿಯ ಅನೇಕ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡವುಗಳಾಗಿವೆ. ಸಾಹಿತ್ಯ, ಸಂಸ್ಕೃತಿ, ಸಮಾಜ ಚಿಂತಕರ ಪರಿಚಯಾತ್ಮಕವಾದ ಈ ಲೇಖನ ಸಂಗ್ರಹ ಓದುಗರ ಬದುಕು ಮತ್ತು ಚಿಂತನೆಗಳನ್ನು ಹಸನಗೊಳ್ಳಲು ಆಧಾರವಾಗಿದೆ.

ಬಾನಿನಗಲಕೆ ನೆಲಸಿ, ದೆಸೆದೆಸೆಗೆ ಕಟ್ಟಿ ನಡೆನೋಟಕೆ ರಚಿರುವ ಕಸ್ತೂರಿ ನಾಡು, ಅಗೆದಲ್ಲಿ ಹೊಳೆಹೊನ್ನು,
ನುಡಿಯು ದಾಂಗುಡಿ ಹಾಡು ಅಡಿತಳದ ಅರಿಮೆಟ್ಟು, ಗಂಡುಮೆಟ್ಟು ವೀರ ಸಿರಿ ಕಲೆಬೀಡು ಎನ್ನ ತಾಯ್ನಾಡು.

– ವಿ.ಸೀ.

ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಮಹಾತ್ಮ ಗಾಂಧೀಜಿ ಅವರ ವಿವಿಧ ಹೋರಾಟ, ಸತ್ಯಾಗ್ರಹ ಗಣ್ಯಮಾನ್ಯರೊಂದಿಗಿನ ಒಡನಾಟದ ಚಿತ್ರಣಗಳನ್ನು ಹೊತ್ತು ತಂದಿರುವ 'ಬಾಪು ಪ್ರಪಂಚ' ಮಾಸಿಕ ಸುಂದರವಾಗಿ ಮೂಡಿಬಂದಿದೆ. ಮುಖಪುಟದ ಗಾಂಧೀಜಿ ಅವರ ಜೊತೆಗೆ ಸ್ವಾತಂತ್ರ ಭಾರತದ ಎರಡನೇ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಬಗ್ಗೆ ಮುನ್ನುಡಿ, ಸರಸ್ವತಿಬಾಯಿ ರಾಜವಾಡೆ ಅವರ ಬಗೆಗಿನ ಪರಿಚಯಾತ್ಮಕ ಲೇಖನಗಳು ಅತ್ಯುತ್ತಮವಾಗಿ ಮೂಡಿ ಬಂದಿದೆ. ಅಭಿನಂದನೆಗಳು.

ಪ್ರೊ. ಪ್ರತಿಮಾ ನಾಗರಾಜ್, ಪ್ರಾಧ್ಯಾಪಕಿ

ಸಂಪಾದಕೀಯದಲ್ಲಿ ಶ್ರೀಮತಿ ಇಂದಿರಾ ಕೃಷ್ಣಪ್ಪನವರು ಈ ದೇಶದ ಪ್ರಥಮ ಪ್ರಜೆ ದಲಿತ ಸಮುದಾಯದವರಾದರೂ, ದೇಶದಲ್ಲಿ ನಡೆಯುತ್ತಿರುವ ದಲಿತರ ಮೇಲಿನ ದೌರ್ಜನ್ಯ ಮಹಿಳೆಯರ ಮೇಲಿನ ಅತ್ಯಾಚಾರ, ಸಾಮಾಜಿಕ ಅಸಮಾನತೆಯ ಬಗ್ಗೆ ನಿರಂತರವಾಗಿ ಅನ್ಯಾಯ ನಡೆಯುತ್ತಿದ್ದರೂ, ಪ್ರಜಾಪ್ರತಿನಿಧಿಗಳ ಮೌನ ಅನ್ಯಾಯಗಳನ್ನೇ ರಾಜಕಾರಣ ಮಾಡುತ್ತಿರುವ ಸಂಗತಿ ಬಗ್ಗೆ ಮಮ್ಮಲ ಮರುಗುವಿಕೆ ನಮ್ಮ ಮನಸ್ಸಿಗೂ ನೋವು ತಂದಿತು.

ಕೆ.ಜಿ. ಹೇಮಾವತಿ, ಉಪನ್ಯಾಸಕಿ

ಬಾಪು ಪ್ರಪಂಚ ಮಾಸಿಕ ಪತ್ರಿಕೆಯ 22 ಮತ್ತು 23ನೇ ಪುಟದಲ್ಲಿ ಕರ್ನಾಟಕ ಹಾಗೂ ಭಾರತದ ವಿವಿಧೆಡೆಯಲ್ಲಿ ಬೇರೆ ಬೇರೆ ವಿಭಾಗಗಳು ಸಮಾಜಕ್ಕೆ ಸೇವೆಸಲ್ಲಿಸಿ ನಿಧನರಾದ ಗಣ್ಯರನ್ನು ಸ್ಮರಿಸುವ ಕಿರುಪರಿಚಯ ನಿಜಕ್ಕೂ ಶ್ಲಾಘನೀಯವಾದುದು. ಸ್ವಾಮಿ ಅಗ್ನಿವೇಶ್, ರಾಮ್‌ವಿಲಾಸ್ ಪಾಸ್ವಾನ್, ಸುರೇಶ ಅಂಗಡಿ, ಎಸ್.ಪಿ. ಬಾಲಸುಬ್ರಹ್ಮಣ್ಯಂ, ಜಿ.ಎಸ್. ಅಮೂರ, ಹೀ.ಚಿ. ಶಾಂತವೀರಯ್ಯ ಬಿ. ನಾರಾಯಣರಾವ್ ಮುಂತಾದವರ ಸಂಕ್ಷಿಪ್ತ ಪರಿಚಯದೊಂದಿಗೆ ಅರ್ಥಪೂರ್ಣವಾಗಿ ಮೂಡಿಬಂದಿದೆ.

ಪ್ರೊ. ಕೆ.ವಿ. ಶ್ರೀಧರ್, ತುಮಕೂರು

ಸ್ವಾತಂತ್ರ್ಯ ಹೋರಾಟಗಾರರಾದ ಎಸ್. ಎನ್. ಸುಬ್ಬರಾವ್ ಅವರ 'ನಾನೇನು ಕಲಿಯಬಹುದು' ಅನುಭವ ಕಥನ ಮತ್ತು ಎಚ್.ಎಸ್. ದೊರೆಸ್ವಾಮಿ ಅವರ 'ವಿವಿಧತೆ ನಡುವಿನ ಹೊಂದಾಣಿಕೆ ಧರ್ಮ' ಲೇಖನಗಳು ಗಾಂಧೀಜಿ ಮತ್ತು ಪ್ರಸಕ್ತ ಹಾಗೂ ಆಯಾ ಕಾಲದ ಚಿಂತನೆಗಳನ್ನು ತಿಳಿಸಿರುತ್ತಾರೆ. ಯು. ರು. ಪಾಟೀಲ 'ಮಹಾತ್ಮರ ಅಕ್ಷರ ಮಾಧ್ಯಮದ ಕಾಯಕ' ಲೇಖನವು ಬಹಳ ಇಷ್ಟವಾಯಿತು. ಇಂತಹ ಬಹು ಉಪಯುಕ್ತ ಲೇಖನ ಪ್ರಕಟಿಸಿದ ಗಾಂಧೀ ಭವನಕ್ಕೆ ವಂದನೆಗಳು.

ನೀಲಾವರ ಸುರೇಂದ್ರ ಅಡಿಗ
ಕಸಾಪ, ಜಿಲ್ಲಾ ಅಧ್ಯಕ್ಷರು, ಉಡುಪಿ

ಅಕ್ಟೋಬರ್‌ನ 'ಬಾಪು ಪ್ರಪಂಚ' ಸಂಚಿಕೆಯಲ್ಲಿ 19ನೇ ಪುಟದ ಡಾ. ವೂಡೇ ಪಿ. ಕೃಷ್ಣ ಅವರ 'ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ', ಡಾ. ಸಿಸಿರಾ ಅವರ ಹೆಮ್ಮೆಯ ಕನ್ನಡಿಗ, ಕೆ. ಶಿವರಾಮ ಕಾರಂತರ ಸಾಹಿತ್ಯ ಪರಿಚಯ, ಡಾ. ಪೂರ್ಣಿಮಾ ಜೋಗಿ ಅವರ ಕರೋನಾ ವಾರಿಯರ್ಸ್ ಅವರ ಸಂಕ್ಷಿಪ್ತ ಪರಿಚಯ ಸಕಾಲಿಕವಾಗಿದೆ. ಒಳ್ಳೊಳ್ಳೆಯ ಬರಹಗಳನ್ನು ಹೊತ್ತು ತಂದ ಈ ಸಂಚಿಕೆ ಸುಂದರವಾಗಿದೆ.

ಜಯಶ್ರೀ ರಾಜು, ಕಾರವಾರ

'ಬಾಪು ಪ್ರಪಂಚ' ಅಕ್ಟೋಬರ್ ಸಂಚಿಕೆ ವಿಶಿಷ್ಟ ಲೇಖನಗಳ ಗುಚ್ಛವಾಗಿ ಹೊರಹೊಮ್ಮಿದೆ. ಗಾಂಧೀಜಿ ಅವರ ಚಿಂತನೆಗಳು, ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ, ತಿಲಕರು, ವಿನೋಬಾ ಬಾವೆ ಅವರ ವ್ಯಕ್ತಿತ್ವ–ಸಮಾಜಮುಖಿ ಚಿಂತನೆಗಳು, ಕನ್ನಡ ಸಾಹಿತಿ–ನವಕರ್ನಾಟಕದ ರೂವಾರಿಗಳ ಪರಿಚಯ, ಸ್ವಚ್ಛತೆ, ಆರೋಗ್ಯ, ಅನುಭವ ಕಥನ, ಎಚ್.ಎಸ್. ದೊರೆಸ್ವಾಮಿ ಅವರ ಸರ್ವಧರ್ಮ ಸಮನ್ವಯತೆ ಹೀಗೆ ವಿಭಿನ್ನ ಸಂಕೀರ್ಣಯುತ ಲೇಖನಗಳ ಉಪಯುಕ್ತ ಮಾಹಿತಿಯೊಂದಿಗೆ ಸಂಗ್ರಹಿಸಿಡಲೇಬೇಕಾದ ಸಂಚಿಕೆ ಇದಾಗಿದೆ.

ಮಹೇಶ್, ಬೆಂಗಳೂರು


ಗಾಂಧಿ ಭವನದ ಕಾರ್ಯಕ್ರಮಗಳು







ಶ್ರೀ ಸಿದ್ದರಾಮೇಶ್ವರ ವಿದ್ಯಾಸಂಸ್ಥೆ, ಚನ್ನಪಟ್ಟಣದಲ್ಲಿ ದಿ. 31.10.2020ರಂದು ಆಯೋಜಿಸಿದ್ದ ವಿವಿಧ ದತ್ತಿ ಪುರಸ್ಕಾರ, ಸಸಿ ನೆಡುವಿಕೆ ಮತ್ತು ವಿತರಣೆ, ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಸಮಾರಂಭದ ಉದ್ಘಾಟನೆಯನ್ನು ಡಾ. ವೂಡೇ ಪಿ. ಕೃಷ್ಣ ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ, ಪ್ರತಿಭಾ ಪುರಸ್ಕಾರ ವಿತರಣೆಯನ್ನು ಇಂದಿರಾ ಕೃಷ್ಣಪ್ಪ, ಗೌ॥ ಕಾರ್ಯದರ್ಶಿ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಕಾಳೇಗೌಡ, ಬಿ.ಎನ್. ಕಾಡಯ್ಯ ಡಾ. ಪೂರ್ಣಿಮಾ ಜೋಗಿ, ಟಿ.ಆರ್. ರಂಗಸ್ವಾಮಿ, ಶ್ರೀ ಡಿ.ಸಿ. ಸುರೇಶ್, ಡಾ: ಸಿಸಿರಾ, ಬಿ.ಟಿ.ಎಂ. ಲೇಔಟ್ ರೋಟರಿ ಸಂಸ್ಥೆಯ ಸುಂದರ್, ಭೀಮಾಶಂಕರ್.






ಡಾ.ಎಚ್.ಎನ್. ಶತಮಾನೋತ್ಸವ ವರ್ಷ ದಿ. 28.10.2020 ರಂದು ಗೌರಿಬಿದನೂರು, ಹೊಸೂರು ಗ್ರಾಮದ ನ್ಯಾಷನಲ್ ಹೈಸ್ಕೂಲ್ ಆವರಣದ ಅಮರಧಾಮದಲ್ಲಿರುವ ಪದ್ಮಭೂಷಣ ಶಿಕ್ಷಣ ತಜ್ಞ ಡಾ. ಎಚ್.ನರಸಿಂಹಯ್ಯ ಅವರ ಪುಣ್ಯಭೂಮಿಯಲ್ಲಿ ಮತ್ತು ಅವರ ಸ್ವಗೃಹದಲ್ಲಿ ನುಡಿ–ನಮನ. ಚಿತ್ರದಲ್ಲಿ ಇಂದಿರಾ ಕೃಷ್ಣಪ್ಪ, ಗೌ. ಕಾರ್ಯದರ್ಶಿ, ಪ್ರೊ. ನಾಗರತ್ನ, ನಿವೃತ್ತ ಪ್ರಾಂಶುಪಾಲರು, ನಾಗರಾಜಪ್ಪ, ಗೌರಿಬಿದನೂರು, ವೆಂಕಟೇಶ್, ನಿವೃತ್ತ ಉಪಾಧ್ಯಾಯರು, ಎಂ.ಎಸ್.ಪ್ರಸಾದ್, ಡಾ. ವಿ. ಪ್ರಶಾಂತ್, ಹಾಗೂ ಯುವ ಸ್ವಯಂ ಸೇವಕ ಅಭಿಲಾಶ್ ಯಾದವ್, ಪ್ರಜ್ವಲ್ .ಪಿ



ಕರ್ನಾಟಕದ ಜಲಿಯನ್ ವಾಲಾ ಬಾಗ್ ಗೌರಿಬಿದನೂರಿನ ವಿದುರಾಶ್ವತ್ಥದ ಸ್ಮಾರಕಕ್ಕೆ ಭೇಟಿ ಕ.ಗಾ.ಸ್ಮಾ. ನಿಧಿ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಪ್ರೊ ನಾಗರತ್ನ , ಪ್ರೊ. ಬಿ. ಗಂಗಾಧರ ಮೂರ್ತಿ, ನಾಗರಾಜಪ್ಪ, ಎಂ.ಎಸ್. ಪ್ರಸಾದ್, ರಾಮಕೃಷ್ಣ, ಪ್ರಶಾಂತ, ರಾ.ಯು.ಯೋ, ಹಾಗೂ ಅಭಿಲಾಶ್ ಯಾದವ್, ಪ್ರಜ್ವಲ್ ಇದ್ದರು.



ವೀರಸೌಧ ಆವರಣದಲ್ಲಿ ಕ.ಗಾಂ.ಸ್ಮಾ.ನಿ. ವತಿಯಿಂದ ಹಿರಿಯ ಸ್ವಾತಂತ್ರ್ಯ ಯೋಧರಾದ ಶ್ರೀ ಬ್ರಹ್ಮಯ್ಯ ಮತ್ತು ಶ್ರೀ ನಂಜಪ್ಪ ಅವರಿಗೆ ಗೌರವ ಸಮರ್ಪಣೆ. ಗಾಂ.ಭ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ , ಪ್ರೊ ನಾಗರತ್ನ, ಪ್ರೊ. ಬಿ. ಗಂಗಾಧರ ಮೂರ್ತಿ, ನಾಗರಾಜಪ್ಪ, ಎಂ.ಎಸ್.ಪ್ರಸಾದ್, ರಾಮಕೃಷ್ಣ, ಡಾ.ವಿ. ಪ್ರಶಾಂತ, ರಾ.ಯು.ಯೋ., ಅಭಿಲಾಶ್ ಯಾದವ್, ಪ್ರಜ್ವಲ್ ಇದ್ದರು.






ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಭಾಜನರಾದ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿ. ಅವರನ್ನು ಗಾಂಧಿ ಭವನದಲ್ಲಿ ದಿ.04.11.2020ರಂದು ಅಭಿನಂದನೆಗಳನ್ನು ಸಲ್ಲಿಸಲಾಯಿತು. ಚಿತ್ರದಲ್ಲಿ ಡಾ. ಪೂರ್ಣಿಮಾ ಜೋಗಿ, ರಾಸೇಯೋ, ಡಾ. ಗಣನಾಥಶೆಟ್ಟಿ ಎಕ್ಕಾರು, ಇಂದಿರಾ ಕೃಷ್ಣಪ್ಪ ಹಾಗು ಸಿಬ್ಬಂದಿವರ್ಗ ಚಿತ್ರದಲ್ಲಿದ್ದಾರೆ.



ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಬೆಂಗಳೂರು ಹಾಗೂ ಕೆ.ಹೆಚ್ ಪಾಟೀಲ ಪ್ರತಿಷ್ಠಾನ ಸಂಯುಕ್ತವಾಗಿ ದಿನಾಂಕ 11–11–2020ರಲ್ಲಿ ಗಾಂಧೀಜಿ ಗದಗ್ ಭೇಟಿಯ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಶಾಸಕರು ಕೆ.ಹೆಚ್ ಪಾಟೀಲ, ಮಲ್ಲೇಪುರಂ ವೆಂಕಟೇಶ್, ಬಿ.ಆರ್. ಪಾಟೀಲ್, ಡಾ. ವೂಡೇ ಪಿ. ಕೃಷ್ಣ, ಪ್ರೊ ಶಿವರಾಜುಮತ್ತು ನರೇಂದ್ರ ಸದಸ್ಯರು ಇದ್ದಾರೆ. ಪ್ರತಿಷ್ಠಾನ, ಪೂಜ್ಯ ಶ್ರೀ ನಿರ್ಭಯಾನಂದ ಸರಸ್ವತಿ ಅಧ್ಯಕ್ಷರು ರಾಮಕೃಷ್ಣ ವಿವೇಕಾನಂದ ಆಶ್ರಮ ಹಾಗೂ ವೀರಣ್ಣಮತ್ತಿಕಟ್ಟಿ ಮಾಜಿ ಸಭಾಪತಿಗಳು ಉಪಸ್ಥಿತರಿದ್ದು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ ವೂಡೇ ಪಿ ಕೃಷ್ಣ ಅವರನ್ನು ಸನ್ಮಾನಿಸಿದರು.



ದಿ. 08.10.2020 ರಂದು ಮಾನ್ಯ ರಾಜ್ಯಸಭಾ ಸದಸ್ಯರಾದ ಡಾ.ಎಲ್. ಹನುಮಂತಯ್ಯ ರವರೊಂದಿಗೆ ಚರ್ಚೆ, ಅಭಿನಂದನೆ, ಹಾಗೂ ಗಾಂಧಿಭವನದ ಪುಸ್ತಕಗಳ ಪರಿಚಯ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಡಾ.ವಿ. ಪ್ರಶಾಂತ, ಸಾಹಿತಿ ಡಾ. ರಾಮಲಿಂಗೇಶ್ವರ (ಸಿಸಿರಾ) ಹಾಗೂ ನೆಹರು ಯುವ ಕೇಂದ್ರ, ಬೆಂಗಳೂರು ನಗರ ಜಿಲ್ಲಾ ಯುವಜನ ಸಮನ್ವಯ ಅಧಿಕಾರಿ ವಿನಯ್ ಕುಮಾರ್.



2020 ನವೆಂಬರ್ 6 ರಂದು ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿ. ಅವರು ಸಮುದಾಯ ಸಂಸ್ಥೆ ಗ್ರಾಮಸೇವಾ ಸಂಘದಿಂದ ಏರ್ಪಡಿಸಿದ್ದ ತುಮಕೂರಿನ ಬಾಪುಜಿ ವಿದ್ಯಾಸಂಸ್ಥೆಯಲ್ಲಿ ಜಾಥಾ ಉದ್ಘಾಟನೆಯನ್ನು ಹಾಗೂ ಬೀದಿ ನಾಟಕ 'ಒಳಿತು ಮಾಡು ಮನುಸಾ' ಚಾಲನೆ ನೆರವೇರಿಸಿದರು, ಚಿತ್ರದಲ್ಲಿ ಹಿರಿಯ ರಂಗಕರ್ಮಿ ಪ್ರಸನ್ನ, ಸರ್ವೋದಯದ ಅಧ್ಯಕ್ಷರಾದ ನರಸಿಂಹಯ್ಯ, ಬಸವಯ್ಯನವರು ಮತ್ತೆಲ್ಲರೂ ಇದ್ದಾರೆ.



ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಬೆಂಗಳೂರು ಹಾಗೂ ಕೆ.ಹೆಚ್ ಪಾಟೀಲ ಪ್ರತಿಷ್ಠಾನ ಸಂಯುಕ್ತವಾಗಿ ದಿನಾಂಕ 11–11–2020 ರಂದು ಗದುಗಿಗೆ ಗಾಂಧೀಜಿ ಅವರ ಮೊದಲ ಭೇಟಿಯ ಶತಮಾನೋತ್ಸವ ಆಚರಣೆ ಸಂಧರ್ಭದಲ್ಲಿ ಡಿ.ಆರ್. ಪಾಟೀಲ ಅಧ್ಯಕ್ಷರು ಕೆ.ಹೆಚ್ ಪಾಟೀಲ ಪ್ರತಿಷ್ಠಾನ, ಪೂಜ್ಯ ಶ್ರೀ ನಿರ್ಭಯಾನಂದ ಸರಸ್ವತಿ ಅಧ್ಯಕ್ಷರು ರಾಮಕೃಷ್ಣ ವಿವೇಕಾನಂದ ಆಶ್ರಮ ಹಾಗೂ ವೀರಣ್ಣಮತ್ತಿಕಟ್ಟಿ ಮಾಜಿ ಸಭಾಪತಿಗಳು ಉಪಸ್ಥಿತರಿದ್ದು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ ವೂಡೇ ಪಿ ಕೃಷ್ಣ ಅವರನ್ನು ಸನ್ಮಾನಿಸಿದರು.



ಹಿರಿಯ ನಾಗರಿಕರ ದಿನಾಚರಣೆ,ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿಲ್ಲಿ ಶ್ರೀಮತಿ.ಜಯಲಕ್ಷ್ಮಮ್ಮ ನಾಗಭೂಷಣಚಾರ್ ಗೌ.ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ , ಎನ್.ಎಸ್. ಪ್ರಸಾದ್, ಗೀತಾ, ಡಾ.ವಿ. ಪ್ರಶಾಂತ, ಅಭಿಲಾಶ್ ಯಾದವ್, ಪಿ. ಸಿಂಚನ್, ಪಿ. ಸಿರಿ, ಪಿ. ಪ್ರಜ್ವಲ್.



ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬದ ಪಾತ್ರ ಹಿರಿದು




ಸಂಜೆ ವಾಣಿ

ಮಂಗಳವಾರ 10 ನವೆಂಬರ್ 2020



ನಾಡೋಜ ಪದವಿ ಪ್ರದಾನ

ಪ್ರಜಾವಾಣಿ ಬುಧವಾರ • ನವೆಂಬರ್ 11, 2020



ಹಂಪಿ ಕನ್ನಡ ವಿ..ವಿಯ ನುಡಿಹಬ್ಬದಲ್ಲಿ ಡಾ. ಹಣಮಂತ ಗೋವಿಂದಪ್ಪ ದಡ್ಡಿ ಹಾಗೂ ವೂಡೇ ಪಿ. ಕೃಷ್ಣ ಅವರಿಗೆ ಡಿಸಿಎಂ ಡಾ.ಸಿ. ಎನ್. ಅಶ್ವತ್ಥನಾರಾಯಣ ಅವರು ನಾಡೋಜ ಪದವಿ ಪ್ರದಾನ ಮಾಡಿದರು. ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್ತಿನ ನಿರ್ದೇಶಕ ಪ್ರೊ.ಎಸ್.ಸಿ. ಶರ್ಮಾ, ಕುಲಪತಿ ಪ್ರೊ.ಸ.ಚಿ. ರಮೇಶ ಹಾಗೂ ಕುಲಸಚಿವ ಪ್ರೊ. ಎ.ಸುಬ್ಬಣ್ಣ ರೈ ಇದ್ದಾರೆ

2/2

ಕನ್ನಡಪ್ರಭ

ಹಾಥ್ರಸ್ ಘಟನೆ ಖಂಡಿಸಿ ಮೌನ ಪ್ರತಿಭಟನೆ

ಶ್ರೀ ಬಸವಕಲ್ಯಾಣ ಮಠದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮ





Deccan Herald

Kannada varsity Nadoja hon[our] for Wooday Krishna, Dr Dad[di]

Only 100 invitees for convocation to be held on Nov 10

HOSAPETE (BALLARI DISTRICT), DHNS




Wooday P Krishna


Hanamanth Govindappa Daddi

ಸಂಸ್ಕೃತದ ಭವಿಷ್ಯಕ್ಕಿಂತ ಸಂಸ್ಕೃತವೇ ಭವಿಷ್ಯ

ವೆಬಿನಾರ್ ಕಾರ್ಯಕ್ರಮದಲ್ಲಿ ಡಾ|| ವೂಡೆ ಪಿ ಕೃಷ್ಣ ನುಡಿ



ಗದಗಿನಲ್ಲೊಂದು ಗಾಂಧೀಜಿಯ 'ಸಾಬರಮತಿ ಆಶ್ರಮ' ಸ್ಥಾಪನೆ!





ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

In the afternoon he chewed a pike of the dried rabbit with water. He plunged on until after sunset, when he made a bed of leaves and grass. In the morning, he went on He did not know where he was or where he was going only that he must escape. If he followed the way to where the sun rose, it should lead him back, in time, to the big canoc And then? Kunta felt a growing uncertainty and fright. He prayed often to Allah and fingered his salo.

For four days he travelled through the forest, hearing nothing but toads and birds and insects. But on the morning of the fifth day he was awakened by the sound he feared most-the baying of dogs. He sprang up and began running, then realized he had forgotten his knife. Dashing back, he searched desperately among the vines and leaves, but could not find it. Steadily the baying came closer. He Found a stone about the size of his fist and ran wildly, tripping, falling The bloodhound cornered him carly the not morning Too exhausted to run further, he waited with his back against a tree. His left hand chutched a stout branch, and his right was like a claw about the stone. The dogs stayed out of range of his makeshift club until two toubob appeared on horses. Kunta had never seen them before. They were professional slave catchers.

The older of the two men dismounted and walked towards him, a club in one hand, a whip in the other. As the toubob came closer, Kunta hurled the stone. He heard the toubob shout and saw blood running down his head.

Now both men approached him with guns and clubs. They clubbed him nearly senseless, but still he writhed and shricked as they roped him to a tree. Kunta steeled himself to be beaten to death.

To be continued...

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು



Tariff rates for Advertisement in Bapu Prapancha Kannada English Monthly Magzine

Sl.no.	Particulars	Rates (Rs)
1	Half Page (Black & White)	1,000.00
2	Full Page (Black & White)	2,000.00
3	Half Page (Extra)	2,000.00
4	Full Page (Colour)	4,000.00
5	2nd Cover Page	5,000.00
6	3rd Back Cover Page	5,000.00
7	Back Cover Page	10,000.00


RNI NO : KARBIL/2019/77950
If undelivered please return to: Hon. Secretary, Karnataka Gandhi Smaraka Nidhi, Gandhi Bhavana, Kumara Park Post, Bengaluru - 560001,Ph: 080 22261967, Email : gandhibhavanabengaluru@gmail.com

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026



ಸೋದರಿ ನಿವೇದಿತಾ : (28.10.1867 – 11.11.1911)

ಐರ್ಲೆಂಡ್‌ನಲ್ಲಿ ಜನಿಸಿದ್ದ ಮಾರ್ಗರೆಟ್ ನೋಬೆಲ್, ಭಾರತೀಯ ಆಧ್ಯಾತ್ಮದಲ್ಲಿ ಆಸಕ್ತಿ ಹೊಂದಿ ಭಾರತೀಯರ ಸೇವೆಗೆ ಅದರಲ್ಲೂ ಮಹಿಳಾ ಜಾಗೃತಿಗಾಗಿ ಅರ್ಪಿಸಿಕೊಂಡ ಧೀಮಂತ ಮಹಿಳೆ. ಸ್ವಾಮಿ ವಿವೇಕಾನಂದರ ದಿವ್ಯವಾಣಿ, ಸೇವಾನುಡಿ ಸಂದೇಶಗಳಿಂದ ಪ್ರಭಾವಿತರಾಗಿ ಅವರನ್ನೇ 'ಗುರುದೇವ' ಎಂದು ಗುರುತಿಸಿಕೊಂಡರು. ಹಿಂದೂ ಧರ್ಮವನ್ನು ಅರ್ಥೈಸಿಕೊಂಡು, ಭಾರತೀಯ ಸಮಾಜದ ಔನ್ನತ್ಯಕ್ಕಾಗಿ ಹಗಲಿರುಳೂ ಶ್ರಮಿಸಿದರು. ಸ್ವಾಮೀಜಿ ಅವರು ನಿವೇದಿತಾ ಅವರಿಗೆ ಬರೆದ ಪತ್ರದಲ್ಲಿ "ನನ್ನ ದೇಶದ ಸ್ತ್ರೀಯರಿಗೆ ವಿದ್ಯಾಭ್ಯಾಸ ಕೊಡುವ ಅಗತ್ಯ ತುಂಬಾ ಇದೆ. ಅದಕ್ಕೆ ತಕ್ಕ ಯೋಜನೆಗಳನ್ನು ಹಾಕುತ್ತಿದ್ದೇನೆ. ನಿನ್ನಿಂದ ನನಗೆ ತುಂಬಾ ಸಹಾಯವಾದೀತು. ಸಹಸ್ರಾರು ಮಹಿಳೆಯರು ಕಾಯುತ್ತಿದ್ದಾರೆ." ಎಂದು ಬರೆದರು. ಸ್ವಾಮೀಜಿ ಅವರ ಕರೆಗೆ ಓಗೊಟ್ಟು ಸಹೋದರಿ 1898, ಮಾರ್ಚ್ 25ರಂದು ಭಾರತಕ್ಕೆ ಬಂದರು. ಆಕೆಗೆ ವಿವೇಕಾನಂದರು ಬ್ರಹ್ಮಚರ್ಯ ದೀಕ್ಷೆ ನೀಡಿ 'ನಿವೇದಿತಾ' ಎಂಬ ಹೆಸರನ್ನು ಕೊಟ್ಟರು. ನಿವೇದಿತಾ ಸ್ತ್ರೀಯರ ಅನಕ್ಷರತೆ, ಅಜ್ಞಾನಗಳನ್ನು ತೊಡೆದು ಸರ್ವಾಂಗೀಣ ಉದ್ಧಾರಕ್ಕೆ ತೊಡಗಬೇಕೆಂಬ ನಿರ್ಧಾರವನ್ನು ಮನದಾಳದಿಂದ ಕೈಗೊಂಡರು. ಶಿಕ್ಷಕಿಯಾಗಿ ಕೆಲಸ ನಿರ್ವಹಿಸುತ್ತ, ಆಶ್ರಮವಾಸಿಗಳಿಗೆ ಶರೀರಶಾಸ್ತ್ರ ಮತ್ತು ಸಸ್ಯಶಾಸ್ತ್ರಗಳನ್ನು ವೈಜ್ಞಾನಿಕವಾಗಿ ಭೋದಿಸತೊಡಗಿದರು. ಸ್ವಯಂಸೇವಕರನ್ನು ಸಂಘಟಿಸಿ ಪ್ಲೇಗ್ ಪೀಡಿತ ರೋಗಿಗಳನ್ನು ಶುಶ್ರೂಷೆಗೈದರು. ಭಾರತ ಸ್ವಾತಂತ್ರ್ಯ ಆಂದೋಲನದಲ್ಲಿ ಪಾಲ್ಗೊಂಡರು. ಅಂತರಂಗದ ನಿರ್ಮಲ ಪ್ರೇಮದ ಭಾವವೇ ಮಾನವೀಯತೆ ತುಂಬಿದ ನಡೆನುಡಿಗಳು; ಅವೇ ಸತ್ಯ ಎಂಬುದರ ನಿದರ್ಶನವಾಗಿದ್ದಾರೆ ನಿವೇದಿತಾ. ಅವಿಶ್ರಾಂತವಾಗಿ ಶ್ರಮಿಸುತ್ತಿದ್ದ ನಿವೇದಿತಾ ಇಂದಿಗೂ ಡಾರ್ಜಿಲಿಂಗ್ ಸ್ಮರಣ ಸ್ಥಳದಿಂದ ಭಾರತವನ್ನು ವೀಕ್ಷಿಸುತ್ತಿದ್ದಾರೆ.



ಫಿಯಡೂರ್ ಡೊಸ್ಟೊವಿಸ್ಕಿ : (11.11.1821 – 09.02.18181)

ಮಾಸ್ಕೋದಲ್ಲಿ ಜನಿಸಿದ ಫಿಯಡೂರ್ ಚಿಕ್ಕ ವಯಸ್ಸಿನಲ್ಲಿ ಕಾಲ್ಪನಿಕ ಕಥೆಗಳು ಮತ್ತು ದಂತಕಥೆಗಳ ಮೂಲಕ ಸಾಹಿತ್ಯಕೃಷಿ ಆರಂಭಿಸಿದ. 15 ನೇ ವಯಸ್ಸಿಗೇ ಶಾಲೆಯನ್ನು ತೊರೆದು ನಿಕೊಲೇವ್ ಮಿಲಿಟರಿ ಎಂಜಿನಿಯರಿಂಗ್ ಇನ್ಸಿಟಿಟ್ಯೂಟ್‌ಗೆ ಪ್ರವೇಶಿಸಿದನು. ಪುಸ್ತಕಗಳನ್ನು ಭಾಷಾಂತರಿಸುವುದರ ಜೊತೆಗೆ 1840ರಲ್ಲಿ ಮೊದಲ ಕಾದಂಬರಿ 'ಪಾಪರ್ ಫೋಕ್' ಬರೆದರು. ಇದು ಸೇಂಟ್ ಪೀಟರ್ಸ್ ಬರ್ಗ್‌ನ ಸಾಹಿತ್ಯ ವಲಯದಲ್ಲಿ ಸ್ಥಾನ ಪಡೆಯಿತು. 1849ರಲ್ಲಿ ನಿಷೇಧಿತ ಗ್ರಂಥಗಳ ಸಾಹಿತ್ಯದ ಬಗ್ಗೆ ಚರ್ಚಿಸಿದ ಆರೋಪದ ಮೇಲೆ ಬಂಧಿತನಾಗಿ ಮರಣದಂಡನೆಗೆ ಗುರಿಯಾದರು. ಆದರೆ ಕೊನೆಯ ಕ್ಷಣದಲ್ಲಿ ಶಿಕ್ಷೆಯ ಪ್ರಮಾಣವನ್ನು ಕಡಿತಗೊಳಿಸಿ ಸೈಬೀರಿಯನ್ ಜೈಲಿನಲ್ಲಿ ನಾಲ್ಕು ವರ್ಷಗಳನ್ನೂ ಆರು ವರ್ಷಗಳ ಕಡ್ಡಾಯ ಮಿಲಿಟರಿ ಸೇವೆ ಅನುಭವಿಸಬೇಕಾಯಿತು. ನಂತರ ಡೊಸ್ಟೊವಿಸ್ಕಿ ಪತ್ರಕರ್ತನಾಗಿ ಕೆಲಸ ನಿರ್ವಹಿಸುತ್ತಾ ಹಲವಾರು ನಿಯತಕಾಲಿಕಗಳನ್ನು ತಂದರು. 'ದಿ ರೈಟರ್ ಡೈರಿ', ಅವರ ಬರಹಗಳ ಸಂಗ್ರಹವನ್ನು ಪ್ರಕಟಿಸುತ್ತಾರೆ. ರಷ್ಯನ್ ಸೇರಿದಂತೆ ಅನೇಕ ತತ್ವಜ್ಞಾನಿಗಳು ಮತ್ತು ಲೇಖಕರಾದ ಪುಷ್ಕಿನ್, ಗೋಗೋಲ್, ಆಗಸ್ಟಿನ್, ಶೇಕ್ಸ್‌ಪಿಯರ್, ಡಿಕನ್ಸ್, ಬಾಲ್ಜಾಕ್, ಲೆರ್ಮೊಂಟೋವ್, ಹ್ಯೂಗೊ, ಪೊಯೆ, ಪ್ಲೇಟೋ, ಸೆರ್ವಂಟೆಸ್, ಹರ್ಜೆನ್, ಕಾಂಟ್, ಬೆಲಿನ್‌ಸ್ಕಿ, ಹೆಗೆಲ್, ಶಿಲ್ಲರ್, ಸೊಲೊವ್ಯೊವ್, ಬಾಕುನಿನ್, ಸ್ಯಾಂಡ್, ಹಾಫ್‌ಮನ್ ಮತ್ತು ಮಿಕಿವಿಕ್ಸ್ ಅವರ ಪ್ರಭಾವಕ್ಕೊಳಗಾಗಿ ಅವರ ಸಾಹಿತ್ಯಜ್ಞಾನದಿಂದ ಅನೇಕ ಕೃತಿಗಳನ್ನು ರಚಿಸಿದರು. ಅವರ ಬರಹಗಳು ರಷ್ಯಾ ಮತ್ತೆಲ್ಲ ರಾಷ್ಟ್ರಗಳಲ್ಲಿ ಪ್ರಸಿದ್ಧವಾದವು. ಇವರು ರಚಿಸಿದ ಕೃತಿಗಳು 170ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದವಾಗಿವೆ..



ಸರ್ ಸಿ.ವಿ.ರಾಮನ್ : (07.11.1888 – 21.11.1970)

ನೋಬೆಲ್ ಪುರಸ್ಕೃತ ಪ್ರಪ್ರಥಮ ಭಾರತೀಯ ವಿಜ್ಞಾನಿ. ತಮಿಳುನಾಡುನ ತಿರುಚಿನಾಪಳ್ಳಿಯಲ್ಲಿ ಚಂದ್ರಶೇಖರ್ ಮತ್ತು ಪಾರ್ವತಿ ಅಮ್ಮಾಳ್ ದಂಪತಿಗಳ ಮಗನಾಗಿ ರಾಮನ್ ಜನಿಸಿದರು. ಭಾರತೀಯ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಲ್ಕತ್ತೆಯಲ್ಲಿ, ಡೆಪ್ಯುಟಿ ಅಕೌಂಟೆಂಟ್ ಜನರಲ್ ಆಗಿ ವೃತ್ತಿ-ಜೀವನ ಆರಂಭಿಸಿದರು, ವಿದ್ಯಾರ್ಥಿಯಾಗಿದ್ದಾಗ ವೈಜ್ಞಾನಿಕ ಪ್ರಯೋಗಗಳಲ್ಲಿ ತೋರುತ್ತಿದ್ದ ಆಸಕ್ತಿಯನ್ನು ಅವರು ವೃತ್ತಿನಿರತರಾಗಿದ್ದಾಗಲೂ ಮುಂದುವರಿಸಿದರು. ಭೌತಶಾಸ್ತ್ರದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ 'ಲಂಡನಿನ ಫೆಲೊ ಆಫ್ ರಾಯಲ್ ಸೊಸೈಟಿ'ಗೆ ಆಯ್ಕೆಯಾದರು. ಆಕಾಶದ ನೀಲಿ ಬಣ್ಣ ಏಕೆ ಎಂಬ ಪ್ರಶ್ನೆ ರಾಮನ್‌ರನ್ನು ಮೊದಲಿನಿಂದಲೂ ಕಾಡುತ್ತಿತ್ತು. ವಿದೇಶ ಪ್ರಯಾಣದಲ್ಲಿದ್ದಾಗ ಕಡಲಿನ ನೀಲಿ ಬಣ್ಣದ ಕಾರಣವನ್ನು ಅರಿಯಲು ಪ್ರಯೋಗ ಮಾಡುತ್ತ ಹಡಗಿನ ತುಂಬ ಓಡಾಡುತ್ತಿದ್ದರು. ಆಕಾಶದ ನೀಲಿ ಬಣ್ಣ ರಾಮನ್‌ರ ಕುತೂಹಲ ಕೆರಳಿಸಿ ಪ್ರಯೋಗಕ್ಕೆ ತೊಡಗಿಸಿತು. ವಾತಾವರಣದಲ್ಲಿಯ ಧೂಳಿನ ಕಣಗಳು ಬೆಳಕನ್ನು ಭಾಗಶಃ ಚದುರಿಸುವವು. ಹೀಗೆ ಬೆಳಕು ಚದುರಿದಾಗ, ಅದರ ಎಲ್ಲ ಬಣ್ಣಗಳೂ ಚದುರುವುವು. ಹೆಚ್ಚು ಚದುರದ ಕೆಂಪುಬೆಳಕು ದಿಗಂತದ ಸಮೀಪ ಸೂರ್ಯಕಾಣುವ ಪ್ರದೇಶದಲ್ಲಿ ಪ್ರಜ್ವಲಿಸುವುದು. ಉಳಿದವು ಆಕಾಶಕ್ಕೆ ನೀಲಿ ಬಣ್ಣವನ್ನು ನೀಡುವುದು ಎಂದು ವಿವರಿಸಿದರು. ಇದು "ರಾಮನ್ ಎಫೆಕ್ಟ್" ಎಂದು ಪ್ರಖ್ಯಾತಿ ಪಡೆಯಿತು. ಪ್ರೊ. ರಾಮನ್, ಬೆಂಗಳೂರಿನಲ್ಲಿ "ರಾಮನ್ ರಿಸರ್ಚ್ ಇನ್ಸಿಟಿಟ್ಯೂಟ್" ಎಂಬ ವಿಜ್ಞಾನ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿದರು ಮತ್ತು ಅಲ್ಲಿಯೇ ಬಹಳಷ್ಟು ಸಂಶೋಧನೆಗಳನ್ನು ಮಾಡಿದರು. ಇದು ಭಾರತದ ಭೌತಶಾಸ್ತ್ರದ ಅತ್ಯಂತ ಪ್ರಮುಖ ಸಂಶೋಧನ ಸಂಸ್ಥೆಯಾಗಿದೆ.

ಇವರಿಗೆ,

Printed and Published ... alf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049